ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ – ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಪ್ರಕರಣದ ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ ಹಂಪಿಗೆ ಎಂ. ಫಿಲ್. ಪದವಿಗಾಗಿ
(ಅಭಿವೃದ್ಧಿ ಅಧ್ಯಾಯ ಸಾದರ ಪಡಿಸಿದ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಶಂಕರ

ನೋಂದಣಿ ಸಂಖ್ಯೆ: KTSMDS-00620

ಮಾರ್ಗದರ್ಶಕರು
ಡಾ. ದುಗ್ಗಪ್ಪ ಕಜೇಕರ್
ಸಾಮಾಜಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು
ತೆಂಕನಿಡಿಯೂರು. ಉಡುಪಿ

2013

ಕರ್ನಾಟಕ ತಿಯೋಲೊಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು – 575 001

1087

ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ–ಸಹಾಯ ಸಂಘಗಳ ಪಾತ್ರ – ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಪ್ರಕರಣದ ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ ಹಂಪಿಗೆ ಎಂ. ಫಿಲ್. ಪದವಿಗಾಗಿ
(ಅಭಿವೃದ್ಧಿ ಅಧ್ಯಾಯ ಸಾದರ ಪಡಿಸಿದ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ಶಂಕರ
ನೋಂದಣಿ ಸಂಖ್ಯೆ: KTSMDS–00620

ಮಾರ್ಗದರ್ಶಕರು
ಡಾ. ದುಗ್ಗಪ್ಪ ಕಜೇಕರ್
ಸಾಮಾಜಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು
ತೆಂಕನಿಡಿಯೂರು, ಉಡುಪಿ

೨೦೧೩

ಕರ್ನಾಟಕ ತಿಯೋಲೊಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು – ೫೭೫ ೦೦೧

ಯೋಗ್ಯತಾ ಪತ್ರ

ಶಂಕರ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ – ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಪ್ರಕರಣದ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ. ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಈ ಸಂಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ.

ದಿನಾಂಕ: ೧೫.೭.೨೦೧೩

ಸ್ಥಳ: ಮಂಗಳೂರು

ಡಾ. ದುಗ್ಗಪ್ಪ ಕಜೇಕರ್

ಸಂಶೋಧನಾ ಮಾರ್ಗದರ್ಶಕರು

Dr. DUGGAPPA KAJEKAR
Co-Ordinator
Dept. of P.G. Studies in Social Work
Govt. First Grade College &
Centre for P.G. Studies
Thenkanidiyur, UDUPI

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾನಿಲಯ, ಹಂಪಿಗೆ ಎಂ. ಫಿಲ್. ಪದವಿಗಾಗಿ ಸಾದರಪಡಿಸಿದ **"ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ – ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಪ್ರಕರಣದ ಅಧ್ಯಯನ"** ಎಂಬ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತು ಅಧ್ಯಯನದ ಫಲಶೃತಿಯಾಗಿದೆ. ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ **ಡಾ. ದುಗ್ಗಪ್ಪ ಕಜೇಕರ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವು ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕ: ೧೫.೭.೨೦೧೩ — ಶಂಕರ

ಸ್ಥಳ: ಮಂಗಳೂರು — ಸಂಶೋಧಕರು

ಅಧ್ಯಯನದ ವಿವರಗಳು

ಕೋಷ್ಟಕಗಳ ಪಟ್ಟಿ

ಅಧ್ಯಾಯ ೧: ಸ್ವ-ಸಹಾಯ ಗುಂಪು

೧.೧ ಉದ್ದೇಶ

೧.೨ ವ್ಯಾಖ್ಯೆ

೧.೩ ಮಹತ್ವ

೧.೪ ವಿಧಗಳು

೧.೫ ಅಧ್ಯಯನದ ಗುರಿ, ಉದ್ದೇಶ, ವ್ಯಾಪ್ತಿ

೧.೬ ಪ್ರಮೇಯಗಳು

೧.೭ ದತ್ತಾಂಶಗಳ ಸಂಗ್ರಹಣ ವಿಧಾನ

ಅಧ್ಯಾಯ ೧: ಸ್ವ–ಸಹಾಯ ಗುಂಪು

ಪೀಠಿಕೆ

೨೦೦೧ನೇ ವರ್ಷವನ್ನು ಸರಕಾರವು ಮಹಿಳಾ ಸಬಲೀಕರಣ ವರ್ಷವೆಂದು ಘೋಷಿಸಿ ಮಹಿಳೆಯರ ಬಲವರ್ಧನೆಗೆ ಅನೇಕ ಮಾರ್ಗೋಪಾಯಗಳನ್ನು ಸೂಚಿಸಿತ್ತು. ಅದರ ಮೂಲಕ ಸ್ವ-ಸಹಾಯ ಗುಂಪುಗಳು (Self help group) ರಚನೆಯಾಯಿತು. ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಬಡವರು ರಚಿಸಿಕೊಳ್ಳುವ ಪುಟ್ಟ ತಂಡಗಳಿಗೆ ಸ್ವ–ಸಹಾಯ ಗುಂಪುಗಳೆಂದು ಹೆಸರು.

ವ್ಯಾಖ್ಯೆ

"ಸ್ವ–ಸಹಾಯ ಗುಂಪು ಎಂದರೆ, ಒಂದು ವಸತಿ ಸ್ಥಳದ, ನಗರ ಮತ್ತು ಹಳ್ಳಿ ಪ್ರದೇಶದ ಕನಿಷ್ಠ ಗುಂಪೊಂದನ್ನು ರಚಿಸಿ, ಅದು ಸದಸ್ಯರ ಏಳಿಗೆಗಾಗಿ, ಆರ್ಥಿಕ ಬೆಳವಣಿಗೆಗೆ ಮತ್ತು ಸಾಮಾಜಿಕ ಬದಲಾವಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಮಾಡುವುದಾಗಿದೆ".

ಸ್ವ–ಸಹಾಯ ಗುಂಪುಗಳ ರಚನೆ ಮತ್ತು ದಕ್ಷ ಕಾರ್ಯಾಚರಣೆಯ ಮೂಲಕ ಬಡವರನ್ನು, ಮಹಿಳೆಯರನ್ನು, ದುರ್ಬಲವರ್ಗದವರನ್ನು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಲ್ಲಿ ಪರಿಚಯಿಸುವುದು ಮತ್ತು ಸಂಘಟಿಸುವುದು.

ಸ್ವ–ಸಹಾಯ ಗುಂಪುಗಳನ್ನು ಒಂಭತ್ತನೇಯ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದಿನ ಡ್ವಾಕ್ರಾ ಯೋಜನೆಗೆ ಬದಲಾಗಿ ಜಾರಿಗೊಳಿಸಲಾಯಿತು. ಈ ಸಂಘಟನೆಯು ಮಹಿಳಾ ಸಬಲೀಕರಣಕ್ಕೆ ಗುರುತರವಾದ ಕೊಡುಗೆ ನೀಡುವುದು ಸಾಧ್ಯವೆಂದು ತಿಳಿದ ವಿಶ್ವಬ್ಯಾಂಕು ಕೂಡಾ ಮಹಿಳಾ ಸಂಘಗಳ ರಚನೆ, ಬೆಳವಣಿಗೆ ಮತ್ತು ಕಾರ್ಯಾಚರಣೆಯನ್ನು ಉತ್ತೇಜಿಸಲು ನೆರವು ನೀಡುತ್ತಿದೆ.

ಸ್ವ–ಸಹಾಯ ಗುಂಪುಗಳು ಕೆಲವು ಸೂತ್ರಗಳನ್ನು ಒಳಗೊಂಡಿದೆ ಅವುಗಳೆಂದರೆ

- ಸ್ವ–ಸಹಾಯ (ಸ್ವಂತ ದುಡಿಮೆ) ಮತ್ತು ಪರಸ್ಪರ ಸಹಾಯ ಪರಿಕಲ್ಪನೆಗಳನ್ನು ತಳಹದಿಯಾಗಿ ಹೊಂದಿದೆ.

- ಸ್ವ-ಸಹಾಯ ಸಂಘಗಳು ಪ್ರಜಾಸತ್ತಾತ್ಮಕ ಸೂತ್ರವನ್ನು ಆದರಿಸಿದೆ. ಪ್ರತಿವಾದ ಮತ್ತು ಪ್ರತಿ ತಿಂಗಳೂ ಎಲ್ಲಾ ಸದಸ್ಯರು ಸಭೆ ಸೇರಿ ಗುಂಪಿನ ಚಟುವಟಿಕೆಗಳನ್ನು ಪರಾಮರ್ಶಿಸುವುದು.

- ಸಾಮಾನ್ಯವಾಗಿ ಸಮಾನ ಸಾಮಾಜಿಕ-ಆರ್ಥಿಕ ಆಸಕ್ತಿ ಉದ್ದೇಶವಿರುವ ಮಹಿಳೆಯರು ಮತ್ತು ಪುರುಷರು ೧೦ರಿಂದ ೨೦ ಮಂದಿಯ ಸ್ವ-ಸಹಾಯ ಗುಂಪುಗಳನ್ನು ರಚಿಸಿಕೊಳ್ಳಬಹುದು.

- ಎಲ್ಲಾ ಸದಸ್ಯರು ಪ್ರಾರಂಭದಿಂದ ನಿರ್ದಿಷ್ಟ ಮೊತ್ತವನ್ನು ತಮ್ಮ ಪಾಲಿನ ಉಳಿತಾಯವಾಗಿ ಗುಂಪಿನ ಸಾಮಾನ್ಯ ನಿಧಿಗೆ ನೀಡಬೇಕು.

- ಉಳಿತಾಯದ ಹಣವನ್ನು ವಾಣಿಜ್ಯ ಅಥವಾ ಸಹಕಾರಿ ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆದು ಠೇವಣಿ ಇಡುವುದು.

- ಸ್ವ-ಸಹಾಯ ಗುಂಪಿನ ಸಾಮಾನ್ಯ ನಿಧಿಯಿಂದ ಸರ್ವಸದಸ್ಯರ ಅನುಮೋದನೆಯೊಂದಿಗೆ ಸದಸ್ಯರಿಗೆ ನಿರ್ದಿಷ್ಟ ಮೊಬಲಗನ್ನು ಸಾಲವಾಗಿ ನೀಡಬಹುದು.

- ಇಂತಹಾ ಸಾಲವನ್ನು ಆಂತರಿಕ ಸಾಲ ಎಂದು ಕರೆಯಬಹುದು.

- ಸ್ವ-ಸಹಾಯ ಗುಂಪಿನ ಆರು ತಿಂಗಳ ಕಾಲಾವಧಿಯ ಪರಾಮರ್ಶೆ ಆಧಾರದಲ್ಲಿ ಗುಂಪಿನ ಸಾಮಾನ್ಯ ನಿಧಿಯನ್ನು ಠೇವಣಿಯಿರಿಸುವ ಬ್ಯಾಂಕು ಠೇವಣಿ ಮೊತ್ತದ ೪-೫ ಪಟ್ಟು ಸಾಲವನ್ನು ಸಂಬಂಧಿಸಿದ ಸ್ವ-ಸಹಾಯ ಗುಂಪಿಗೆ ಕೋರಿಕೆ ಮೇರೆಗೆ ನೀಡಬಹುದು.

- ಪ್ರಾಯೋಜಿತ ಬ್ಯಾಂಕು ಕಾಲದಿಂದ ಕಾಲಕ್ಕೆ ಸ್ವ-ಸಹಾಯ ಗುಂಪುಗಳ ಕಾರ್ಯಚರಣೆಯನ್ನು ಪರಾಮರ್ಶಿಸಿ ಸೂಕ್ತ ಮಾರ್ಗದರ್ಶನ ನೀಡುತ್ತದೆ.

- ಸ್ವ-ಸಹಾಯ ಗುಂಪುಗಳು ತಮ್ಮ ಸದಸ್ಯರಿಗೆ ಯಾವುದೇ ಖಾತ್ರಿ/ಭದ್ರತೆಯಿಲ್ಲದೆ ಸಾಲವನ್ನು ನೀಡುತ್ತದೆ.

- ಸ್ವ-ಸಹಾಯ ಗುಂಪುಗಳನ್ನು ಪುರುಷರು ಮತ್ತು ಮಹಿಳೆಯರು ಯಾರು ಬೇಕಾದರೂ ರಚಿಸಬಹುದು.

ವಿಶ್ವಬ್ಯಾಂಕಿನ ಪರಿಭಾಷೆಯಲ್ಲಿ ಹೇಳುವುದಾದರೆ, ಸ್ವ-ಸಹಾಯ ಸಂಘಗಳು ಮೈಕ್ರೊ ಫೈನಾನ್ಸ್ ಸಂಸ್ಥೆಗಳಾಗಿವೆ. ಸ್ವ-ಉದ್ಯೋಗ ಉತ್ತೇಜಿಸುತ್ತಾ ಬಡವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವುದು. ಸ್ವ-ಸಹಾಯ ಸಂಘಗಳು ತಮ್ಮ ಗಳಿಕೆಯಿಂದ ಕೆಲವು ಸಾಧನೆಗಳನ್ನು ಮಾಡುತ್ತಿರುವುದು ಅನೇಕ ರಾಜ್ಯಗಳಲ್ಲಿ ಕಂಡು ಬಂದಿದೆ.

- ತಮ್ಮ ಗಳಿಕೆಯಿಂದ ಕುಟುಂಬದ ಆಹಾರ ಸುರಕ್ಷೆಯನ್ನು ಉತ್ತಮ ಪಡಿಸಿದ್ದಾರೆ.
- ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಹಣ ಖರ್ಚು ಮಾಡುತ್ತಿದ್ದಾರೆ.
- ಕುಟುಂಬದ ವಸತಿ, ವಿದ್ಯುದೀಕರಣ, ಕುಡಿಯುವ ನೀರು ಪೂರೈಕೆ, ಶೌಚಾಲಯ ನಿರ್ಮಾಣ ಮುಂತಾದವುಗಳಲ್ಲಿ ಹಣ ತೊಡಗಿಸಿಕೊಂಡಿದ್ದಾರೆ.
- ಸ್ವ-ಸಹಾಯ ಗುಂಪುಗಳು ಸಾಮಾಜಿಕ ಬದಲಾವಣೆಗಳನ್ನು ಹುಟ್ಟು ಹಾಕಲು ಪ್ರೇರಕ ಶಕ್ತಿಯಾಗಿದೆ.
- ಸ್ವ-ಸಹಾಯ ಗುಂಪುಗಳು ಸಾಮಾಜಿಕ ಅನಿಷ್ಠಗಳ ವಿರುದ್ಧ ಹೋರಾಟ ಪ್ರಾರಂಭಿಸಿವೆ.
- ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಹೊರ ಜಗತ್ತಿನ ಅರಿವನ್ನು ನೀಡುತ್ತಿವೆ.
- ಸ್ವ-ಸಹಾಯ ಸಂಘಗಳಿಂದ ಸ್ಥಳೀಯ ಸರ್ಕಾರಗಳ ಕಾರ್ಯಚರಣೆಯನ್ನು ಉತ್ತಮ ಪಡಿಸಲು ಸಾಧ್ಯವಿದೆ.

ಸ್ವ-ಸಹಾಯ ಗುಂಪುಗಳ ಪ್ರಮುಖ ಉದ್ದೇಶಗಳು

ಸ್ವ-ಸಹಾಯ ಗುಂಪುಗಳು ಎಂದರೆ, ಸ್ವಂತ ಮನೋಭಾವದಿಂದ ಒಂದು ಗುಂಪನ್ನು ಕಟ್ಟಿಕೊಂಡು ಉಳಿತಾಯದ ಮನೋಭಾವನೆಯನ್ನು ಬೆಳೆಸುವುದು ಎಂದು ಅರ್ಥ. ಅದರ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ:

- ಉಳಿತಾಯ ಪ್ರವೃತ್ತಿಯ ಉತ್ತೇಜನ: ಭಾರತದಲ್ಲಿ ಪುರುಷರ ಉಳಿತಾಯದ ಪ್ರವೃತ್ತಿ ತೀರಾ ಕಡಿಮೆ. ಮಹಿಳೆಯರಲ್ಲಿ ಉಳಿತಾಯದ ಭಾವನೆ ಹೆಚ್ಚು. ಅದಕೋಸ್ಕರ ಉಳಿತಾಯ ಪ್ರವೃತ್ತಿಯನ್ನು ಇನ್ನೂ ಉದ್ಧೀಪನಗೊಳಿಸಿ, ಉಳಿತಾಯ ಭಾವನೆಯನ್ನು ಹೆಚ್ಚಿಸುವುದು ಸ್ವ-ಸಹಾಯ ಸಂಘಗಳ ಮುಖ್ಯ ಉದ್ದೇಶ.

- ಸಾಲ ದೊರಕಿಸಿ ಕೊಡುವುದು: ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ತಮ್ಮ ಅನಾರೋಗ್ಯ, ಸಮಾರಂಭ, ಹಬ್ಬ-ಹರಿದಿನ, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿಗಳಿಗೆ ತುರ್ತು ಸಾಲದ ಅಗತ್ಯವಿರುತ್ತದೆ. ಈ ಸ್ವ-ಸಹಾಯ ಗುಂಪುಗಳು ಸಾಲ ದೊರಕಿಸಿ ಕೊಡಲು ನೆರವಾಗುತ್ತದೆ.

- ಸದಸ್ಯರಲ್ಲಿ ಸಮಾನತೆಯ ಭಾವನೆ: ಸ್ವ-ಸಹಾಯ ಗುಂಪುಗಳು ಬಹುತೇಕವಾಗಿ ಬಡತನ ರೇಖೆಯ ಕೆಳಗಿರುವ ಜನರು ರಚಿಸಿಕೊಳ್ಳುತ್ತಾರೆ. ಅವರಲ್ಲಿ ಸಾಮಾಜಿಕ ಅಸಮಾನತೆಯಿರುತ್ತದೆ. ಗುಂಪುಗಳು ರಚಿಕೊಂಡು ವಾರಕ್ಕೊಮ್ಮೆ ಸೇರುವುದರಿಂದ ಅವರ ನಡುವೆ ಜಾತಿ ವ್ಯತ್ಯಾಸಗಳು ಮಾಯವಾಗಿ ನಾವೆಲ್ಲರೂ ಒಂದೇ ಎಂಬ ಭಾವನೆ ಅವರಲ್ಲಿ ಮೂಡತ್ತದೆ.

- ಸದಸ್ಯರು ಪರಸ್ಪರ ಸಹಕಾರ ನೀಡುವುದರ ಮೂಲಕ ಸ್ವಾರ್ಥವನ್ನು ಹೋಗಲಾಡಿಸಿ, ಸಹಕಾರದಿಂದ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಯನ್ನು ಸದಸ್ಯರು ಸಾಧಿಸುವಂತೆ ನೋಡಿಕೊಳ್ಳುವುದು ಸ್ವ-ಸಹಾಯ ಗುಂಪುಗಳು ಮುಖ್ಯ ಉದ್ದೇಶವಾಗಿರುತ್ತದೆ.

- ಬಡವರನ್ನು ಪ್ರಗತಿಗೊಳಿಸುವುದು ಸ್ವ-ಸಹಾಯ ಗುಂಪುಗಳ ಉದ್ದೇಶ. ಅಸಂಘಟಿತ ಕ್ಷೇತ್ರದಲ್ಲಿರುವ, ಕೃಷಿ ಕೂಲಿಕಾರರು, ಬೀಡಿಕಟ್ಟುವವರು, ಭೂರಹಿತ, ಮಹಿಳಾ ಕಾರ್ಮಿಕರ ಪರಿಸ್ಥಿತಿಯನ್ನು ಸುಧಾರಿಸಿ, ಅವರನ್ನು ಪ್ರಗತಿಯ ಮಾರ್ಗಕ್ಕೆ ಕರೆದುಕೊಂಡು ಹೋಗುವುದು ಸ್ವ-ಸಹಾಯ ಗುಂಪುಗಳ ಮುಖ್ಯ ಉದ್ದೇಶ.

- ಸರಕಾರಿ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸ್ವ-ಸಹಾಯ ಗುಂಪುಗಳು ಪ್ರೇರಕ ಶಕ್ತಿಯಾಗಿದೆ. ನಿರುದ್ಯೋಗ ಮತ್ತು ಬಡತನ ನಿವಾರಣೆಗಾಗಿ ಸರಕಾರವು ಹಮ್ಮಿಕೊಂಡಿರುವಂತಹಾ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವುದು.

ಅಲ್ಲದೆ ಬಡತನ ರೇಖೆಗಿಂತ ಕೆಳಗಿನವರನ್ನು ಮೇಲೆತ್ತುವ ಸರಕಾರದ ಉದ್ದೇಶಕ್ಕೆ ಪೂರಕವಾಗಿ ಸ್ವ-ಸಹಾಯ ಗುಂಪುಗಳು ಸ್ಪಂದಿಸುತ್ತವೆ.

- ನಾಯಕತ್ವದ ಗುಣಗಳನ್ನು ಸದಸ್ಯರಲ್ಲಿ ಮೂಡಿಸುವುದು ಸ್ವ-ಸಹಾಯ ಗುಂಪುಗಳ ಇನ್ನೊಂದು ಉದ್ದೇಶ. ವಾರಕ್ಕೊಮ್ಮೆ, ತಿಂಗಳಿಗೊಮ್ಮೆ, ಸಭೆ-ಸಮಾರಂಭಗಳನ್ನು ಮಾಡುವುದರಿಂದ ಸದಸ್ಯರಲ್ಲಿ ನಾಯಕತ್ವ ಗುಣ ಬೆಳೆಯಲು ಸಹಕಾರಿಯಾಗಿದೆ.

- ಸದಸ್ಯರಲ್ಲಿ ಜೀವನ ಮೌಲ್ಯಗಳನ್ನು ಸಂರಕ್ಷಿಸುವುದು ಗುಂಪಿನ ಮುಖ್ಯ ಉದ್ದೇಶವಾಗಿರುತ್ತದೆ. ಕುಡಿತ, ಜೂಜು, ಸ್ವಾಭಿಮಾನತೆ ಕೊರತೆ, ಜನರ ಮಧ್ಯೆ ಕಂದರ ನಿರ್ಮಿಸುವುದು. ಪುರೋಹಿತಶಾಹಿ, ಶಕ್ತಿಗಳಿಂದ ಪ್ರಚೋದನೆಗೆ ಒಳಗಾಗಿ ಕೋಮುಗಲಭೆ ಎಬ್ಬಿಸುವುದು, ಇವುಗಳನ್ನು ತ್ಯಜಿಸಿ ಸಮಾನತೆ ಭಾವನೆಯಿಂದ, ಶುದ್ಧ ಮನುಷ್ಯರಾಗಿ ಜೀವನ ನಡೆಸಲು ಸ್ವ-ಸಹಾಯ ಗುಂಪುಗಳು ಸಹಕಾರಿಯಾಗಿವೆ.

ಸ್ವ-ಸಹಾಯ ಸದಸ್ಯರಾಗಲು ಅರ್ಹತೆಗಳು

- ೧೮ ರಿಂದ ೬೦ರವರೆಗಿನ ವಯಸ್ಸಿನವರು ಸದಸ್ಯರಾಗಬಹುದು.

- ಬಡತನ ರೇಖೆಯ ಕೆಳಗಿನವವರು ಮತ್ತು ಇತರರು ಸ್ವ-ಸಹಾಯ ಗುಂಪುಗಳ ಸದಸ್ಯರಾಗಲು ಅರ್ಹರು.

- ಒಬ್ಬ ವ್ಯಕ್ತಿ ಒಂದು ಗುಂಪಿನ ಸದಸ್ಯನಾಗಲು ಮಾತ್ರ ಅರ್ಹತೆಯನ್ನು ಹೊಂದಿರುತ್ತಾನೆ.

- ಪ್ರತಿಯೊಬ್ಬ ಸದಸ್ಯನಿಗೆ ಸದಸ್ಯತ್ವ ಶುಲ್ಕ ಕನಿಷ್ಠ ೧೦ ರೂಪಾಯಿಯಾಗಿರುತ್ತದೆ.

- ಸ್ವ-ಸಹಾಯ ಗುಂಪಿನ ಸದಸ್ಯರ ಸಭೆ ತಿಂಗಳಿಗೆ ಕನಿಷ್ಠ ೫ ಮತ್ತು ವರ್ಷಕ್ಕೆ ಗರಿಷ್ಠ ೪೦ ಆಗಿರುತ್ತದೆ.

- ಸದಸ್ಯರು ವಾರಕ್ಕೊಮ್ಮೆ ಸಭೆ ಸೇರಬೇಕು. ತಪ್ಪಿದಲ್ಲಿ ತಿಂಗಳಿಗೆ ಒಮ್ಮೆ ಖಂಡಿತ ಸಭೆ ಸೇರಲೇಬೇಕು.

- ಸದಸ್ಯರು ತಿಂಗಳಿಗೆ ೩೦ ರೂ. ಉಳಿತಾಯ ಮಾಡಿ ಗುಂಪಿನ ಹೆಸರಲ್ಲಿ ಬ್ಯಾಂಕಿನಲ್ಲಿ ಉಳಿತಾಯ ಮಾಡಬೇಕು.

- ಸಂಘದ ಸದಸ್ಯರಿಗೆ ಆರು ತಿಂಗಳ ನಂತರ ಆಂತರಿಕ ಸಾಲ ಪಡೆಯಲು ಅರ್ಹರಾಗಿರುತ್ತಾರೆ.

- ಸಂಘದ ಸದಸ್ಯರಿಗೆ ಒಂದು ವರ್ಷದ ಬಳಿಕ ಮಾತ್ರ ನೇರಸಾಲ ಪಡೆಯಲು ಆರ್ಹತೆ ಇರುತ್ತದೆ.

- ಪ್ರತೀ ವರ್ಷಕ್ಕೊಮ್ಮೆ ಸಂಘದ ಕಾರ್ಯದರ್ಶಿ ಮತ್ತು ಅಧ್ಯಕ್ಷರ ಬದಲಾವಣೆಗೆ ಸಿದ್ಧರಿರಬೇಕಾಗುತ್ತದೆ. ಗುಂಪಿನ ಎಲ್ಲಾ ಸದಸ್ಯರು ಸೇರಿ ಕಾರ್ಯಕಾರಿ ಸಮಿತಿಯನ್ನು ರಚಿಸಬೇಕು.

ಸ್ವ-ಸಹಾಯ ಗುಂಪುಗಳ ಕಾರ್ಯಗಳು

೨೦೦೧ರ ನಂತರ ಪ್ರಾರಂಭವಾದ ಸ್ವ-ಸಹಾಯ ಗುಂಪುಗಳಲ್ಲಿ ಶೇಕಡ ೭೦ರಿಂದ ೮೦ರಷ್ಟು ಗುಂಪುಗಳು ಮಹಿಳಾ ಸ್ವ-ಸಹಾಯ ಗುಂಪುಗಳಾಗಿವೆ. ಮುಖ್ಯವಾಗಿ ಸ್ವ-ಸಹಾಯ ಸಂಘಗಳು ಜನರ ಆರ್ಥಿಕ ಸ್ಥಿತಿಗತಿಯನ್ನು ಉತ್ತಮಪಡಿಸಿ, ಉಳಿತಾಯ ಮನೋಭಾವನೆಯನ್ನು ಹೆಚ್ಚಿಸಲು ಸಹಾಯಕವಾಗಿದೆ. ಈ ಸ್ವ-ಸಹಾಯ ಗುಂಪುಗಳ ಕಾರ್ಯಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

- ಸದಸ್ಯರ ಉಳಿತಾಯ ಮನೋಭಾವನೆಯನ್ನು ಹೆಚ್ಚಿಸುವುದರ ಜೊತೆಗೆ, ಅವರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಜೀವನಮಟ್ಟದಲ್ಲಿ ಸುಧಾರಣೆಯನ್ನು ಮಾಡುವುದು.

- ಸಂಘದ ಸದಸ್ಯರಿಗೆ ಒಂಭತ್ತು ತಿಂಗಳ ಬಳಿಕ ತಮ್ಮ ಠೇವಣಿಯಿರುವ ಬ್ಯಾಂಕುಗಳಿಂದ ಅಥವಾ ಸರಕಾರಿ ಸಂಘಗಳಿಂದ ಸಾಲ ಪಡೆಯಲು ಅರ್ಹರಾಗಿರುತ್ತಾರೆ. ಸಾಲದ ಮೊತ್ತವು ಅದರ ಉದ್ದೇಶ ಮತ್ತು ಸದಸ್ಯರ ಠೇವಣಿ ಮೊತ್ತವನ್ನು ಅವಲಂಭಿಸಿಕೊಂಡಿರುತ್ತದೆ.

- ಕ್ಷೇಮ ನಿಧಿ ನಿರ್ಮಾನ ಮಾಡಲು ಸಹಕರಿಸುತ್ತದೆ. ಸದಸ್ಯರ ದೇಣಿಗೆಯಿಂದ ಸ್ವ-ಸಹಾಯ ಸಂಘಗಳು ಕ್ಷೇಮ ನಿಧಿಯನ್ನು (Welfare fund) ನಿರ್ಮಿಸುತ್ತವೆ. ತುರ್ತು ಸ್ಥಿತಿಗಳಲ್ಲಿ ಸದಸ್ಯರಿಗೆ ಅದರಿಂದ ಸಾಲ ಪಡೆಯಬಹುದು. ಸದಸ್ಯರ ನಿಧನರಾದಾಗ ಈ ನಿಧಿಯಿಂದ ಅದರ ಕುಟುಂಬಕ್ಕೆ ಪರಿಹಾರ ವಿಮೆ ದೊರಕಿಸಿಕೊಡಲು ಸಹಕಾರಿಯಾಗಿದೆ.

- ಸದಸ್ಯರ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನವನ್ನು ದೊರಕಿಸಿಕೊಡಲು ಪ್ರಯತ್ನವನ್ನು ಸ್ವ-ಸಹಾಯ ಗುಂಪುಗಳು ಸಹಕಾರಿಯಾಗಿದೆ. ಸರಕಾರದ ಬಡತನ ಮತ್ತು ನಿರುದ್ಯೋಗದ ಕಾರ್ಯಕ್ರಮಗಳನ್ನು ಅರ್ಹರಿಗೆ ದೊರಕಿಸಿಕೊಡಲು ಸಹಕಾರಿಯಾಗಿದೆ.

- ಅನಕ್ಷರಸ್ಥ ಮತ್ತು ಅಜ್ಞಾನಿ ಸ್ವ-ಸಹಾಯ ಗುಂಪುಗಳ ಸದಸ್ಯರ ಜ್ಞಾನವನ್ನು ಹೆಚ್ಚಿಸುವ ಕೆಲಸವನ್ನು ಈ ಸಂಘ ಮಾಡುತ್ತದೆ.

- ಆರೋಗ್ಯ, ಶಿಕ್ಷಣ ನೀಡುವ ಶೋಷಣೆಯನ್ನು ನಿವಾರಿಸುವ ಮಾರ್ಗೋಪಾಯ ಕಂಡುಕೊಳ್ಳುವ ಕಾರ್ಯವನ್ನು ಸ್ವ-ಸಹಾಯ ಗುಂಪುಗಳು ತಮ್ಮ ಸಭೆ-ಸಮಾರಂಭಗಳಲ್ಲಿ ಕೈಗೊಳ್ಳುತ್ತದೆ.

- ಸ್ವ-ಸಹಾಯ ಗುಂಪುಗಳ ಸ್ವ ಉದ್ಯೋಗ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸ್ವ-ಸಹಾಯ ಗುಂಪುಗಳ ವಿಧಗಳು

ಭಾರತದಲ್ಲಿ ಅನೇಕ ಗುಂಪುಗಳು ತಮ್ಮ ತಂಡವನ್ನು ರಚಿಸಿಕೊಂಡು ಅನೇಕ ಕಾರ್ಯಕ್ರಮದಲ್ಲಿ ತೊಡಗಿಕೊಂಡಿವೆ. ಕರ್ನಾಟಕ ರಾಜ್ಯದಲ್ಲಿ ಮುಖ್ಯವಾಗಿ, ದ.ಕ. ಜಿಲ್ಲೆಯಲ್ಲಿ ಮೂರು ವಿಧದ ಸ್ವ-ಸಹಾಯ ಗುಂಪುಗಳು ಕಾರ್ಯನಿರ್ವಹಿಸುತ್ತಿವೆ.

ಅವುಗಳೆಂದರೆ:

- ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

- ನವೋದಯ ಸ್ವ-ಸಹಾಯ ಸಂಘಗಳು

- ಒಡಿಯೂರು ಶ್ರೀ ಗ್ರಾಮ ವಿಕಾಸ ವಿವಿದ್ದೋದ್ಧೇಶ ಯೋಜನೆ.

- ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ:

ಅಭಿವೃದ್ಧಿ ಹೊಂದುತ್ತಿರುವ ದ್ವಿವಲಯ (ಕೃಷಿ, ಕೈಗಾರಿಕೆ, ನಗರ, ಗ್ರಾಮೀಣ, ಮುಂದುವರಿದ, ಹಿಂದುಳಿದ) ಆರ್ಥಿಕ ಸ್ವರೂಪ ಹೊಂದಿರುವ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಗ್ರಾಮೀಣ ಅಭಿವೃದ್ಧಿ ಪ್ರಮುಖವಾಗುತ್ತದೆ. ಗ್ರಾಮೀಣ ಅಭಿವೃದ್ಧಿಯ ಅನೇಕ-ಅನೇಕ ಮಾದರಿಗಳನ್ನು ತಂತ್ರಗಳನ್ನು ಸ್ಥಳೀಯವಾಗಿ ಅಂತರಾಷ್ಟ್ರೀಯವಾಗಿ ರೂಪಿಸಿ ಕಾರ್ಯರೂಪಕ್ಕೆ ತರಲಾಗಿದೆ.

ಡಾ। ವೀರೇಂದ್ರ ಹೆಗ್ಗಡೆಯವರು ಹಳ್ಳಿಗಳಿಗೆ ಭೇಟಿ ನೀಡಿದಾಗ ಬಡತನದ ಕರುಣಾಜನಕ ಸ್ಥಿತಿಗಳನ್ನು ಗಮನಿಸಿದಾಗ 'ಬಡತನವೇ ಬಡವರ ಏಳಿಗೆಗೆ ಅಡ್ಡಿ' ಎಂದು ಗುರುತಿಸಿಕೊಂಡಿರುವುದೇ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಪ್ರೇರಕ ಎನ್ನುತ್ತಾರೆ. ಬಡಕುಟುಂಬಗಳ ಅಭಿವೃದ್ಧಿಗೆ ಅವಶ್ಯಕವಾದ ಮೂಲಭೂತ ಸೌಲಭ್ಯಗಳನ್ನು ಮನೆ ನಿರ್ಮಾಣ, ಆರೋಗ್ಯ, ಪಶುಸಂಗೋಪನೆ, ರೇಷ್ಮೆ, ಕೃಷಿ, ಜೇನುವ್ಯವಸಾಯ ಗುಡಿ ಕೈಗಾರಿಕೆ ಈ ರೀತಿ ಉಪ ಚಟುವಟಿಕೆಗಳಿಗೆ ಬೇಕಾದ ಅನುದಾನಗಳನ್ನು ನೀಡಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯ ಧ್ಯೇಯೋದ್ದೇಶಗಳನ್ನು ಎರಡು ದೃಷ್ಟಿಗಳಲ್ಲಿ ನೋಡಬಹುದು. ಒಂದು ಐತಿಹಾಸಿಕ ದಾನಧರ್ಮಗಳ ಪರಂಪರೆಯನ್ನು ಉಳಿಸಿಕೊಂಡು ವಿಸ್ತರಿಸುವುದು. ಎರಡನೇಯದು, ರಾಷ್ಟ್ರೀಯ ಗ್ರಾಮಾಭಿವೃದ್ಧಿ ಉದ್ದೇಶಗಳಿಗೆ ಪೂರಕವಾಗಿರುವ ಐತಿಹಾಸಿ ಶ್ರೀಕ್ಷೇತ್ರ ದಾನ-ಧರ್ಮಗಳ ಕೇಂದ್ರ, ಬಡವರಿಗೆ ಕಷ್ಟದಲ್ಲಿರುವವರಿಗೆ, ದಾನಧರ್ಮಗಳ ಮೂಲಕ ಸಾಮಾಜಿಕ ಸ್ವಸ್ಥ್ಯವನ್ನು ಕಾಪಾಡಿ ಸಾಮಾಜಿಕ ನ್ಯಾಯವನ್ನು ಒದಗಿಸುವುದು. ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯ ಪ್ರಗತಿ ಬಂಧು ಮತ್ತು ಸಂಪೂರ್ಣ ಸುರಕ್ಷಾ ಈ ಎರಡು ಕಾರ್ಯಕ್ರಮಗಳು ಅಂತರಾಷ್ಟ್ರೀಯ ಪ್ರಶಸ್ತಿ ಗೌರವಕ್ಕೆ ಪಾತ್ರವಾಗಿದೆ.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಮುಖ್ಯವಾಗಿ ಈ ಕೆಳಗಿನ ವಿವಿಧ ಗುಂಪುಗಳಿವೆ.

- ಪ್ರಗತಿ ಬಂಧು ಸ್ವ-ಸಹಾಯ ಸಂಘಗಳು
- ಜ್ಞಾನ ವಿಕಾಸ ಕೇಂದ್ರ
- ಸ್ವ-ಸಹಾಯ ಸಂಘಗಳು
- ನಗರ ಅಭಿವೃದ್ಧಿ ಸಂಘಗಳು.

ನವೋದಯ ಸ್ವ-ಸಹಾಯ ಸಂಘಗಳು

ಎನ್. ರಾಜೇಂದ್ರ ಕುಮಾರ್ ಮುಂದಾಳತ್ವದಲ್ಲಿ ನವೋದಯ ಸ್ವ-ಸಹಾಯ ಸಂಘಗಳು ದ.ಕ. ಜಿಲ್ಲೆಯಲ್ಲಿ ಪ್ರಾರಂಭವಾಗಿ ಇದೀಗ ರಾಜ್ಯದ ಇತರ ಜಿಲ್ಲೆಗಳಲ್ಲಿಯೂ ಛಾಪು ಮೂಡಿಸಿವೆ. ನವೋದಯ ಸ್ವ-ಸಹಾಯ ಗುಂಪುಗಳಲ್ಲಿಯೂ ಸಾಮಾನ್ಯವಾಗಿ ಮಹಿಳೆಯರು ಮತ್ತು ಪುರುಷರು ಸಣ್ಣ-ಸಣ್ಣ ತಂಡಗಳನ್ನು ರಚಿಸಿ, ಉಳಿತಾಯ ಮನೋಭಾವನೆಯನ್ನು ಬೆಳೆಸುವುದರ ಮೂಲಕ ಸಾಮಾಜಿಕ ಮತ್ತು ರಾಜಕೀಯ ಹಾಗೂ ಆರ್ಥಿಕವಾಗಿ ಸ್ವಾವಲಂಬನೆಯನ್ನು ಸಾಧಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಭಾರತದಂತಹಾ ಬೆಳೆಯುತ್ತಿರುವ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಗ್ರಾಮೀಣ ಅಭಿವೃದ್ಧಿ ಪ್ರಮುಖವಾದ ಕ್ಷೇತ್ರ, ಗ್ರಾಮೀಣ ಅಭಿವೃದ್ಧಿ ಎಂದರೆ ಗ್ರಾಮೀಣ ಪ್ರದೇಶದ ಹಿಂದುಳಿದ, ಬಡಜನರ ಜೀವನ ಮಟ್ಟ ಸುಧಾರಣೆ ಹಿಂದುಳಿದ, ಬಡಜನರ ಜೀವನ ಮಟ್ಟ ಸುಧಾರಣೆ ಜೀವನ ಮಟ್ಟದ ಸುಧಾರಣೆಯು ಉದ್ಯೋಗ ಆದಾಯ ಹೆಚ್ಚಳದಿಂದ ಸಾಧಿಸಬಹುದು ಎಂಬುದನ್ನು ನವೋದಯ ಸ್ವ-ಸಹಾಯ ಗುಂಪುಗಳಿಂದ ತಿಳಿದುಕೊಳ್ಳಬಹುದು.

ನವೋದಯ ಸ್ವ-ಸಹಾಯ ಯೋಜನೆಯ ಅಧ್ಯಯನ ಮಾಡಿದಾಗ ಈ ಕೆಳಗಿನ ಅಂಶಗಳು ಕಂಡು ಬರುತ್ತದೆ.

- ಗ್ರಾಮೀಣ ಬಡವರಿಗೆ, ಉಳಿತಾಯದ ಮನೋಭಾವನೆ ಮೂಡಿದೆ.

- ಗ್ರಾಮೀಣ ಶೈಕ್ಷಣಿಕ ಗುಣಮಟ್ಟ ಹೆಚ್ಚಾಗಿದೆ.
- ಗ್ರಾಮೀಣ ನಿರುದ್ಯೋಗದ ಪ್ರಮಾಣ ಕಡಿಮೆಯಾಗಿದೆ.
- ಗ್ರಾಮೀಣ ಜನರ ಪಾಲ್ಗೊಳ್ಳುವಿಕೆ, ಸಹಭಾಗಿತ್ವಕ್ಕೆ ಮನ್ನಣೆ ನೀಡಿದೆ.
- ಸ್ವ-ಸಹಾಯದಿಂದ ಸ್ವಾವಲಂಬಿಗಳಾಗಲು ಉತ್ತೇಜನ ನೀಡಿದೆ.

ಒಡಿಯೂರು ಶ್ರೀ ಗ್ರಾಮವಿಕಾಸ ವಿವಿದ್ದೋದ್ಧೇಶ ಯೋಜನೆ

ಶ್ರೀಕ್ಷೇತ್ರ ಒಡಿಯೂರಲ್ಲಿ ಶ್ರೀ ದತ್ತಗುರು ದೇವಾನಂದ ಸ್ವಾಮೀಜಿಯ ಆಶೀರ್ವಾದದಿಂದ ಒಡಿಯೂರು ಶ್ರೀ ಗ್ರಾಮವಿಕಾಸ ಸ್ವ-ಸಹಾಯ ಗುಂಪು ಬಂಟ್ವಾಳ ತಾಲೂಕಿನ ವಿಟ್ಲದಲ್ಲಿ ಪ್ರಾರಂಭವಾಯಿತು. ಈ ಯೋಜನೆಯ ಮುಖ್ಯ ಉದ್ದೇಶ, ಆರ್ಥಿಕವಾಗಿ, ಸಾಮಾಜಿಕವಾಗಿ, ಹಿಂದುಳಿದ ಬಡಜನರನ್ನು ಉಳಿತಾಯ ಮನೋಭಾವನೆಯ ಮೂಲಕ ಪ್ರೇರೇಪಿಸುವುದು. ಈ ಯೋಜನೆಯ ಮೂಲಕ ಬಡತನ ರೇಖೆಗಿಂತ ಕೆಳಗಿನವರು ಅಭಿವೃದ್ಧಿಯಿಂದ ತೊಡಗಿ, ಸಣ್ಣ ಮತ್ತು ಅತಿಸಣ್ಣ ರೈತರು, ನಿರುದ್ಯೋಗಿಗಳು, ಅನಕ್ಷರಸ್ಥರು, ಮಹಿಳೆಯರು, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡಿಕೊಳ್ಳುವುದರ ಜೊತೆಗೆ ಶ್ರಮದಾನದ ಮೂಲಕ ಇನ್ನೊಬ್ಬರ ಕೆಲಸ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. ಒಡಿಯೂರು ಶ್ರೀ ಗ್ರಾಮವಿಕಾಸ ವಿವಿದ್ದೋದ್ಧೇಶ ಯೋಜನೆಯ ಮೂಲಕ ದುಶ್ಚಟಗಳ ವಿರುದ್ಧ ಹೋರಾಟ ಮಾಡಲು ಗ್ರಾಮೀಣ ಜನರಿಗೆ ಪ್ರೇರಣೆ ನೀಡುವುದು.

ಅಧ್ಯಯನದ ಗುರಿ, ಉದ್ದೇಶ ವ್ಯಾಪ್ತಿ

ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಬಡತನ ಮತ್ತು ನಿರುದ್ಯೋಗ ಪೀಡೆಗಳು ತಮ್ಮ ಕದಂಬ ಬಾಹುಗಳನ್ನು ಇನ್ನೂ ಚಾಚಿಕೊಂಡಿವೆ. ಸರಕಾರದ ಯಾವುದೇ ಕಾರ್ಯಕ್ರಮಗಳು ಈ ಪೀಡೆಗಳನ್ನು ನಿವಾರಿಸುವಲ್ಲಿ ಸಂಪೂರ್ಣ ಯಶಸ್ವಿಯಾಗಿಲ್ಲ. ಸಾಕಷ್ಟು ಸಹಾಯ ಸೌಲಭ್ಯಗಳನ್ನು ಎಲ್ಲಾ ಕುಟುಂಬಗಳಿಗೂ ಸಮಾನವಾಗಿ ನೀಡಿದಾಗಲೂ ಅಸಮಾನತೆಯ ಕರಿನೆರಳೊಂದು ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಗೋಚರಿಸುತ್ತದೆ. ಈ ಅಸಮಾನತೆಯ ಕರಿನೆರಳು ಮತ್ತು ಬಡತನ ಮತ್ತು ನಿರುದ್ಯೋಗವನ್ನು ಈ ಸ್ವ-ಸಹಾಯ

ಗುಂಪುಗಳ ಮೂಲಕ ಯಾವ ರೀತಿ ಗ್ರಾಮೀಣ ಪ್ರದೇಶದಲ್ಲಿ ಹೋಗಲಾಡಿಸಬಹುದು ಎಂದು ವಿಚಾರವನ್ನು ತಿಳಿಯುವುದು ಅಧ್ಯಯನದ ಮುಖ್ಯ ಗುರಿಯಾಗಿದೆ.

ಉದ್ದೇಶಗಳು

- ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರಗಳನ್ನು ತಿಳಿಯುವುದು.
- ಗ್ರಾಮೀಣ ಜನರ ಆರ್ಥಿಕ ಮತ್ತು ಸಾಮಾಜಿಕ ಮನೋಭಾವನೆಯನ್ನು ಅರ್ಥಮಾಡಿಕೊಳ್ಳುವುದು.
- ಸ್ವ-ಸಹಾಯ ಗುಂಪುಗಳ ಕಾರ್ಯವಿಧಾನ ಮತ್ತು ರಚನೆಗಳನ್ನು ಅರಿಯುವುದು.
- ಸ್ವ-ಸಹಾಯ ಗುಂಪುಗಳ ಸದಸ್ಯರ ಉಳಿತಾಯ ಮನೋಭಾವನೆಯನ್ನು ತಿಳಿಯುವುದು.
- ಗ್ರಾಮೀಣ ಪ್ರದೇಶದಲ್ಲಿ ಸ್ವ-ಸಹಾಯ ಗುಂಪುಗಳ ಸದಸ್ಯರ ಕಾರ್ಯದಕ್ಷತೆ ಮತ್ತು ಸಮಯಪಾಲನೆಯನ್ನು ತಿಳಿಯುವುದು.
- ಸ್ವ-ಸಹಾಯ ಗುಂಪುಗಳ ಸದಸ್ಯರು ಸರಕಾರದಿಂದ ಪಡೆದ ಸೌಲಭ್ಯ ವಿವರಗಳನ್ನು ಅರ್ಥೈಸುವುದು.

ಅಧ್ಯಯನದ ವ್ಯಾಪ್ತಿ

"ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿಮೂಲನೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ" ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಕರ್ನಾಟಕ ರಾಜ್ಯದ ದ.ಕ. ಜಿಲ್ಲೆಯ ಮಂಗಳೂರು ತಾಲೂಕು ಮತ್ತು ಬೆಳ್ತಂಗಡಿ ತಾಲೂಕುಗಳನ್ನು ಆರಿಸಿಕೊಂಡಿದ್ದೇನೆ. ಈ ಎರಡೂ ತಾಲೂಕುಗಳಲ್ಲಿ ಬರುವ ಬಡವರ ಸ್ಥಿತಿಗತಿ ಮತ್ತು ಸ್ವ-ಸಹಾಯ ಸಂಘಗಳನ್ನು ಸ್ಥಾಪಿಸಿ ಯಾವ ರೀತಿಯ ಬದಲಾವಣೆಯಾಗಿದೆ ಎಂಬುವುದನ್ನು ತಿಳಿಯುವುದು. ಅಧ್ಯಯನದ ಮುಖ್ಯ ಉದ್ದೇಶವಾಗಿರುತ್ತದೆ. ಅದೇ ರೀತಿ ಎರಡು ತಾಲೂಕುಗಳಲ್ಲಿ ಬರುವ ಸ್ವ-ಸಹಾಯ ಗುಂಪುಗಳ

ಸದಸ್ಯರನ್ನು ಭೇಟಿ ಮಾಡಿ ಸ್ವ-ಸಹಾಯದಿಂದ ಯಾವ ರೀತಿ ಸ್ವಾವಲಂಬಿಗಳಾಗಿದ್ದೀರಿ ಎಂದು ತಿಳಿಯುವುದು.

ಪ್ರಮೇಯಗಳು (ಊಹೆಗಳು)

- ಗ್ರಾಮೀಣ ಪ್ರದೇಶದ ಜನರಲ್ಲಿ ಉಳಿತಾಯದ ಮನೋಭಾವನೆ ಮೂಡಿದೆ.
- ಸ್ವ-ಉದ್ಯೋಗದಿಂದಾಗಿ ನಿರುದ್ಯೋಗ ಸ್ವಲ್ಪ ಮಟ್ಟಿಗೆ ಕುಸಿದಿದೆ.
- ಸ್ವ-ಉದ್ಯೋಗದಿಂದಾಗಿ ಜೀವನ ಮಟ್ಟ ಸುಧಾರಣೆಯಾಗಿದೆ.
- ಸ್ವ-ಸಹಾಯ ಗುಂಪುಗಳಿಂದ ಶೈಕ್ಷಣಿಕ ಗುಣಮಟ್ಟ ಹೆಚ್ಚಿದೆ.
- ಸ್ವ-ಸಹಾಯ ಗುಂಪುಗಳಿಂದ ಬಡತನ ಸ್ವಲ್ಪ ಮಟ್ಟಿಗೆ ನಿವಾರಣೆಯಾಗಿದೆ.
- ಸ್ವ-ಸಹಾಯ ಗುಂಪುಗಳು ಜನರ ಪಾಲ್ಗೊಳ್ಳುವಿಕೆ, ಸಹಭಾಗಿತ್ವಕ್ಕೆ ಮಹತ್ವವನ್ನು ನೀಡಿದೆ.
- ಸ್ವ-ಸಹಾಯ ಗುಂಪಿನ ಸದಸ್ಯರು ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಮುಂದೆ ಬರುತ್ತಿದ್ದಾರೆ.

ದತ್ತಾಂಶಗಳ ಸಂಗ್ರಹಣ ವಿಧಾನ

ಮುಖ್ಯವಾಗಿ ಯಾವುದೇ ಒಂದು ಅಧ್ಯಯನವನ್ನು ಕೈಗೆತ್ತಿಕೊಳ್ಳಬೇಕಾದರೆ ಎರಡು ವಿಧಗಳಿಂದ ಮಾಹಿತಿಯನ್ನು ಕಲೆ ಹಾಕುತ್ತಾರೆ. ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ ಎಂಬ ಅಧ್ಯಯನಕ್ಕೂ ಎರಡು ವಿಧಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅವುಗಳೆಂದರೆ:

- ಪ್ರಾಥಮಿಕ ಮೂಲಗಳು
- ಅನುಷಂಗಿಕ ಮೂಲಗಳು

ಪ್ರಾಥಮಿಕ ಮೂಲಗಳು: ಪ್ರಾಥಮಿಕ ಮೂಲಗಳು ಎಂದರೆ, ನಮ್ಮ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಪ್ರತ್ಯಕ್ಷವಾಗಿ ಪಡೆಯುವುದು.

ಪ್ರಾಥಮಿಕ ಮೂಲಗಳಿಂದ ಪಡೆದ ಮಾಹಿತಿಯು ಬಹಳ ನಿಖರವಾಗಿರುತ್ತದೆ.

- ನೇರ ಸಂದರ್ಶನ
- ಮಾಹಿತಿ ವಿಶ್ಲೇಷಣೆ
- ಪ್ರಶ್ನಾವಳಿಯ ಮೂಲಕ
- ಗುಂಪು ಚರ್ಚೆಯ ಮೂಲಕ
- ಗಮನಿಸುವುದರ ಮೂಲಕ

ಈ ಐದು ಪ್ರಾಥಮಿಕ ಮೂಲಗಳ ಪ್ರಕಾರ, ನೇರ ಸಂದರ್ಶನ ಮಾಹಿತಿ ವಿಶ್ಲೇಷಣೆ ಪ್ರಶ್ನಾವಳಿಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲು ನಿರ್ಧರಿಸಿದ್ದೇನೆ.

ಅನುಷಂಗಿಕ ಮೂಲಗಳು: ಅನುಷಂಗಿಕ ಮೂಲಗಳೆಂದರೆ, ನಮ್ಮ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಪರೋಕ್ಷವಾಗಿ ಪಡೆದುಕೊಳ್ಳುವುದು. ಅನುಷಂಗಿಕ ಮೂಲಗಳಿಂದ ಪಡೆದ ಮಾಹಿತಿಯು ಸಹ ನಿಖರವಾಗಿರುತ್ತದೆ. ಅಧ್ಯಯನಕ್ಕೆ ಬೇಕಾದ ಕೆಲವು ಅನುಷಂಗಿಕ ಮೂಲಗಳೆಂದರೆ:

ವಾರ್ತಾಪತ್ರಿಕೆಗಳು, ಮಾಸಪತ್ರಿಕೆಗಳು, ಪುಸ್ತಕಗಳು, ಗ್ರಂಥಗಳು, ಸಂಶೋಧನಾ ಪ್ರಬಂಧಗಳು, ಟಿ.ವಿ. ಇಂಟರ್‌ನೆಟ್ ಮತ್ತು ಕೆಲವು ಇತರ ಮಾಧ್ಯಮಗಳಿಂದ ಪಡೆಯಲಾಗಿದೆ.

ಅಧ್ಯಾಯ ೨: ಬಡತನ ಮತ್ತು ಸ್ವ-ಸಹಾಯ ಗುಂಪುಗಳು

ಅಧ್ಯಾಯ ೨: ಬಡತನ ಮತ್ತು ಸ್ವ-ಸಹಾಯ ಗುಂಪುಗಳು

ಭಾರತದ ಗ್ರಾಮೀಣ ಸಮುದಾಯಕ್ಕೆ ತನ್ನದೇ ಆದ ಬಹುದೀರ್ಘವಾದ ಇತಿಹಾಸವಿದೆ. ಗ್ರಾಮಗಳೇ ಈ ದೇಶದ ಜೀವನಾಡಿ. ಭಾರತದ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಗ್ರಾಮಗಳಿಗೆ ಮಹತ್ತರವಾದ ಸ್ಥಾನಮಾನವಿದೆ. ಭಾರತೀಯ ಜೀವನಕ್ರಮ ವಿಶ್ಲೇಷಣೆಯೆಂದರೆ, ಅದು ನಮ್ಮ ಗ್ರಾಮೀಣ ಜನಜೀವನ ವಿಶ್ಲೇಷಣೆಯೆಂದರ್ಥ. ದೇಶದಲ್ಲಿ ಪಸರಿರುವ ೬ ಲಕ್ಷ ಗ್ರಾಮಗಳಲ್ಲಿ ದೇಶದ ಶೇ. ೭೦ ರಷ್ಟು ಮಂದಿ ಇಂದಿಗೂ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ, ದುರದೃಷ್ಟವಶಾತ್ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಗ್ರಾಮಗಳು ಸಮಸ್ಯೆಗಳ ಆಗರವಾಗಿವೆ. ಬಡತನ, ನಿರುದ್ಯೋಗ, ಹಸಿವು ರೋಗರುಜಿನ ಮುಂತಾದ ಸಮಸ್ಯೆಗಳಿಂದ ಗ್ರಾಮಗಳು ಬಳಲುತ್ತಿವೆ. ಗ್ರಾಮೀಣ ಜನರಿಗೆ ಅವಕಾಶದ ಕೊರತೆ ಎದ್ದು ಕಾಣುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಅವಕಾಶ ವಂಚಿತರಾದವರು ಪಟ್ಟಣದತ್ತ ಮುಖ ಮಾಡುತ್ತಿದ್ದಾರೆ.

೧೯೮೨ ರಲ್ಲಿ ಪ್ರಾರಂಭವಾದ ಗ್ರಾಮಾಭಿವೃದ್ಧಿ ಯೋಜನೆಯ ಅಂಗಗಳಾಗಿರುವ, ಪ್ರಗತಿ ಬಂಧು, ಸ್ವ-ಸಹಾಯ ಗುಂಪುಗಳು, ಪ್ರಗತಿನಿಧಿ ಜೀವವಿಕಾಸ ಕೇಂದ್ರಗಳು, ಸಂಪೂರ್ಣ ಸುರಕ್ಷಾ ವಿಮಾ ಯೋಜನೆ, ಜನಜಾಗೃತಿ ನವ ಜೀವನ ಸಮಿತಿ, ಸಮುದಾಯದ ಅಭಿವೃದ್ಧಿ ಮತ್ತು ಸುಸ್ಥಿರ ಕೃಷಿ ಮುಂತಾದ ಪದಗಳು ಬಳಸುವಾಗ ಜನರಲ್ಲಿ ಅಭಿವೃದ್ಧಿಯ ಮಂತ್ರವನ್ನು ಜಪಿಸುತ್ತವೆ. ಅದು ಅಲ್ಲದೆ, ಗ್ರಾಮೀಣ ಪ್ರದೇಶದಲ್ಲಿ ಇನ್ನು ಅನೇಕ ಸ್ವ-ಸಹಾಯ ಗುಂಪುಗಳಾದ ನವೋದಯ ಸ್ವ-ಸಹಾಯ ಗುಂಪುಗಳು, ಒಡಿಯೂರು ಶ್ರೀ ಗ್ರಾಮ ವಿಕಾಸ ವಿವಿದೋದ್ದೇಶ ಯೋಜನೆಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ಸ್ವ-ಸಹಾಯ ಗುಂಪುಗಳು ಗ್ರಾಮೀಣ ಬಡಜನರ ಆಸೆ-ಆಶೋತ್ತರಗಳನ್ನು ಬಹಳಷ್ಟು ಪೂರೈಸಿವೆ. ಈ ಸ್ವ-ಸಹಾಯ ಗುಂಪುಗಳಿಂದ ಗ್ರಾಮೀಣ ಪ್ರದೇಶದಲ್ಲಿ ತಕ್ಕ ಮಟ್ಟಿಗೆ ಬಡತನ ಮತ್ತು ನಿರುದ್ಯೋಗ ನಿವಾರಣೆಯಾಗಿದೆ ಎಂದು ಹೇಳಬಹುದು. ಈ ಗುಂಪುಗಳು ಗ್ರಾಮೀಣ ಜನರ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕವಾಗಿ ಸಮಾಜದ ಮುಖ್ಯವಾಹಿನಿಗೆ ತರಲು ಸಹಾಯಕವಾಗಿದೆ.

ಬಡತನಕ್ಕೆ ಕಾರಣಗಳು

ಬಡತನವು ಒಂದು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯಾಗಿದೆ. ಕನಿಷ್ಠ ಜೀವನಾವಶ್ಯಕತೆಗಳಾದ ಆಹಾರ, ಬಟ್ಟೆ, ಬರೆ, ಗೃಹ ಶಿಕ್ಷಣ, ಆರೋಗ್ಯ ರಕ್ಷಣೆ ಮಾಡಿಕೊಳ್ಳಲಾಗದ ಸ್ಥಿತಿಗೆ ಬಡತನವೆಂದು ಹೆಸರು.

ಸಾಂಪ್ರದಾಯಿಕ ಅಭಿವೃದ್ಧಿ ಅರ್ಥಶಾಸ್ತ್ರ ಪ್ರಮುಖ ಮಿತಿಗಳನ್ನು ಗುರುತಿಸಿದ ಕೀರ್ತಿ ಅಮರ್ತ್ಯ ಕುಮಾರ್ ಸೇನ್ ಅವರದ್ದು ರಾಷ್ಟ್ರೀಯ ಉತ್ಪನ್ನದಲ್ಲಿ ಹೆಚ್ಚಳ ಮತ್ತು ಸರಕುಗಳ ಉತ್ಪಾದನೆಗಳನ್ನು ನಿಜವಾದ ಅಭಿವೃದ್ಧಿ ಎಂದು ನಂಬಿದರೆ ಅದು ಭ್ರಮೆ ಎಂದು ವಿವರಿಸಿದ್ದಾರೆ. 'ಅಂತಿಮವಾಗಿ ಆರ್ಥಿಕಾಭಿವೃದ್ಧಿ ಕ್ರಿಯೆಯು ಜನರು ಏನನ್ನು ಮಾಡಬಲ್ಲರು ಮತ್ತು ಅವರಿಗೆ ಏನನ್ನು ಮಾಡಲಾಗದೆಂಬುದಕ್ಕೆ ಸಂಬಂಧಿಸಿದೆ. ಅದು ಜನರು ಸುದೀರ್ಘ ಕಾಲ ಜೀವಿಸಬಲ್ಲರೆ, ಸಂಭಾವ್ಯ ಸಾವನ್ನು ತಪ್ಪಿಸಬಲ್ಲರೇ, ಜನರು ಉತ್ತಮ ಪೌಷ್ಠಿಕಾಂಶ ಘೋಷಣೆ ಪಡೆಯಬಲ್ಲರೇ, ಜನರು ಓದಿ ಬರೆಯಬಲ್ಲರೇ, ಪರಸ್ಪರ ಸಂವಹನ ತಿಳಿಸುವ ಸಾಮರ್ಥ್ಯ ಪಡೆಯಬಲ್ಲರೇ, ಸಾಹಿತ್ಯ ಮತ್ತು ವೈಜ್ಞಾನಿಕ ಕಲಿಕೆಗಳಲ್ಲಿ ಅನ್ವೇಷಣೆಗಳಲ್ಲಿ ತೊಡಗಿಸಿಕೊಳ್ಳಬಲ್ಲರೇ, ಎನ್ನುವುದಕ್ಕೆ ಸಂಬಂಧಿಸಿದೆ.'

ಗ್ರಾಮೀಣ ಅಭಿವೃದ್ಧಿ ಸಾಧ್ಯವಾಗದೆ ಬಡತನ ಮತ್ತು ನಿರುದ್ಯೋಗ ನಿವಾರಣೆ ಅಗತ್ಯ. ಅದಕ್ಕಾಗಿ ಡಾ। ಸ್ಮಿತ್ ಅವರು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ. "ಜೀವನದ ಮೂಲ ಅಗತ್ಯಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದ ಸಾಮಾಜಿಕ ಆರ್ಥಿಕ ವಿದ್ಯಾಮಾನವೇ ಬಡತನ".

ಬಡತನ ರೇಖೆ ಎಂದರೇನು?

ಬಡತನವು ಬಡತನ ರೇಖೆಯ ಮೂಲಕ ವ್ಯಾಖ್ಯಾನಿಸಲಾಗಿದೆ. ಬಡತನ ತಲಾ ಅನುಭೋಗ ವೆಚ್ಚ ಅಥವಾ ತಲಾ ಕ್ಯಾಲರಿ ಅನುಭೋಗದ ಆಧಾರದಲ್ಲಿ ಬಡವರನ್ನು ಇತರರಿಂದ ಪ್ರತ್ಯೇಕಿಸುವ ಪರಿಕಲ್ಪನೆಯಾಗಿ ಭಾರತದ ಯೋಜನಾ ಆಯೋಗವು ಕನಿಷ್ಟ ಅಗತ್ಯ ಪೌಷ್ಟಿಕಾಂಶ ಪ್ರಮಾಣ ಮಟ್ಟದ ಆಧಾರದಲ್ಲಿ ಬಡತನ ರೇಕೆಯನ್ನು ನಿರ್ಧರಿಸುತ್ತದೆ. ಯೋಜಣಾ ಆಯೋಗವು ಗ್ರಾಮೀಣ ಪ್ರದೇಶದಲ್ಲಿ ದಿನಂಪ್ರತಿ ತಲಾ ೨೪೦೦ ಕ್ಯಾಲರಿ ಮತ್ತು ನಗರ ಪ್ರದೇಶಗಳಲ್ಲಿ ೨೧೦೦ ಕ್ಯಾಲರಿ ಪೌಷ್ಠಿಕಾಂಶ ಆಹಾರವನ್ನು ಕನಿಷ್ಠ ಅನುಭೋಗ ಹಂತವೆಂದು ಗುರುತಿಸಿದೆ.

- **ನಿರಪೇಕ್ಷ ಬಡತನ:** ನಿರಪೇಕ್ಷ ಬಡತನವು ಸಮಗ್ರ ಬಡತನವಾಗಿದೆ. ಅದನ್ನು ಬಡತನ ರೇಖೆಯ ಮೂಲಕ ಅಂದಾಜಿಸಲಾಗಿದೆ.

- **ಸಾಪೇಕ್ಷ ಬಡತನ:** ಅತ್ಯಧಿಕ ಶ್ರೀಮಂತರನ್ನು ಅತ್ಯಂತ ಬಡವರೊಡನೆ ತುಲನೆ ಮಾಡಿದಾಗ ಗೊತ್ತಾಗುವ ಸತ್ಯಾಂಶವನ್ನು ಸಾಪೇಕ್ಷ ಬಡತನ ಎಂದು ಕರೆಯಲಾಗುತ್ತದೆ.

ಬಡತನಕ್ಕೆ ಕಾರಣಗಳು ಮತ್ತು ನಿವಾರಣೋಪಾಯಗಳು

ಬಡತನಕ್ಕೆ ಈ ಕೆಳಗಿನ ಕಾರಣಗಳನ್ನು ನೀಡಬಹುದು:

- **ಆರ್ಥಿಕವಾಗಿ ಕೃಷಿಯ ಅವಲಂಬನೆ:** ಗ್ರಾಮೀಣ ಬಡತನಕ್ಕೆ ಮುಖ್ಯ ಕಾರಣ ಆರ್ಥಿಕವಾಗಿ ಜನರು ಕೃಷಿಯಲ್ಲಿ ತೊಡಗಿರುವುದು. ಈ ಕೃಷಿಯಿಂದ ಅಧಿಕ ಲಾಭಗಳಿಸಲು ಅಸಾಧ್ಯ. ಯಾಕೆಂದರೆ, ಗ್ರಾಮೀಣ ಪ್ರದೇಶದಲ್ಲಿ ತಾಂತ್ರಿಕ ಕೃಷಿಗೆ ಒತ್ತು ನೀಡುವಲ್ಲಿ ಅಲ್ಲಿನ ಜನರ ಅನಕ್ಷರತೆ ಮುಖ್ಯ ಕಾರಣವಾಗಿರುತ್ತದೆ. ರೈತರು ಕೃಷಿಗೆ ಕೇವಲ ಮಳೆನೀರನ್ನು ನಂಬಿಕೊಂಡು ಮಾಡಬೇಕಾಗಿದೆ. ಮಳೆ ಇಲ್ಲದಿದ್ದರೆ ಬೆಳೆ ಇಲ್ಲ ಎಂಬ ಪರಿಸ್ಥಿತಿ ಗ್ರಾಮೀಣ ರೈತರಲ್ಲಿ ನೆಲೆಸಿದೆ. ಮಳೆ ಜಾಸ್ತಿಯಾದರೆ ಬೆಲೆ ನಷ್ಟವಾಗಿ, ಅಪಾರ ಪ್ರಮಾಣದ ನಷ್ಟವನ್ನು ಅನುಭವಿಸುತ್ತಾರೆ. ಆವಾಗ ಅವರ ಬಡತನ ಇನ್ನು ಜಾಸ್ತಿಯಾಗುತ್ತದೆ.

- **ಸಂಪನ್ಮೂಲಗಳ ಬಳಕೆಯಲ್ಲಿ ನಿರ್ಲಕ್ಷತನ:** ಪ್ರಾಕೃತಿಕವಾಗಿ ದೊರೆಯುವ ಸಂಪನ್ಮೂಲಗಳನ್ನು ಗ್ರಾಮೀಣ ಪ್ರದೇಶದಲ್ಲಿ ಸದ್ಬಳಕೆ ಮಾಡಿಕೊಳ್ಳುವಲ್ಲಿ ಅಲ್ಲಿನ ಜನರು ಸಂಪೂರ್ಣ ವಿಫಲವಾಗಿದ್ದಾರೆ. ಯಾಕೆಂದರೆ, ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಮಟ್ಟ ಮತ್ತು ಆರ್ಥಿಕ ಮಟ್ಟ ಸುಧಾರಿಸದೆ ಬಡತನ ಸಹಜವಾಗಿ ಉಳಿದುಕೊಂಡಿದೆ.

- **ಜನ ಸಂಖ್ಯೆಯಲ್ಲಿ ಅಭಿವೃದ್ಧಿ:** ಗ್ರಾಮೀಣ ಪ್ರದೇಶದಲ್ಲಿ ಹೆಣ್ಣು ಎಂಬುದು ಹೆರಿಗೆಯಂತ್ರ ಎಂದು ಭಾವಿಸಿದ ಗಂಡಸರು ಭಾರತದ ಜನಸಂಖ್ಯಾ ಸ್ಫೋಟಕ್ಕೆ ಕಾರಣವಾಗಿದ್ದಾರೆ. ಬಡತನಕ್ಕೂ ಒಂದು ಮನೆಯಲ್ಲಿರುವ ಜನಸಂಖ್ಯೆಗೆ ನೇರ ಸಂಬಂಧವಿದೆ. ಜನಸಂಖ್ಯಾ ಅಭಿವೃದ್ಧಿ ಮತ್ತು ಬಡತನಕ್ಕೆ ನೇರ ಸಂಬಂಧಿ ಇದೆ.

- **ಆದಾಯ ಮತ್ತು ಸಂಪತ್ತಿನ ವಿತರಣೆಯಲ್ಲಿ ಏರುಪೇರು:** ಪಿತ್ರಾರ್ಜಿತ ಆಸ್ತಿ ಗ್ರಾಮೀಣ ಜನರಲ್ಲಿ ಸರಿಯಾಗಿ ಹಂಚಿಕೆಯಾಗದೇ ಇರುವುದು ಬಡತನಕ್ಕೆ ಇನ್ನೊಂದು ಪ್ರಮುಖ ಕಾರಣ. ವಿದ್ಯಾವಂತರಿಗೆ ಹೆಚ್ಚು ಆಸ್ತಿ, ಅನಕ್ಷರಸ್ಥರಿಗೆ ಕಡಿಮೆ ಆಸ್ತಿ ಎಂಬ ಮನೋಭಾವ ಬಡತನಕ್ಕೆ ಕಾರಣವಾಗಿದೆ.

- **ಸಾಮಾಜಿಕ ಕಟ್ಟುಪಾಡುಗಳು:** ಸಾಮಾಜಿಕವಾಗಿ ಗ್ರಾಮೀಣ ಪ್ರದೇಶದಲ್ಲಿ ಬಡತನಕ್ಕೆ ಮುಖ್ಯವಾದ ಕಾರಣ ಮೂಡನಂಬಿಕೆಗಳು ಗ್ರಾಮೀಣ ಪ್ರದೇಶದಲ್ಲಿ ಇಂದೂ ದುಂದು ವೆಚ್ಚ ಕಡಿಮೆಯಾಗಿಲ್ಲ. ಇದರ ಪರಿಣಾಮ ಬಡತನವು ಸಾಮಾಜಿಕವಾಗಿ ಬೆಳೆದು ನಿಂತಿದೆ.

- **ಗಳಿಸುವ ಆದಾಯ ಬಹಳ ಕಡಿಮೆ:** ಗ್ರಾಮೀಣ ಪ್ರದೇಶದಲ್ಲಿ ಕೃಷಿಯೇ ಮುಖ್ಯ ಕಸುಬು. ಇದರಲ್ಲಿ ಬರುವ ಆದಾಯ ಬಹಳ ಕಡಿಮೆ. ಗಳಿಸುವ ಆದಾಯ ಬಹಳ ಕಡಿಮೆ ಇದ್ದರೆ ಅದು ಅವನ ಜೀವನ ಮಟ್ಟದ ಮೇಲೆ ಪ್ರಭಾವ ಬೀರಿ ಬಡತನಕ್ಕೆ ಕಾರಣವಾಗುತ್ತದೆ.

- **ಜಾತಿ ಪದ್ಧತಿ:** ಗ್ರಾಮೀಣ ಪ್ರದೇಶದಲ್ಲಿ ಬಡತನಕ್ಕೆ ಮತ್ತೊಂದು ಕಾರಣ ಜಾತಿ ಪದ್ಧತಿ. ಗ್ರಾಮೀಣ ಪ್ರದೇಶದಲ್ಲಿ ಮೇಲು-ಕೀಳು ಅಸ್ಪೃಶ್ಯ ಎಂಬ ಭಾವನೆ ಇರುವುದರಿಂದ ಬಡತನ ಉಳಿದುಕೊಳ್ಳಲು ಕಾರಣವಾಗಿದೆ.

- **ತಂತ್ರಜ್ಞಾನದ ಬಳಕೆಯಲ್ಲಿ ಹಿಂದುಳಿಯುವಿಕೆ:** ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಅನೇಕ ಸ್ಥಳದಲ್ಲಿ ತಂತ್ರಜ್ಞಾನದ ಬಳಕೆಯಾಗಿಲ್ಲ, ಯಾಕೆಂದರೆ, ಅವರಲ್ಲಿರುವ ಅನಕ್ಷರತೆ, ತಂತ್ರಜ್ಞಾನದ ಉಪಯೋಗದ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ.

ಬಡತನದ ನಿವಾರಣೋಪಾಯಗಳು

- ಲಭ್ಯವಿರುವ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ನೀಡುವ ಬಗ್ಗೆ ತಿಳುವಳಿಕೆ ನೀಡಬೇಕು.

- ಸರಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡಬೇಕು.

- ಲಭ್ಯವಿರುವ ಸಂಪತ್ತನ್ನು ಸರಿಯಾಗಿ ಹಂಚಬೇಕು.

- ಬಡತನ ರೇಖೆಗಳಿಗಿಂತ ಕೆಳಗಿರುವ ಕುಟುಂಬಗಳಿಗೆ ಮೀಸಲಾತಿ ಸೌಲಭ್ಯವನ್ನು ಒದಗಿಸಬೇಕು.

- ಜಾತಿ ಪದ್ಧತಿಯನ್ನು ಹೋಗಲಾಡಿಸಬೇಕು.

- ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಬೇಕು.
- ಜನರಲ್ಲಿರುವ ಮೂಡನಂಬಿಕೆಯನ್ನು ಹೋಗಲಾಡಿಸಬೇಕು.
- ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಬೇಕು.
- ದುಂದುವೆಚ್ಚಗಳಿಗೆ ಕಡಿವಾಣ ಹಾಕಬೇಕು.

ಈ ಮೇಲಿನ ಬಡತನ ನಿವಾರಣೋಪಾಯಗಳನ್ನು ಕಟ್ಟು ಪಾಲಿಸಿಕೊಂಡು ಬಂದರೆ ಖಂಡಿತವಾಗಿಯೂ ಬಡತನ ಎಂಬ ಭೂತವನ್ನು ಹೋಗಲಾಡಿಸಲು ಸಾಧ್ಯಲ. ಅದಕ್ಕೆ ಬೇಕಾಗಿರುವುದು ಸರಿಯಾದ ಶಿಕ್ಷಣದ ವ್ಯವಸ್ಥೆಯನ್ನು ಕಲ್ಪಿಸುವುದರ ಮೂಲಕ ನಿವಾರಿಸಬಹುದು.

ಸರಕಾರದ ಬಡತನ ನಿರ್ಮೂಲನ ಕಾರ್ಯಕ್ರಮಗಳು

ಭಾರತ ಸರಕಾರವು ಬಡತನ ನಿರ್ಮೂಲನೆಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಬಡತನ ನಿವಾರಣೆಗಾಗಿ ೧೯೯೧ರ ಬಳಿಕ ಕೆಲವು ಹೊಸ ಯೋಜನೆಗಳನ್ನು ರೂಪಿಸಿ, ಹಳೇಯ ಯೋಜನೆಗಳಲ್ಲಿ ಅವುಗಳಲ್ಲಿ ವಿಲೀನಗೊಳಿಸಿದೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳು ಒಂದೇ ನಾಣ್ಯದ ಎರಡು ಮುಖಗಳು. ಬಡತನ ನಿರ್ಮೂಲನಕ್ಕಾಗಿ ಅನುಷ್ಠಾನಗೊಂಡ ಕಾರ್ಯಕ್ರಮಗಳು ನಿರುದ್ಯೋಗವನ್ನು ನಿವಾರಿಸುವ ಉದ್ದೇಶ ಹೊಂದಿದೆ. ಭಾರತದಲ್ಲಿ ಉದ್ಯೋಗ ನಿರ್ಮಾಣವಾದರೆ ಬಡತನ ಖಂಡಿವಾಗಿಯೂ ನಿರ್ಮೂಲನೆಯಾಗುತ್ತದೆ. ಸರಕಾರವು ಬಡತನ ನಿರ್ಮೂಲನೆಗಳಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳೆಂದರೆ: ಮುಖ್ಯವಾಗಿ ಈ ಕೆಳಗೆ ನೀಡಲಾಗಿದೆ.

- ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ ೨೦೦೧ರಲ್ಲಿ ಪ್ರಾರಂಭ ಮಾಡಲಾಯಿತು.
- ಭಾರತ ನಿರ್ಮಾಣ ಯೋಜನೆಯು ೨೦೦೫ರಂದು ಭಾರತ ಸರಕಾರವು ಜಾರಿಗೊಳಿಸಲಾಗಿದೆ. ಇದರಲ್ಲಿ ನೀರಾವರಿ, ರಸ್ತೆಗಳು, ಗೃಹ ಸೌಕರ್ಯ, ನೀರಿನ ಪೂರೈಕೆಗೆ ಆದ್ಯತೆ ನೀಡಲಾಗಿದೆ.

- ಅಂತ್ಯೋದಯ ಅನ್ನ ಯೋಜನೆಯ ಮೂಲಕ ಕಡುಬಡುವರಾದ ಕುಟುಂಬಗಳಿಗೆ ಅಕ್ಕಿ, ಗೋಧಿ ಒದಗಿಸಿ ಹಸಿವು ಮುಕ್ತರನ್ನಾಗಿ ಮಾಡಲಾಗಿದೆ.

- ವಾಲ್ಮೀಕಿ – ಅಂಬೇಡ್ಕರ್ ಆವಾಸ್ ಯೋಜನೆ ೨೦೦೧ರಲ್ಲಿ ಜಾರಿಗೊಳಿಸಲಾಯಿತು. ಆಹಾರ–ವಸನ ಮತ್ತು ವಸತಿ ಮೂರನ್ನು ಮಾನವ ಅವಶ್ಯಕತೆಗಳೆಂದು ಗುರುತಿಸಲಾಗಿದೆ.

- ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ ೧೯೯೯ರಲ್ಲಿ ಜಾರಿಗೊಳಿಸಲಾಗಿದೆ. ಗ್ರಾಮೀಣ ನಿರುದ್ಯೋಗ ಮತ್ತು ಬಡತನ ನಿವಾರಣೆಗಾಗಿ ಕೈಗೊಂಡ ಕಾರ್ಯಕ್ರಮ ಇದಾಗಿದೆ. ಸ್ವರ್ಣ ಜಯಂತಿ ಯೋಜನೆಯಲ್ಲಿ ಸಮನ್ವಯಗೊಂಡ ಕೆಲವು ಯೋಜನೆಗಳೆಂದರೆ, ಆರ್ಯಾಡಿಪಿ ಟ್ರಯಿಸೆಮ್ಮು, ಡ್ವಾಕ್ರಾ, ಸಿಟ್ರಾ, ಯೋಜನೆಗಳು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಲ್ಲಿ ಒಳಗೊಂಡಿವೆ.

- ಸ್ವರ್ಣ ಜಯಂತಿ ಶಹರಿ ರೋಜುಗಾರ ಯೋಜನೆಯು ೧೯೯೭ರಂದು ಪ್ರಾರಂಭಿಸಲಾಯಿತು. ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿವಾರಣೆಯ ಉದ್ದೇಶದ ಏಕೈಕ ಸ್ವೋದ್ಯೋಗ ಕಾರ್ಯಕ್ರಮವಾಗಿರುತ್ತದೆ.

- ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯು ೨೦೦೦ನೇ ಡಿಸೆಂಬರಲ್ಲಿ ಜಾರಿಗೊಳಿಸಲಾಯಿತ್ತು. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯು ಮೂರು ಮುಖ್ಯ ಉದ್ದೇಶಗಳನ್ನು ಒಳಗೊಂಡಿದೆ. ಅವುಗಳೆಂದರೆ, ಸರ್ವಋತು ಸಂಪರ್ಕ ರಸ್ತೆ ನಿರ್ಮಾಣ, ಗ್ರಾಮೀಣ ಗುಡ್ಡಗಾಡು ಪ್ರದೇಶದಲ್ಲಿ ರಸ್ತೆ ನಿರ್ಮಾಣ, ಮರುಭೂಮಿ ಪ್ರದೇಶಗಳಲ್ಲಿ ರಸ್ತೆ ನಿರ್ಮಾಣ ಈ ಯೋಜನೆಯ ಮುಖ್ಯ ಉದ್ದೇಶಗಳು.

- ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ೨೦೦೬ರಂದು ಜಾರಿಗೊಳಿಸಲಾಯಿತು. ಇದರ ಮೂಲಕ ಗ್ರಾಮೀಣ ಬಡತನ ಮತ್ತು ನಿರುದ್ಯೋಗವನ್ನು ನಿರ್ವಹಿಸುವ ಕೆಲಸವನ್ನು ಆಯಾ ಗ್ರಾಮ ಪಂಚಾಯತಿಗಳಿಗೆ ನೀಡಲಾಗಿದೆ.

ಬಡತನ ನಿರ್ಮೂಲನೆಯಲ್ಲಿ ಸಂಘ-ಸಂಸ್ಥೆಗಳ ಪಾತ್ರ

ಗ್ರಾಮೀಣ ಬಡತನ ನಿರ್ಮೂಲನೆಯಲ್ಲಿ ಅನೇಕ ಸಂಘ-ಸಂಸ್ಥೆಗಳು ಕೈ ಜೋಡಿಸಿವೆ. ಬಡತನ ನಿರ್ಮೂಲನೆ ಆಗದೆ ಜನರ ದಾರಿದ್ರ್ಯ ನಿರ್ಮೂಲನೆ ಅಸಾಧ್ಯ ಎಂದು ತಿಳಿದು ಅನೇಕ ಸಂಘ-ಸಂಸ್ಥೆಗಳ ಸರಕಾರದ ಈ ಪುಣ್ಯ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿವೆ. ಸರಕಾರವು ಜಾರಿಗೊಳಿಸಿದ ಯೋಜನೆಗಳನ್ನು ಯಾವ ರೀತಿ ಅನುಷ್ಠಾನಗೊಳಿಸಬೇಕು, ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳು ನೋಡಿಕೊಳ್ಳಬೇಕು. ಈ ಸಂಸ್ಥೆಗಳು ಸ್ಥಳೀಯ ಜನ ಪ್ರತಿನಿಧಿಗಳನ್ನು ನೇಮಿಸಿ ಯೋಜನೆಯ ಸಾಧಕ-ಭಾದಕಗಳನ್ನು ಅರಿತುಕೊಳ್ಳಬೇಕು.

ದ.ಕ. ಜಿಲ್ಲೆಯಲ್ಲಿ ಮುಖ್ಯವಾಗಿ ಸ್ವ-ಸಹಾಯ ಸಂಘಗಳು ಈ ನೆಲೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಸ್ವ-ಸಹಾಯ ಗುಂಪುಗಳ ಒಟ್ಟಿಗೆ ಅನೇಕ ಸರ್ಕಾರೇತರ ಸಂಸ್ಥೆಗಳು ಕೂಡ ಈ ಗಣ್ಯ ಕಾರ್ಯದಲ್ಲಿ ಭಾಗಿಯಾಗಿವೆ. ರೋಟರಿ ಕ್ಲಬ್, ಕ್ರೀಡಾ ಸಂಘಗಳು, ಮಹಿಳಾ ಸಂಘಗಳು, ಯುವಕ ಮಂಡಲಗಳು, ಯುವತಿ ಮಂಡಲಗಳು, ಅಂಗನವಾಡಿ ಕೇಂದ್ರಗಳು, ಶಾಲಾಭಿವೃದ್ಧಿ ಸಮಿತಿಗಳು, ವಯಸ್ಕರ ಶಿಕ್ಷಣ ಕೇಂದ್ರಗಳು, ಜಾತಿ ಒಕ್ಕೂಟಗಳು, ದೇವಸ್ಥಾನಗಳು, ಪ್ರಾರ್ಥನಾ ಮಂದಿರಗಳು, ದೇವಾಲಯ ಅಭಿವೃದ್ಧಿ ಸಮಿತಿಗಳು, ಗೆಳೆಯ ಬಳಗಗಳು ಅಂತಹಾ ಸಂಸ್ಥೆಗಳು ಈ ಬಡತನ ನಿರ್ಮೂಲನೆಯಲ್ಲಿ ಗಣನೀಯ ಸೇವೆಯನ್ನು ನೀಡುತ್ತಿವೆ. ಗ್ರಾಮೀಣ ಬಡಜನರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿಗೆ ಈ ಸಂಸ್ಥೆಗಳು ಸಹಾಯ ಮಾಡುತ್ತಿವೆ.

ಸರಕಾರ ಕೈಗೊಂಡ ಬಡತನ ನಿರ್ಮೂಲನಾ ಕಾರ್ಯಕ್ರಮದಲ್ಲಿ ಜನರ ಪಾಲ್ಗೊಳ್ಳುವಿಕೆ

ಭಾರತ ಸರಕಾರ ಕೈಗೊಂಡ ಇತ್ತೀಚಿನ ಕೆಲವು ಬಡತನ ನಿರ್ಮೂಲನ ಕಾರ್ಯಕ್ರಮದಲ್ಲಿ ಜನರ ಪಾಲ್ಗೊಳ್ಳುವಿಕೆ ಬಹಳ ನಿಧಾನವಾಗಿ ಯಶಸ್ವಿಯಾಗುತ್ತದೆ. ಸರಕಾರ ಯಾವುದೇ ಯೋಜನೆ ಜಾರಿಗೆ ತಂದರೂ ಅದರಲ್ಲಿ ಜನರ ಭಾಗವಹಿಸುವಿಕೆ ಮುಖ್ಯವಾಗಿರುತ್ತದೆ. ಸರಕಾರದ ಯೋಜನೆಗಳು ಗ್ರಾಮೀಣ ಪ್ರದೇಶದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡರೆ ಆ ಗ್ರಾಮದ ಅಭಿವೃದ್ಧಿಗೆ ಖಂಡಿತವಾಗಿಯೂ ಪೂರಕವಾಗಿರುತ್ತದೆ.

ಸರಕಾರದ ಅನೇಕ ಯೋಜನೆಗಳು ಜನರಲ್ಲಿ ಪ್ರಭಾವ ಬೀರಲು, ವಿಫಲವಾಗಲು ಅನೇಕ ಕಾರಣಗಳಿವೆ. ಅನಕ್ಷರತೆ, ಬಡತನ, ತಿಳುವಳಿಕೆ ಇಲ್ಲದೆ ಇರುವುದು, ಮಾಧ್ಯಮಗಳ ಕೊರತೆ,

ಗ್ರಾಮ ಪಂಚಾಯತಿಯಿಂದ ಸರಿಯಾದ ಮಾಹಿತಿ ಲಭಿಸದೇ ಇರುವುದು, ಗ್ರಾಮ ಪಂಚಾಯತ್ ಸಭೆಗಳು, ವಾರ್ಡ್ ಸಭೆಗಳಲ್ಲಿ ಭಾಗವಹಿಸದೆ ಇರುವುದು ಮುಖ್ಯ ಕಾರಣಗಳು.

ಸರಕಾರದ ಬಡತನ ನಿರ್ಮೂಲನ ಕಾರ್ಯಕ್ರಮಗಳಲ್ಲಿ ಇತ್ತೀಚೆಗೆ ದಿನಗಳಲ್ಲಿ ಗ್ರಾಮೀಣ ಜನತೆ ಸ್ವಲ್ಪ ಮಟ್ಟಿಗೆ ಭಾಗವಹಿಸುತ್ತಿದ್ದಾರೆ. ಅದಕ್ಕೆ ಮುಖ್ಯ ಕಾರಣ. ಸ್ವ-ಸಹಾಯ ಗುಂಪುಗಳು ವಾರಕ್ಕೊಮ್ಮೆ ಸಭೆ ಸೇರುವುದರಿಂದ ಗ್ರಾಮದಲ್ಲಿ ಆಗುವ ಅಥವಾ ನಡೆಯುವ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಈ ಸ್ವ-ಸಹಾಯ ಗುಂಪುಗಳು ನಿರುದ್ಯೋಗ ಮತ್ತು ಬಡತನ ನಿವಾರಣೆಗಾಗಿ ಸರಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಸದಸ್ಯರಲ್ಲಿ ಅರಿವು ಮೂಡಿಸಿ ಅವರು ಅವುಗಳ ಪ್ರಯೋಜನ ಪಡೆದುಕೊಳ್ಳುವಂತೆ ಮಾಡುವುದು ಸ್ವ-ಸಹಾಯ ಗುಂಪುಗಳ ಪ್ರಮುಖ ಉದ್ದೇಶವಾಗಿರುತ್ತದೆ. ಈಗ ಸ್ವ-ಸಹಾಯ ಗುಂಪುಗಳು ಪ್ರಾರಂಭವಾದ ನಂತರ ಜನರಲ್ಲಿ ನಾಯಕತ್ವ ಗುಣಗಳು ಬೆಳೆಯಲಾರಂಭಿಸಿದೆ. ಈ ಸ್ವ-ಸಹಾಯ ಸಂಘಗಳಿಂದ ಕುಡಿತ, ಜೂಜು ವೈಶ್ಯಾವಾಟಿಕೆಗಳ ದಾಸರಾಗುವುದು. ಸ್ವಾಭಿಮಾನ ಶೂನ್ಯತೆಯಿಂದ ಅನ್ಯರ ದುಡ್ಡಿಗೆ ಕೈಚಾಚುವುದನ್ನು ತಪ್ಪಿಸಿದೆ. ಸ್ವ-ಸಹಾಯ ಗುಂಪಿನಿಂದಾಗಿ ಜನರ ಬಡತನ ಮತ್ತು ಬಡತನ ನಿರ್ಮೂಲನ ಕಾರ್ಯಕ್ರಮಗಳಲ್ಲಿ ಜನರು ಸಕ್ರೀಯವಾಗಿ ಭಾಗವಹಿಸುತ್ತಿದ್ದಾರೆ. ಈ ಸ್ವ-ಸಹಾಯ ಗುಂಪಿನಿಂದಾಗಿ ಗ್ರಾಮೀಣ ಜನರು ತಾವು ಪ್ರಯೋಜನ ಪಡೆದು ಇತರರನ್ನು ಪ್ರಯೋಜನ ಪಡೆಯಲು ಪ್ರೇರೇಪಿಸುತ್ತಿದ್ದಾರೆ.

ಬಡತನ ನಿರ್ಮೂಲನೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ

ಗ್ರಾಮೀಣಾಭಿವೃದ್ಧಿಯಲ್ಲಿ ಸ್ವ-ಸಹಾಯ ಸಂಘಗಳ ಪರಿಕಲ್ಪನೆ ಸುಮಾರು ೧೯೯೦ ರಲ್ಲಿ ಜನಪ್ರಿಯವಾಯಿತು. ಸಣ್ಣ ರೈತರು ತಮ್ಮಲ್ಲಿರುವ ಅಲ್ಪ ಜಮೀನನ್ನು ಬೇಸಾಯಕ್ಕಾಗಿ ತೊಡಗಿಸಿಕೊಳ್ಳಲು ಆಗುತ್ತಿರಲಿಲ್ಲ. ಬಡತನವೇ ಇದಕ್ಕೆ ಮೂಲ ಕಾರಣ ಅವರ ಜಮೀನಿನಲ್ಲಿ ಬೇಸಾಯಕ್ಕೆ ದುಡಿದರೆ ಬೇರೆ ಕಡೆ ಸಿಗುವ ಕೆಲಸ ತಪ್ಪುತ್ತಿತ್ತು. ಮನೆಗೆ ಸಿಗುವ ಸ್ವಲ್ಪ ಆದಾಯ ತಪ್ಪಿ ಜೀವನ ಮಾಡುವುದು ಕಷ್ಟವಾಗಿತ್ತು. ಇದಕ್ಕಾಗಿ ತಮ್ಮ ಜಮೀನಿನಲ್ಲಿ ಬೇಸಾಯ ಮಾಡದೆ ಬೇರೆ ಕಡೆ ಕೂಲಿಗೆ ಹೋಗುವುದು ಅನಿವಾರ್ಯವಾಗಿತ್ತು.

ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಉದ್ದೇಶಕ್ಕೆ ಈ ಸ್ವ-ಸಹಾಯ ಗುಂಪುಗಳು ಉದ್ದೇಶವು ಪೂರಕವಾಗಿತ್ತು. ಆಕಾಲಕ್ಕೆ ದೇಶದ ಅಭಿವೃದ್ಧಿ ಚಿಂತನೆಯಲ್ಲಿ ಗ್ರಾಮೀಣ ಅಭಿವೃದ್ಧಿ ಮುಂಚೂಣೆಯಲ್ಲಿತ್ತು. ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮೀಣ

ಅಭಿವೃದ್ಧಿ ಯೋಜನೆಗೆ ಮಾಡಿದ ಪ್ರಯತ್ನಗಳು ಆ ಕಾಲಕ್ಕೆ ಒಂದು ಒಂದು ನಿರ್ದಿಷ್ಟ ಹಂತವನ್ನು ತಲುಪಿತ್ತು. ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ 'ಸಮುದಾಯ ಅಭಿವೃದ್ಧಿ' ಕಲ್ಪನೆ ಬಳಿಕ ಕೃಷಿ ಅಭಿವೃದ್ಧಿ (ಹಸಿರು ಕ್ರಾಂತಿ) ಪ್ರಾಮುಖ್ಯತೆಯನ್ನು ಪಡೆಯಿತ್ತು. ಈ ಎರಡು ತಂತ್ರಗಳು ಸಾಲದು ಎಂದು ಮನವರಿಕೆಯಾದ ಕಾಲಕ್ಕೆ 'ಸಮಗ್ರ ಗ್ರಾಮೀಣ ಅಭಿವೃದ್ಧಿ' ಕಲ್ಪನೆ ಅಭಿವೃದ್ಧಿಗೆ ಸಹಾಯಕವಾಯಿತು.

ಗ್ರಾಮೀಣ ಬಡತನ ನಿರ್ಮೂಲನೆಯಲ್ಲಿ ಈ ಸ್ವ-ಸಹಾಯ ಸಂಘಗಳು ಅವಶ್ಯಕವಾದ ಮೂಲಭೂತ ಸೌಲಭ್ಯಗಳನ್ನು ಮನೆ ನಿರ್ಮಾಣ, ಆರೋಗ್ಯ, ಪಶುಸಂಗೋಪನೆ, ರೇಷ್ಮೆ ಕೃಷಿ, ಜೇನು ವ್ಯವಸಾಯ, ಗುಡಿ ಕೈಗಾರಿಕೆ ಈ ರೀತಿ ಉಪಚಟುವಟಿಕೆಗಳಿಗೆ ಬೇಕಾದ ಅನುದಾನವನ್ನು ಈ ಸ್ವ-ಸಹಾಯ ಗುಂಪುಗಳು ನೀಡಿತು.

ಗ್ರಾಮೀಣ ಬಡತನ ನಿರ್ಮೂಲನೆಯಲ್ಲಿ ಸ್ವ-ಸಹಾಯ ಗುಂಪುಗಳ ಪ್ರಮುಖ ಪಾತ್ರವನ್ನು ವಹಿಸಿದೆ. ಕರ್ನಾಟಕ ರಾಜ್ಯದಲ್ಲಿ ಮಹಿಳಾ ಸಬಲೀಕರಣದ ಉದ್ದೇಶದಿಂದ ೧೯೯೬ ರಲ್ಲಿ ಮಹಿಳಾ ಆಯೋಗವನ್ನು ರಚಿಸಲಾಗಿದೆ. ೨೦೦೧ರಲ್ಲಿ ಸ್ತ್ರೀಶಕ್ತಿ ಯೋಜನೆ ಜಾರಿ ಮಾಡಲಾಗಿದೆ. ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ೨೦೦೦ರದಲ್ಲಿ ಮಹಿಳಾ ಅಭಿವೃದ್ದಿ ಕ್ರಿಯಾ ಸಮಿತಿ ರಚಿಸಲಾಗಿದೆ. ಬಡ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ.

ಸ್ವ-ಸಹಾಯ ಗುಂಪುಗಳು ಗ್ರಾಮೀಣ ಬಡತನ ನಿರ್ಮೂಲನೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳೆಂದರೆ:

- ಸ್ವ-ಸಹಾಯ ಸದಸ್ಯರ ಉಳಿತಾಯ ಮನೋಭಾವನೆಯನ್ನು ವೃದ್ಧಿಸುವುದು.
- ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಸಾಲ ಪಡೆಯಲು ಸಹಕರಿಸುವುದು.
- ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಪ್ರತ್ಯೇಕವಾಗಿ ಕ್ಷೇಮನಿಧಿ ನಿರ್ಮಾಣ ಮಾಡುವುದು.
- ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಸರಕಾರದ ಅಭಿವೃದ್ಧಿ ಯೋಜನೆಗಳ ಬಗ್ಗೆ ತಿಳುವಳಿಕೆ ನೀಡುವುದು.

- ಅನಕ್ಷರಸ್ಥ ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಆರೋಗ್ಯ, ಶಿಕ್ಷಣದ ಬಗ್ಗೆ ಮಾಹಿತಿಯನ್ನು ನೀಡುವುದು.

- ಸ್ವ-ಸಹಾಯ ಗುಂಪಿನ ಸದಸ್ಯರಿಗೆ ವಿವಿಧ ರೀತಿಯ ತರಬೇತಿ ನೀಡುವುದರ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಪ್ರಯತ್ನಿಸಲಾಗುವುದು.

ಮಂಗಳೂರು ಮತ್ತು ಬೆಳ್ತಂಗಡಿಯಲ್ಲಿ ಸ್ವ-ಸಹಾಯ ಗುಂಪುಗಳು ಬಡತನ ನಿರ್ಮೂಲನೆಯಲ್ಲಿ ಪಾಲ್ಗೊಳ್ಳುವಿಕೆ:

ಶ್ರೀಕ್ಷೇತ್ರ ಧರ್ಮಸ್ಥಳದಿಂದ ಪ್ರಾರಂಭವಾದ ಈ ಸ್ವ-ಸಹಾಯ ಗುಂಪುಗಳು ಇದೀಗ ಕರ್ನಾಟಕ ರಾಜ್ಯದಂತಹಾ ವಿವಿಧ ರೀತಿಯ ತಂಡಗಳು ರಚನೆಯಾಗಿದೆ. ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ವ್ಯಾಪಕವಾಗಿ ಕಾರ್ಯ ಪ್ರವೃರ್ತವಾಗಿದೆ. ಮಂಗಳೂರು ತಾಲೂಕಿನಲ್ಲಿ ಮುಖ್ಯವಾಗಿ ಶಕ್ತಿನಗರ, ಪಾವೂರು, ತೊಕ್ಕೊಟ್ಟು, ಆಕಾಶ ಭವನ, ಮಲ್ಲಿಕಟ್ಟೆ, ಮಂಜನಾಡಿ, ಕಂಕನಾಡಿ, ಬೋಂದೆಲ್, ಕೊಂಚಾಡಿ, ದೇರೆಬೈಲು, ಪಂಜಿಮೊಗರು, ಶಾಂತಿನಗರ, ಕುಂಜತ್ತಬೈಲು, ಎಕ್ಕೂರು, ಕಲ್ಲಾಪು, ತಲಪಾಡಿ, ವಾಮಂಜೂರು, ಕೃಷ್ಣಾಪುರ, ಕಾಟಿಪಳ್ಳ, ಕೊಣಾಜೆ, ಮುಡಿಪು, ಅಸೈಗೋಳಿ, ಅಶೋಕನಗರ, ಗಾಂಧಿನಗರ, ಕೊಟ್ಟಾರ, ಉರ್ವ, ವೀರನಗರ, ಪೈಸಲ್ ನಗರ, ನೀರುಮಾರ್ಗ, ಅಡ್ಯಾರು, ವಳಚ್ಚಿಲ್, ಉಳ್ಳಾಲ, ಕುಂಪಲ, ಸೋಮೇಶ್ವರ, ಕೋಟೆಕಾರು, ಬೀರಿ, ಉಚ್ಚಿಲ್, ಹ್ಯೊಗೆಬಜಾರ್, ಕಾಪಿಕಾಡು, ಬೋಳೂರು, ಸುಲ್ತಾನ್ ಬತ್ತೇರಿ, ಕೋಡಿಕಲ್, ಹೊಸಬೆಟ್ಟು, ಕೂಳೂರು, ಕುಂಜತ್ತ್‌ಬೈಲು, ಬಿಕರ್ನಕಟ್ಟೆ, ಬೆಂಗರೆ, ಇನ್ನೂ ಅನೇಕ ಸ್ಥಳಗಳಲ್ಲಿ ಈ ಸ್ವ-ಸಹಾಯ ಗುಂಪುಗಳು ಕಾರ್ಯನಿರ್ವಹಿಸುತ್ತಿವೆ.

ಬೆಳ್ತಂಗಡಿ ತಾಲೂಕಿನಲ್ಲಿ ಮುಖ್ಯವಾಗಿ ಈ ಸ್ವ-ಸಹಾಯ ಗುಂಪುಗಳು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿವೆ. ಮುಖ್ಯವಾಗಿ ಬೆಳ್ತಂಗಡಿ ತಾಲೂಕಿನಲ್ಲಿ ಮಡ್ಯಂತಾರು, ಗುರುವಾಯನಕೆರೆ, ಪೂಂಜಲಕಟ್ಟೆ, ಉಜಿರೆ, ಲ್ಯಾಲ್ಯ, ನೆಟ್ಟಣಿ, ಸಂಜಯನಗರ, ವೇಣೂರು, ಕಕ್ಕೆಪದವು, ಚಾರ್ಮಾಡಿ, ಕಾಜೂರು, ಕಿಲ್ಲೂರು, ಗೇರುಕಟ್ಟೆ, ಗೋಳಿಯಂಗಡಿ, ಚಾರ್ಮಾಡಿ ಮುಂತಾದ ಪ್ರದೇಶಗಳಲ್ಲಿ ಬಹಳ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಈ ಸ್ವ-ಸಹಾಯ ಗುಂಪುಗಳು ಬಹಳ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಸರಕಾರದಿಂದ ದೊರೆಯುವ ಅನೇಕ ಸೌಲಭ್ಯಗಳನ್ನು ಗ್ರಾಮೀಣ ಮಟ್ಟದಲ್ಲಿ ಬಡಜನರಿಗೆ ತಲುಪಿಸಲು ಈ ಸ್ವ-ಸಹಾಯ ಗುಂಪುಗಳು ಯಶಸ್ವಿಯಾಗಿವೆ. ಸ್ವ-ಸಹಾಯ ಗುಂಪಿಗೆ ಸೇರಿದ ಬಹಳಷ್ಟು ಮಂದಿ ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಂಡಿದ್ದರೆ ಒಟ್ಟು ಈ ಸ್ವ-ಸಹಾಯ ಗುಂಪಿನ ಸದಸ್ಯನಾದರೆ ಅಥವಾ ಸದಸ್ಯೆಯಾದರೆ, ಅದರ ಪ್ರಯೋಜನಗಳು ಏನು ಎಂಬುವುದನ್ನು ಈ ಸ್ವ-ಸಹಾಯ ಗುಂಪಿನಿಂದ ಪಡೆಯಬಹುದು. ಮುಖ್ಯವಾಗಿ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಈ ಸ್ವ-ಸಹಾಯ ಗುಂಪುಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಸ್ವ-ಸಹಾಯ ಗುಂಪಿನ ಸದಸ್ಯರಾದ ನಂತರ ಬಡಜನರಲ್ಲಿ ಉಳಿತಾಯದ ಮನೋಭಾವನೆ ವೃದ್ಧಿಸಿದೆ. ಈ ಉಳಿತಾಯದಿಂದಾಗಿ ಬಡಜನರಲ್ಲಿ ಜೀವನಮಟ್ಟ ಉತ್ತಮಗೊಂಡಿದೆ. ಸದಸ್ಯರಿಗೆ ಅನೇಕ ರೀತಿಯ ತರಬೇತಿಯನ್ನು ನೀಡಿ, ನಿರುದ್ಯೋಗ ನಿರ್ಮೂಲನೆಯಲ್ಲಿ ಈ ಸ್ವ-ಸಹಾಯ ಗುಂಪುಗಳು ಬಹಳ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸ್ವ-ಸಹಾಯ ಗುಂಪಿಗೆ ಸೇರಿದ ಅನೇಕ ಜನರು ಇಂದು ಶೈಕ್ಷಣಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಮುನ್ನಡೆಯಲ್ಲಿ ಇದ್ದಾರೆ. ಈ ಸ್ವ-ಸಹಾಯ ಗುಂಪಿನ ಯಶಸ್ವಿನ ಹಿಂದೆ, ಸದಸ್ಯರ ಶ್ರಮವು ಒಳಗೊಂಡಿದೆ. ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಈ ಸ್ವ-ಸಹಾಯ ಗುಂಪುಗಳು ಬಹಳ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಸ್ತ್ರೀ ಸ್ವಾವಲಂಬನೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ

ಮಹಿಳೆಯರ ಸಮಾನತೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಹಲವು ಕಾಳಜಿಗಳನ್ನೊಳಗೊಂಡ ಜ್ಞಾನ ಭಂಡಾರವೇ ಮಹಿಳಾ ಅಧ್ಯಯನ ಮಹಿಳಾ ವಿಷಯ, ಸಮಸ್ಯೆ, ಸಮಸ್ಯೆಗಳಿಗೆ ಪರಿಹಾರ ಹಾಗೂ ಮಹಿಳೆಯರ ಅಭಿವೃದ್ಧಿಗೆ ಪರಿಹಾರ ಸೂಚಿಸುವ ಅದರ ಮೂಲಕ ಸಮಾಜದ ಮುಖ್ಯವಾಹಿನಿಯಲ್ಲಿ ಮಹಿಳೆಯರನ್ನು ಸಮಗ್ರಗೊಳಿಸುವುದರ ಅಧ್ಯಯನವೇ ಮಹಿಳಾ ಅಧ್ಯಯನ.

ಮಹಿಳಾ ಅಧ್ಯಯನದ ಮೂಲ ಉದ್ದೇಶವು ಸ್ತ್ರೀಯರ ಕುರಿತ ತಾರತಮ್ಯ ಧೋರಣೆಯನ್ನು ನಿವಾರಿಸಿ ಪುರುಷರಂತೆ ಸಮಾನವಾದ ಅವಕಾಶವನ್ನು ಮಹಿಳೆಯರಿಗೆ

ಕಲ್ಪಿಸುವುದಾಗಿದೆ. ಮಹಿಳೆಯರು ಅಬಲೆಯರಲ್ಲ ಅವರು ಸಬಲರು ಎನ್ನುವ ಕಲ್ಪನೆಯನ್ನು ಈ ಸ್ವ-ಸಹಾಯ ಗುಂಪುಗಳ ಮೂಲಕ ಮೂಡಿಸುವುದು.

ಗ್ರಾಮೀಣ ಮಹಿಳೆಯರ ಸಬಲೀಕರಣ ಮತ್ತು ಸ್ವಾವಲಂಬನೆ ಸ್ತ್ರೀ ಶಕ್ತಿ ಯೋಜನೆಯ ಮುಖ್ಯ ಉದ್ದೇಶ. ಈ ಯೋಜನೆಯು ದಿನಾಂಕ ೧೮-೧೦-೨೦೦೦ ರಂದು ಅನುಷ್ಠಾನಗೊಂಡಿತು. ರಾಜ್ಯದ ವಿವಿಧ ಅಂಗನವಾಡಿ ಎಲ್ಲಾ ತಾಲೂಕಿನ ೪೦೩೦೧ ಕೇಂದ್ರಗಳ ಮೂಲಕ ಒಂದು ಲಕ್ಷ ಸ್ವ-ಸಹಾಯ ಗುಂಪುಗಳನ್ನು ರಚಿಸುವ ಗುರಿ ಹೊಂದಲಾಗಿದೆ. ಪ್ರತಿ ಸ್ವ-ಸಹಾಯ ಗುಂಪಿನ ಸದಸ್ಯರುಗಳಿಗೆ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಫಲ ದೊರೆಯುವಂತೆ ಅವಕಾಶ ಕಲ್ಪಿಸುವುದು. ಮತ್ತು ಸಾಲ ಸೌಲಭ್ಯ ದೊರೆಯುವಂತೆ ಕ್ರಮ ಕೈಗೊಳ್ಳಲಾಗಿದೆ. ಪ್ರತಿಯೊಂದು ಗುಂಪಿಗೆ ಸುತ್ತು ನಿಧಿಯಾಗಿ ರೂಪಾಯಿ ೫,೦೦೦/- ದಂತೆ ನೀಡಲಾಗುತ್ತದೆ. ಪ್ರತಿ ಗುಂಪಿಗೆ ಅವಶ್ಯವಿರುವ ಪುಸ್ತಕ ಮತ್ತು ಟ್ರಂಕುಗಳನ್ನು ಒಳಗೊಂಡ ಕಿಟ್‌ಗಳನ್ನು ವಿತರಿಸಲಾಗುತ್ತದೆ. ಪ್ರತಿ ಕಿಟ್‌ನ ಬೆಲೆ ರೂಪಾಯಿ ೬೦೦/- ಇರುತ್ತದೆ. ೭೫,೦೦೦/- ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳವರೆಗೆ ಉಳಿತಾಯ ಮಾಡುವ ಗುಂಪುಗಳಿಗೆ ಬಲವರ್ಧನೆಗಾಗಿ ವಿವಿಧ ರೀತಿಯ ತರಬೇತಿಯನ್ನು ಸದಸ್ಯರಿಗೆ ನೀಡಲಾಗುತ್ತಿದೆ. ಗುಂಪಿನ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಮತ್ತು ಸಶಕ್ತೀಕರಣಕ್ಕಾಗಿ ಕೇಂದ್ರ ಸರಕಾರ ಜಾರಿಗೆ ತಂದ ಸಮಗ್ರ ಯೋಜನೆ 'ಸ್ವಯಂ ಸಿದ್ಧ' ಯೋಜನೆ ಬಡತನದಲ್ಲಿರುವ ಮಹಿಳೆಯರ ಸಂಘಟನೆ. ಸಂಘಟನೆಯ ಮೂಲಕ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ವಿವಿಧ ಸೇವೆಗಳನ್ನು ಒಗ್ಗೂಡಿಸುವುದು. ಸಣ್ಣ ಪ್ರಯಾಣದ ಸಾಲ ಸೌಲಭ್ಯಗಳಿಗೆ ಅವಕಾಶ ನೀಡುವುದು ಯೋಜನೆಯ ಉದ್ದೇಶವಾಗಿದೆ. ದಕ್ಷಿಣ ಕನ್ನಡದಲ್ಲಿ ಈ ಯೋಜನೆ ಬಹಳ ಸಮರ್ಪಕವಾಗಿ ಅನುಷ್ಠಾನಗೊಂಡಿದೆ.

ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಸ್ಥಾನಮಾನವನ್ನು ಸಮಾಜದಲ್ಲಿ ಹೆಚ್ಚಿಸಲು ಮತ್ತು ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಆರ್ಥಿಕ ಸಹಾಯವನ್ನು ಒದಗಿಸುವ ಯೋಜನೆಗಳಿವೆ. ಟಿ.ವಿ., ರೇಡಿಯೋಯಂತ್ರದ ರಚನೆ, ಗಡಿಯಾರ ರಿಪೇರಿ, ಬೆರಳಚ್ಚು ಮತ್ತು ಶೀಘ್ರ ಲಿಪಿ ತರಬೇತಿ ನೀಡಿ ಅವರಿಗೆ ಈ ನಿಟ್ಟಿನಲ್ಲಿ ಅವಶ್ಯವಿರುವ ನೈಪುಣ್ಯತೆ, ಕೌಶಲ್ಯ ಪಡೆಯಲು ಆರ್ಥಿಕ ನೆರವನ್ನು ಈ ಸ್ವ-ಸಹಾಯ ಗುಂಪುಗಳು ಗ್ರಾಮೀಣ ಮಟ್ಟದಲ್ಲಿ

ಮಾಡುತ್ತಿವೆ. ಸ್ತ್ರೀ ಶಕ್ತಿ ಗುಂಪುಗಳ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ನೀಡಿ ಖರೀದಿ ಮಾಡಲಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬೆಳ್ತಂಗಡಿಯಲ್ಲಿ ಈ ಸ್ವ-ಸಹಾಯ ಗುಂಪುಗಳು ನಡೆಸುವ ಕಿರು ಹಣಕಾಸಿನ ವ್ಯವಹಾರ, ಗ್ರಾಮೀಣ ಬಡ ಹೆಣ್ಣುಮಕ್ಕಳು ಆರ್ಥಿಕ ಮೂಲವಾಹಿನಿಯಲ್ಲಿ ತೊಡಗಿ, ಸ್ವಾವಲಂಬಿಗಳಾಗುವಂತೆ ಮಾಡಿದೆ. ಈ ಕಾರ್ಯಕ್ರಮದಿಂದಾಗಿ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಯೊಂದಿಗೆ ವ್ಯಾಪಾರ, ಸಣ್ಣ ಕೈಗಾರಿಕೆಗಳು ಗ್ರಾಮೀಣ ಪ್ರದೇಶದಲ್ಲಿ ಉತ್ತೇಜನ ಪಡೆದಿದೆ. ಸ್ವ-ಸಹಾಯ ಸಂಘಗಳ ಮೂಲಕ ನಡೆಯುವ ಈ ಕಿರು ಹಣಕಾಸಿನ ವ್ಯವಹಾರದ ಸಂಘಟನೆ, ಲೆಕ್ಕಪತ್ರ ಇಟ್ಟುಕೊಳ್ಳುವ ರೀತಿ, ಇದರ ಮೂಲಕ ಗ್ರಾಮೀಣ ಮಹಿಳೆಯರಿಗೆ ಸಿಗುವ ವ್ಯವಹಾರಿಕ ಜ್ಞಾನ, ಇದರಿಂದ ಅವರಿಗೆ ಸಿಗುವ ಆತ್ಮಸ್ಥೈರ್ಯ, ಅವರ ಜೀವನ ಕ್ರಮವನ್ನೇ ಬದಲಾಯಿಸಿದೆ.

ಅಧ್ಯಾಯ ೩: ನಿರುದ್ಯೋಗ ಮತ್ತು ಸ್ವ-ಸಹಾಯ ಗುಂಪುಗಳು

೩.೧ ಸರಕಾರದ ನಿರುದ್ಯೋಗ ನಿರ್ಮೂಲನಾ ಕಾರ್ಯಕ್ರಮಗಳು

೩.೨ ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ

೩.೩ ನಿರುದ್ಯೋಗ ನಿರ್ಮೂಲನೆಯಲ್ಲಿ ಸಂಘ ಸಂಸ್ಥೆಗಳ ಪಾತ್ರ

೩.೪ ನಿರುದ್ಯೋಗ ನಿರ್ಮೂಲನೆಯಲ್ಲಿ ಜನರ ಪಾಲ್ಗೊಳ್ಳುವಿಕೆ

೩.೫ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಸ್ವ-ಸಹಾಯ ಸಂಘಗಳ ನಿರುದ್ಯೋಗ ನಿರ್ಮೂಲನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಿಕೆ

೩.೬ ಉಳಿತಾಯ ಸಂಗ್ರಹಣೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ

ಅಧ್ಯಾಯ ೩: ನಿರುದ್ಯೋಗ ಮತ್ತು ಸ್ವ-ಸಹಾಯ ಗುಂಪುಗಳು

ನಿರುದ್ಯೋಗದ ಅರ್ಥ

ಆದಾಯ ಗಳಿಕೆಗಾಗಿ ಮಾಡುವ ದುಡಿಮೆಯೇ ಉದ್ಯೋಗ. ನಿರುದ್ಯೋಗವು ಮಾನಸಿಕವಾಗಿ ಮತ್ತು ದೈಹಿಕವಾಗಿ ಸಮರ್ಥರಾದವರಿಗೆ ಕೆಲಸ ಸಿಗದೆ ಇರುವ ಪರಿಸ್ಥಿತಿಯಾಗಿದೆ. ಉದ್ಯೋಗವಿದ್ದರೂ ಕೆಲಸ ಮಾಡಲು ಮನಸ್ಸಿಲ್ಲದಿದ್ದರೆ ಅದನ್ನು ಐಚ್ಛಿಕ ನಿರುದ್ಯೋಗ ಎಂದು ಕರೆಯುತ್ತಾರೆ. ಉದ್ಯೋಗವಿಲ್ಲದಿದ್ದರೂ ಕೆಲಸ ಮಾಡುವ ಮನಸ್ಸು ಮತ್ತು ಸಾಮಥ್ಯಗಳಿದ್ದರೆ ಅದು ಅನೈಚ್ಛಿಕ ನಿರುದ್ಯೋಗ ಎಂದು ಕರೆಯುತ್ತಾರೆ.

ನಿರುದ್ಯೋಗದ ವಿಧಗಳು

ಭಾರತದಲ್ಲಿ ನಿರುದ್ಯೋಗವನ್ನು ಅನೇಕ ವಿಧಗಳಲ್ಲಿ ವರ್ಗೀಕರಿಸಲಾಗಿದೆ. ಮುಖ್ಯವಾಗಿ ಗ್ರಾಮೀಣ ನಿರುದ್ಯೋಗ ಮತ್ತು ನಗರ ಪ್ರದೇಶದ ನಿರುದ್ಯೋಗ ಎಂದು ವಿಂಗಡಿಸಲಾಗಿದೆ. ಗ್ರಾಮೀಣ ಪ್ರದೇಶದ ನಿರುದ್ಯೋಗಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ.

- ಪ್ರಚ್ಛನ್ನ ನಿರುದ್ಯೋಗ: ಗ್ರಾಮೀಣ ಪ್ರದೇಶದಲ್ಲಿ ಕೃಷಿ ವಲಯ ಅಸ್ತಿತ್ವದಲ್ಲಿರುವ ಅಪೂರ್ಣೋದ್ಯೋಗಕ್ಕೆ ಪ್ರಚ್ಛನ್ನ ಅಥವಾ ಮರೆಮಾಚಿದ ನಿರುದ್ಯೋಗ ಎಂದು ಕರೆಯಲಾಗಿದೆ.

- ಋತು ಸಂಬಂಧಿ ನಿರುದ್ಯೋಗ ವರ್ಷದ ಕೆಲವು ಋತುಗಳಲ್ಲಿ ಮಾತ್ರ ಕಾಣಿಸಿಕೊಳ್ಳುವ ನಿರುದ್ಯೋಗಕ್ಕೆ ಋತು ಸಂಬಂಧೀ ನಿರುದ್ಯೋಗ ಎಂದು ಹೆಸರು. ಅಸಂಘಟಿತ ವಲಯದ ಎಲ್ಲಾ ಜನರು ಈ ನಿರುದ್ಯೋಗದ ಸಮಸ್ಯೆಯಿಂದ ಬಳಸುತ್ತಾರೆ.

ನಿರುದ್ಯೋಗಕ್ಕೆ ಕಾರಣಗಳು

- ಪ್ರತೀ ವರ್ಷ ಭಾರತದ ಜನಸಂಖ್ಯೆಯಲ್ಲಿ ೨.೫ ಕೋಟಿ ಜನಸಂಖ್ಯೆ ಹೆಚ್ಚಳವಾಗುತ್ತದೆ.

- ಭಾರತದ ಆರ್ಥಿಕ ಅಭಿವೃದ್ಧಿ ಪ್ರಕ್ರಿಯೆ ನಿಧಾನಗತಿಯಲ್ಲಿದೆ.

- ಸಮರ್ಪಕವಾಗಿ ಜಾತಿ ಪದ್ಧತಿ ನಿರ್ಮೂಲನೆಯಲ್ಲಿ ಅಸಡ್ಡೆ.

- ಭಾರತದ ಶಿಕ್ಷಣ ಪದ್ಧತಿ ಮಾನವ ಸಂಪನ್ಮೂಲಗಳ ಅಭಿವೃದ್ಧಿಯನ್ನು ಗುರಿಯನ್ನು ಹೊಂದಿರುವುದಿಲ್ಲ.

- ರಾಷ್ಟ್ರದ ಸಂಪತ್ತು ಉದ್ಯೋಗ ಸೃಷ್ಟಿಸಬಲ್ಲ ಹೂಡಿಕೆಗಳಿಗೆ ಬಳಕೆಯಾಗುವುದಿಲ್ಲ.

- ಭಾರತದಲ್ಲಿ ಕಪ್ಪು ಹಣದ ರುದ್ರ ತಾಂಡವಾಡುತ್ತಿದೆ.

- ತರಬೇತಿ ಮತ್ತು ಕೌಶಲ್ಯಗಳ ದುರ್ಬಳಕ್ಕೆಯಾಗುತ್ತಿದೆ.

ನಿರುದ್ಯೋಗ ನಿವಾರಣೋಪಾಯಗಳು

ಭಾರತ ಸರಕಾರವು ನಿರುದ್ಯೋಗ ನಿರ್ಮೂಲನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿವೆ. ಆದರೆ ಆ ಯೋಜನೆಗಳ ಪ್ರಮಾಣಿಕ ಅನುಷ್ಠಾನವಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಮಾಹಿತಿ ಕೊರತೆ ಮತ್ತು ಬಡತನದಿಂದ ನಿರುದ್ಯೋಗ ನಿವಾರಣೆ ಸಮರ್ಪಕವಾಗಿ ನಡೆದಿಲ್ಲ. ಭಾರತದಲ್ಲಿ ನಿರುದ್ಯೋಗ ನಿವಾರಣೋಪಾಯಗಳು ಈ ಕೆಳಗಿನಂತಿವೆ:

- ಕಡ್ಡಾಯವಾಗಿ ಕುಟುಂಬ ಯೋಜನೆಯ ಜಾರಿಗೊಳಿಸುವುದು.

- ಉದ್ಯೋಗವನ್ನು ಮನುಷ್ಯನ ಮೂಲಭೂತ ಹಕ್ಕಾಗಿಸುವುದು.

- ಭೂ ಸುಧಾರಣೆಗಳ ಸಮರ್ಪಕವಾಗಿ ಅನುಷ್ಠಾನ ಮಾಡುವುದು.

- ಕಪ್ಪು ಹಣವನ್ನು ತಡೆಗಟ್ಟುವುದು.

- ಸಮರ್ಪಕವಾಗಿ ಶಿಕ್ಷಣ ಪದ್ಧತಿಯ ತಳಮಟ್ಟದಿಂದ ಜಾರಿಗೊಳಿಸುವುದು.

- ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಬೇಕು.

- ಸಾಮಾಜಿಕ ಅನಿಷ್ಟಗಳಿಗೆ ಕಾರಣವಾಗಿರುವ ಜಾತಿ ಪದ್ಧತಿಯನ್ನು ನಿವಾರಿಸಬೇಕು.

- ಅಸಂಘಟಿತ ವಲಯದಲ್ಲಿ ದುಡಿವ ಕೆಲಸಗಾರರಿಗೆ ಉದ್ಯೋಗ ಭದ್ರತೆ ಮತ್ತು ಸೇವಾ ಭದ್ರತೆಯನ್ನು ನೀಡುವುದು.

- ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸಿ, ವಲಸೆಗಾರರ ಸಂಖ್ಯೆಯ ಇಳಿಸುವುದರ ಮೂಲಕ ನಿರುದ್ಯೋಗವನ್ನು ನಿವಾರಿಸಲು ಪ್ರಯತ್ನಿಸಬಹುದು.

ಸರಕಾರದ ನಿರುದ್ಯೋಗ ನಿರ್ಮೂಲನ ಕಾರ್ಯಕ್ರಮಗಳು

ಭಾರತ ಸರಕಾರ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆ ಮಾಡಲು ಅನೇಕ ಯೋಜನೆಗಳನ್ನು ಪ್ರಾರಂಭಿಸಿದೆ. ಸರಕಾರದ ಅನೇಕ ಯೋಜನೆಗಳು ಹಳೆಯ ಯೋಜನೆಗಳನ್ನು ಹೊಸ ಯೋಜನೆಗಳಲ್ಲಿ ವಿಲೀನಗೊಳಿಸಿದೆ. ಸರಕಾರವು ಅನೇಕ ಯೋಜನೆಗಳನ್ನು ಪ್ರಾರಂಭಿಸಿದರೂ, ಅದು ಸಮರ್ಪಕವಾಗಿ ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಗೊಳ್ಳಲಿಲ್ಲ. ಅದಕ್ಕೆ ಮುಖ್ಯವಾದ ಕಾರಣವೆಂದರೆ, ಮಾಹಿತಿ ಕೊರತೆ, ಬಡತನ, ನಿರುದ್ಯೋಗ, ಅಜ್ಞಾನ, ಇವುಗಳು ಮುಖ್ಯ ಕಾರಣಗಳಿವೆ. ಸರಕಾರದ ನಿರುದ್ಯೋಗ ನಿರ್ಮೂಲನ ಕಾರ್ಯಕ್ರಮಗಳು ಜಾರಿಗೊಳಿಸಿದೆ ಅವುಗಳೆಂದರೆ:

- ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆಯಲ್ಲಿ ಮುಖ್ಯವಾಗಿ ಪ್ರಾಥಮಿಕ ಆರೋಗ್ಯ, ಪ್ರಾಥಮಿಕ ಶಿಕ್ಷಣ, ಗ್ರಾಮೀಣ ಸವಲತ್ತು ಕುಡಿಯುವ ನೀರಿನ ಪೂರೈಕೆಗೆ ಒತ್ತು ನೀಡಲಾಗಿದೆ.

- ಭಾರತ ನಿರ್ಮಾಣ ಯೋಜನೆಯಲ್ಲಿ ಮುಖ್ಯವಾಗಿ ರಸ್ತೆಗಳು, ಗೃಹ ಸೌಕರ್ಯ, ನೀರು ಪೂರೈಕೆ, ಗ್ರಾಮೀಣ ರಸ್ತೆ ಸಂಪರ್ಕಗೆ ಒತ್ತು ನೀಡಲಾಗಿದೆ.

- ಬಡತನ ರೇಖೆಗಿಂತ ಕೆಳಗಿನವರಿಗೆ ಅಂತ್ಯೋದಯ ಅನ್ನಯೋಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

- ಆಹಾರ, ವಸನ, ಮತ್ತು ವಸತಿ ಇವು ಮಾನವನ ಮೂಲ ಅವಶ್ಯಕತೆಗಳು ಎಂದು ತಿಳಿದು ವಾಲ್ಮೀಕಿ–ಅಂಬೇಡ್ಕರ್ ಆವಾಸ್ ಯೋಜನೆಯನ್ನು ಪ್ರಾರಂಭಿಸಲಾಗಿದೆ.

- ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ ಯೋಜನೆಯ ಪ್ರಾರಂಭಿಸಿ ಬಡತನ ನಿವಾರಣೆ ಮತ್ತು ಸಾಲ ಸೌಲಭ್ಯಗಳನ್ನು ಒದಗಿಸಲಾಗಿದೆ.

- ಸ್ವರ್ಣ ಜಯಂತಿ ಶಹರಿ ರೋಜಗಾರ ಯೋಜನೆಯಲ್ಲಿ ಸ್ವೋದ್ಯೋಗ ನಿರ್ಮಾಣ, ನಗರ ಬಡತನ ನಿರ್ಮೂಲನೆ ಹೋಗಲಾಡಿಸಲಾಗಿದೆ.

- ಗ್ರಾಮೀಣ ಪ್ರದೇಶದಲ್ಲಿ ಸರ್ವಋತು ಸುಗಮ ಸಂಚಾರ ರಸ್ತೆ ನಿರ್ಮಾಣಕ್ಕಾಗಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಪ್ರಾರಂಭಿಸಲಾಗಿದೆ.

- ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ನಿರ್ಮಾಣಕ್ಕಾಗಿ ಮಹಾತ್ಮ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪ್ರಾರಂಭಿಸಲಾಗಿದೆ.

ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ:

ನಿರುದ್ಯೋಗವನ್ನು ತಳಮಟ್ಟದಿಂದ ಬೇರ್ಪಡಿಸಲು ಸರಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ನಿರುದ್ಯೋಗ ಸಮಸ್ಯೆ ಇಂದಿಗೂ ಸಂಪೂರ್ಣ ನಿರ್ಮೂಲನೆಯಾಗಲಿಲ್ಲ. ಆದ್ದರಿಂದ ಸರಕಾರದ ಕಾರ್ಯಕ್ರಮಗಳು ಗ್ರಾಮೀಣ ಪ್ರದೇಶದಲ್ಲಿ ಯಶಸ್ವಿಯಾಗಲಿಲ್ಲ. ಸರಕಾರದ ಕಾರ್ಯಕ್ರಮಗಳನ್ನು ಜನರಿಗೆ ಸರಿಯಾದ ಮಾಹಿತಿ ನೀಡಿ ಅದನ್ನು ಯಶಸ್ವಿಗೊಳಿಸಲು ಇತ್ತೀಚಿನ ದಿನಗಳಲ್ಲಿ ಸ್ವ-ಸಹಾಯ ಗುಂಪುಗಳು ಪ್ರಾರಂಭವಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಕೃಷಿಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಬಡಜನರು ಇದೀಗ ಸ್ವ-ಸಹಾಯ ಗುಂಪಿನ ಸದಸ್ಯರಾಗಿ ತಮ್ಮ ಜೀವನ ಮಟ್ಟದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದಾರೆ. ಈ ಸ್ವ-ಸಹಾಯ ಗುಂಪಿನಿಂದಾಗಿ ಅನೇಕರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ವ-ಸಹಾಯ ಗುಂಪುಗಳು ಇತ್ತೀಚಿನ ದಿನಗಳಲ್ಲಿ ಕೃಷಿಯೇತರ ಚಟುವಟಿಕೆಗಳಾದ ಜೇನು ಕೃಷಿ ತರಬೇತಿ, ಮಲ್ಲಿಗೆ ಕೃಷಿ, ಉಪ್ಪಿನಕಾಯಿ ತಯಾರಿಕೆ, ಊದು ಬತ್ತಿ ತರಬೇತಿ, ಮೇಣದ ಬತ್ತಿ ತಯಾರಿಕೆ ತರಬೇತಿ, ಸಾಬೂನು ತಯಾರಿಕೆ, ಮುಂತಾದ ಅನೇಕ ಕಾಯಕ್ರಮಗಳನ್ನು ಸ್ವ-ಸಹಾಯ ಗುಂಪಿನಿಂದ ಮಾಡಲಾಗಿದೆ.

ಸ್ವ-ಸಹಾಯ ಗುಂಪು ಪ್ರಾರಂಭವಾದ ನಂತರದ ಸಂದರ್ಭದಲ್ಲಿ ಬೆಳ್ತಂಗಡಿ ಮತ್ತು ಮಂಗಳೂರು ತಾಲೂಕಿನಲ್ಲಿ ಅನೇಕ ಬದಲಾವಣೆಗಳು ಆಗಿವೆ. ಸ್ವ-ಸಹಾಯ ಗುಂಪು ಪ್ರಾರಂಭವಾಗದಕ್ಕೆ ಮೊದಲು ಬಹುತೇಕ ಸಣ್ಣ ರೈತರ ಮನೆಯ ಮುಂದೆ ಕೂಡಾ ಒಂದೆರಡು ತೆಂಗಿನ ಮರಗಳು ಹಾಗೂ ತರಕಾರಿ ಗಿಡಗಳು ಇರಲಿಲ್ಲ. ದಿನ ಬಳಕೆಗೆ ಬೇಕಾದ ತೆಂಗಿನಕಾಯಿ ಹಾಗೂ ತರಕಾರಿ ಹಣಕೊಟ್ಟು ತರಬೇಕಾದ ದುಸ್ಥಿತಿ ಇತ್ತು. ಈಗ ನೋಡಿದರೆ ಪವಾಡ ಸದೃಶ್ಯ

ಬದಲಾವಣೆಯಾಗಿದೆ. ಐದು ಸೆಂಟ್ಸಿನ ಕಾಲನಿ ಮನೆಗಳನ್ನು ವಾಸಿಸುತ್ತಿರುವ ಮನೆ ಮುಂದೆ ಕೂಡ ಫಲ-ಭರಿತವಾಗಿ ತಲೆಬಾಗುವ ಕಲ್ಪವೃಕ್ಷಗಳ ಮತ್ತು ತರಕಾರಿ ಗಿಡಗಳ ಹೃದಯಂಗಮ ದೃಶ್ಯವನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಈ ಸ್ವ-ಸಹಾಯ ಗುಂಪುಗಳು ಶ್ರಮದಾನದ ಮೂಲಕ ಪ್ರತಿಯೊಬ್ಬರ ನಿರುದ್ಯೋಗ ನಿವಾರಣೆಗೆ ಸಾಕ್ಷಿಯಾಗಿದೆ.

ಮಳೆಗಾಲದಲ್ಲಿ ಆಕಾಶದಿಂದ ಉದುರಿದ ಹನಿ ಹನಿ ನೀರು ಕೂಡ ಅರಬ್ಬಿ ಸಮುದ್ರದೆಡೆಗೆ ದಾಪುಗಾಲು ಹಾಕದೆ ಭೂಗರ್ಭದೊಳಗೆ ಇಳಿದು ಇಂಗಿ ಹಸಿರುಡುಗೆಗೆ ಹೊನ್ನ ಕಲಶವಿಡಲೆಂಬ ಸದಾಶಯದಿಂದ ಮಳೆನೀರು ಇಂಗಿಸುವ ಸಹಸ್ರಾರು ಇಂಗು ಗುಂಡಿಗಳು, ಮಳೆ ನೀರನ್ನು ತೊಟ್ಟಿಗಳಲ್ಲಿ ಸಂಗ್ರಹಿಸಿ ಶುದ್ಧೀಕರಿಸಿ ಬಳಸುವ ಪ್ರಯೋಗಗಲ್ಲೂ ರೈತರು ಮೇಲುಗೈ ಸಾಧಿಸಲು ಈ ಸ್ವ-ಸಹಾಯ ಗುಂಪುಗಳು ಕಾರಣವಾಗಿದೆ.

ಸ್ವ-ಸಹಾಯ ಗುಂಪುಗಳು ಪ್ರಾರಂಭವಾದ ನಂತರ ಸಂಘದ ಸದಸ್ಯರಿಗೆ, ತೆಂಗು, ಅಡಿಕೆ, ಗೇರು, ರಬ್ಬರು, ಭತ್ತ ಬಾಳೆ, ತರಕಾರಿ ವೀಳ್ಯದೆಲೆ, ಮುಂತಾದ ವಸ್ತುಗಳನ್ನು ಬೆಳೆಸಲು ಸಾಲ ಒದಗಿಸಿ ಕೃಷಿಯ ಅಭಿವೃದ್ಧಿಗೆ ಸಹಾಯ ಮಾಡಿದೆ. ಆದ್ದರಿಂದ ಈ ಸ್ವ-ಸಹಾಯ ಗುಂಪುಗಳು ನಿರುದ್ಯೋಗವನ್ನು ಸ್ವಲ್ಪ ಮಟ್ಟಿಗೆ ನಿರ್ಮೂಲನೆ ಮಾಡಿ ಜನರಿಗೆ ಉದ್ಯೋಗ ಮತ್ತು ಉಳಿತಾಯದ ಮನೋಭಾವನೆಯನ್ನು ಬೆಳೆಸಲು ಕಾರಣವಾಗಿದೆ.

ನಿರುದ್ಯೋಗ ನಿರ್ಮೂಲನೆಯಲ್ಲಿ ಸಂಘ ಸಂಸ್ಥೆಗಳ ಪಾತ್ರ

ನಿರುದ್ಯೋಗ ಮತ್ತು ಗ್ರಾಮೀಣಾಭಿವೃದ್ಧಿ ಚಟುವಟಿಕೆಯಲ್ಲಿ ನಿರಂತರವಾಗಿರುವಕ ಸ್ವಯಂ ಸೇವಾ ಸಂಸ್ಥೆಗಳು ಹೇಗಿರಬೇಕು? ಯಾವ ಚಟುವಟಿಕೆಯಲ್ಲಿ ನಿರಂತರವಾಗಿರಬೇಕು? ಯಾವ ಮಾದರಿಯನ್ನು ಅನುಸರಿಸಬೇಕು? ಎಂಬುದನ್ನು ವಿವಿಧ ಸಂಘಸಂಸ್ಥೆಗಳಿಂದ ತಿಳಿಯಬಹುದು. ಗ್ರಾಮೀಣಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಪ್ರೇರಕ ಪಾತ್ರವನ್ನು ವಹಿಸಬೇಕೇ ವಿನಃ ನಿರ್ದೇಶನ ಪಾತ್ರ ವಹಿಸ ಕೂಡದು.

ಸ್ವ-ಸಹಾಯ ಸಂಸ್ಥೆಗಳು ಜನ ಸಾಮಾನ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡೆ ಯೋಜನೆಯನ್ನು ರೂಪಿಸುತ್ತದೆ. ಯೋಜನೆಯನ್ನು ಪ್ರಾರಂಭಿಸುವುದರ ಮೊದಲ ಸ್ಥಳೀಯ ಗ್ರಾಮೀಣ ಪರಿಸರವನ್ನು ಅಧ್ಯಯನ ಮಾಡಬೇಕಾಗುತ್ತದೆ. ಆ ಪ್ರದೇಶದಲ್ಲಿ ಲಭ್ಯವಿರುವ ಸಂಪನ್ಮೂಲ, ಮೂಲಭೂತ ಸೌಕರ್ಯ, ತಂತ್ರಜ್ಞಾನದ ಲಭ್ಯತೆ ಇತ್ಯಾದಿ ಅಂಶಗಳನ್ನು ಅಧ್ಯಯನ

ಮಾಡಿಕೊಂಡು, ತೆಗೆದುಕೊಳ್ಳುವ ನಿರ್ಧಾರದಲ್ಲಿ ಸಂಘ ಸಂಸ್ಥೆಗಳು ಮಹತ್ತರ ಕೊಡುಗೆಯನ್ನು ನೀಡುವುದರ ಮೂಲಕ ಗ್ರಾಮೀಣ ಬಡಜನರ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತವೆ.

ಗ್ರಾಮೀಣ ಬಡಜನರಿಗೆ ಈ ಸಂಘ ಸಂಸ್ಥೆಗಳು ತರಬೇತಿಯನ್ನು ನೀಡಿ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಸಮಗ್ರವಾದ ಮಾಹಿತಿಯನ್ನು ನೀಡುತ್ತದೆ. ಸಂಘ–ಸಂಸ್ಥೆಗಳಿಂದ ಜನರಿಗೆ ಸರಿಯಾದ ಸಮಯದಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ನಡೆಸಿ ಅವರ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಬಹಳ ಕೊಡುಗೆಯನ್ನು ನೀಡಿವೆ, 'ಜನ ಜಾಗೃತಿ' ಕಾರ್ಯಕ್ರಮದ ಮೂಲಕ ಜನರಲ್ಲಿ ತಿಳುವಳಿಕೆ ನೀಡಿ ಅವರ ಜೀವನ ಮಟ್ಟ ಸುಧಾರಿಸಲು ಸಂಘ ಸಂಸ್ಥೆಗಳು ಕಾರ್ಯಕ್ರಮವನ್ನು ನೀಡುತ್ತಿವೆ. ಸಂಪೂರ್ಣ ಸುರಕ್ಷಾ ಯೋಜನೆಯ ಮೂಲಕ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ ಗ್ರಾಮೀಣ ಆರೋಗ್ಯ ಮತ್ತು ಗ್ರಾಮೀಣ ಕಲ್ಯಾಣ ಯೋಜನೆಯಡಿ ಗ್ರಾಮೀಣ ಜನರ ಸಹಭಾಗಿತ್ವದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಈ ಸಂಘ ಸಂಸ್ಥೆಗಳು ಕಾರಣವಾಗಿವೆ.

ನಿರುದ್ಯೋಗ ನಿರ್ಮೂಲನೆಯಲ್ಲಿ ಜನರ ಪಾಲ್ಗೊಳ್ಳುವಿಕಲ್

ದೇಶದ ಸಂವಿಧಾನದಲ್ಲಿ ಹಕ್ಕುಗಳು ಮತ್ತು ಕರ್ತವ್ಯಕ್ಕೆ ವಿಶೇಷ ಮೌಲ್ಯವಿದೆ. ಮೇಲೆ ಹೇಳಿರುವಂತಹ ಸ್ವಾತಂತ್ರ್ಯದ ಪರಿಕಲ್ಪನೆಗೆ ಈ ಹಕ್ಕುಗಳು ಸ್ಪಷ್ಟ ವಿಶ್ಲೇಷನೆ ಕೊಡುತ್ತದೆ. ಜೊತೆಗೆ ನಮ್ಮ ಮೂಲಭೂತ ಹಕ್ಕುಗಳಾದ ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಮೊದಲಾದವುಗಳೊಂದಿಗೆ, ಸಂವಿಧಾನ್ಮಾತಕ ಪರಿಹಾರಗಳ ಹಕ್ಕು ಎಂಬುದು ಮೂಲಭೂತ ಹಕ್ಕುಗಳ ಪಟ್ಟಿಗೆ ಸೇರಿದೆ. ಜೊತೆಗೆ ಹಲವಾರು ಬದುಕುವ ಹಕ್ಕುಗಳು ರಾಜಕೀಯ ಹಕ್ಕುಗಳನ್ನು ನಮ್ಮ ಸಂವಿಧಾನ ನೀಡಿದೆ. ಇದು ಎಷ್ಟರ ಮಟ್ಟಿಗೆ ಜಾರಿಯಾಗಿದೆ ಎಂಬುದನ್ನು ನಾವು ಆಲೋಚಿಸಬೇಕಾಗಿದೆ.

ಭಾರತ ಸರಕಾರ ನಿರುದ್ಯೋಗ ನಿರ್ಮೂಲನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ, ಈ ಕಾರ್ಯಕ್ರಮದಲ್ಲಿ ಜನರು ಮಾತ್ರ ನಿರಸ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಸರಕಾರದ ಯಾವುದೇ ಜನಪರ ಕಾರ್ಯಕ್ರಮ ಯಶಸ್ವಿಗೊಳಿಸಬೇಕಾದರೆ ಜನರ ಭಾಗವಹಿಸುವಿಕೆ ಅತೀ ಮುಖ್ಯ. ಇಲ್ಲದೆ ಹೋದರೆ ಬಡತನ ಬಡತನವಾಗಿಯೇ ಉಳಿಯುತ್ತದೆ. ನಿರುದ್ಯೋಗ ನಿರುದ್ಯೋಗವಾಗಿಯೇ ಉಳಿಯುತ್ತದೆ. ಅದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಇದೀಗ ಸ್ವ–ಸಹಾಯ

ಗುಂಪುಗಳು ಜನರಿಗೆ ತಿಳುವಳಿಕೆಯನ್ನು ನೀಡುವ ಮತ್ತು ಜ್ಞಾನವನ್ನು ವೃದ್ಧಿಸುವ ಕೆಲಸವನ್ನು ಮಾಡುತ್ತಿವೆ.

ಈಗ ಸ್ವ-ಸಹಾಯ ಗುಂಪುಗಳು ಸರಕಾರದ ಮಹತ್ತರವಾದ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ತಲುಪಿಸಲು ಸಹಾಯಕವಾಗಿದೆ. ಈ ಸ್ವ-ಸಹಾಯ ಗುಂಪಿನ ಸದಸ್ಯರಾದ ನಂತರ ಅನೇಕ ಮಂದಿ ಗ್ರಾಮೀಣ ಪ್ರತಿಭೆಗಳು, ಶೈಕ್ಷಣಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಮುನ್ನಡೆಯುತ್ತಿರಬೇಕಾದರೆ ಅದಕ್ಕೆ ಮುಖ್ಯ ಕಾರಣ ಸ್ವ-ಸಹಾಯ ಗುಂಪುಗಳು. ಸ್ವ-ಸಹಾಯ ಗುಂಪಿನ ಸದಸ್ಯರಾದ ಮೇಲೆ ಜನರಿಗೆ ಸರಿಯಾದ ಮಾಹಿತಿಯನ್ನು ನೀಡಿ, ಸರಕಾರದ ಕಾರ್ಯಕ್ರಮಗಳಲ್ಲಿ ಜನರು ಭಾಗವಹಿಸುವಂತೆ ಗ್ರಾಮೀಣ ಪ್ರದೇಶದಲ್ಲಿ ಸ್ವ-ಸಹಾಯ ಗುಂಪುಗಳು ಕಾರ್ಯೋನ್ಮುಖವಾಗಿವೆ.

ಮಂಗಳೂರು ಮತ್ತು ಬೆಳ್ತಂಗಡಿಯಲ್ಲಿ ಸ್ವ-ಸಹಾಯ ಗುಂಪುಗಳ ನಿರುದ್ಯೋಗ ನಿರ್ಮೂಲನ ಕಾರ್ಯಕ್ರಮಗಳು

ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯವಾಗಿ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕು ಸ್ವ-ಸಹಾಯ ಗುಂಪುಗಳು ಅತೀ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತೇವೆ, ಹಿಂದೆ ಹೀಗೊಂದು ಮಾತು ಇತ್ತು. ಹೆಚ್ಚು ವಿದ್ಯಾವಂತರಾದಷ್ಟು, ಕೋಮುವಾದ, ಜಾತಿ ಭೇದ, ಮೂಢನಂಬಿಕೆಗಳು ದೂರವಾಗುತ್ತದೆ ಎಂದು ಜನರು ತಿಳಿದುಕೊಂಡಿದ್ದರು. ಆದರೆ ನಿಜ ಪರಿಸ್ಥಿತಿಯೇನು? ಆಧುನಿಕತೆ ಬೆಳೆದಂತೆ, ಮೂಢನಂಬಿಕೆಗಳು, ಡೋಂಗಿ ಸಾಧು ಸಂತರು ಲಕ್ಷಾಂತರ ಖರ್ಚಿನ ವೈಭವದ ದುಂದುಗಾರಿಕೆಯ ಆಚರಣೆಗಳು ಹೆಚ್ಚುತ್ತಿರುವುದನ್ನು ಕಾಣಬಹುದು. ನಮ್ಮ ಹಿರಿಯರು ಕಂಡ ಕನಸು ನುಚ್ಚುನೂರಾಗಿದೆ. ಆದರ್ಶಗಳು ಪೊಳ್ಳಾಗಿವೆ. ಆದರೆ ಇದಕ್ಕೆಲ್ಲ ಒಂದು ಪರಿಹಾರವನ್ನು ರೂಪಿಸದಿದ್ದರೆ ಕನಿಷ್ಠ ಜಾಗೃತಿಯನ್ನಾದರೂ ಮಾಡಿದ್ದರೆ ದೇಶಕ್ಕೆ ಭವಿಷ್ಯವಿಲ್ಲ. ಯುವ ಜನತೆಯಲ್ಲಿ ಅಪಾರವಾದ ಶಕ್ತಿಯಿದೆ. ಅದು ಕೆಟ್ಟ ಹಾದಿಯಲ್ಲಿ ಹೋಗದಂತೆ ಜಾತ್ಯಾತೀತ ಮನೋಭಾವವನ್ನು ಬೆಳೆಸಲು ಸುಮಾರು ೨೦ ವರ್ಷದ ಹಿಂದೆ ಧರ್ಮಸ್ಥಳದಲ್ಲಿ ಪ್ರಾರಂಭವಾದ ಸ್ವ-ಸಹಾಯ ಗುಂಪುಗಳು ಇಂದು ದೇಶವ್ಯಾಪ್ತಿ ಪಸರಿಸಿವೆ.

ಧರ್ಮಸ್ಥಳದ ಗ್ರಾಮೀಣ ನಿರುದ್ಯೋಗ ನಿವಾರಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ಬೆಳ್ತಂಗಡಿ ಮತ್ತು ಮಂಗಳೂರು ತಾಲೂಕಿನಲ್ಲಿ ಪ್ರಾರಂಭಿಸಿವೆ. ಮುಖ್ಯವಾಗಿ ಮಂಗಳೂರು ಮತ್ತು

ಬೆಳ್ತಂಗಡಿಯಲ್ಲಿ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಗೆ ಅನೇಕ ಸ್ವ-ಸಹಾಯ ಗುಂಪುಗಳನ್ನು ಪ್ರಾರಂಭಿಸಿವೆ ಮುಖ್ಯವಾದವುಗಳೆಂದರೆ

- ಪ್ರಗತಿ ಬಂಧು ಸ್ವ-ಸಹಾಯ ಗುಂಪು
- ಜ್ಞಾನ ವಿಕಾಶ ಕೇಂದ್ರಗಳು
- ಸ್ವ-ಸಹಾಯ ಸಂಘಗಳು
- ನಗರ ಅಭಿವೃದ್ಧಿ ಸಂಘಗಳು
- ನವೋದಯ ಸ್ವ-ಸಹಾಯ ಸಂಘಗಳು
- ನಾಗರಿಕ ಸೇವಾ ಸಮಿತಿಗಳು
- ಒಡಿಯೂರು ದತ್ತಗುರು ಜ್ಞಾನ ವಿಕಾಸ ಗ್ರಾಮೀಣ ಅಭಿವೃದ್ಧಿ ಸಂಘಗಳು.

ಈ ಮೇಲೆ ತಿಳಿಸಿದ ಎಲ್ಲಾ ಸ್ವ-ಸಹಾಯ ಗುಂಪುಗಳು ಮಂಗಳೂರು ತಾಲೂಕು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿವೆ. ಮಂಗಳೂರು ತಾಲೂಕಿನಲ್ಲಿ ಮುಖ್ಯವಾಗಿ ನಗರ ಸ್ವ-ಸಹಾಯ ಸಂಘಗಳು ಮತ್ತು ಗ್ರಾಮೀಣ ಸ್ವ-ಸಹಾಯ ಸಂಘಗಳು ಎಂದು ಎರಡು ವಿಧಗಳಿವೆ. ಗ್ರಾಮೀಣ ಪ್ರದೇಶದಲ್ಲಿ ಮುಖ್ಯವಾಗಿ ಅನೇಕ ಸ್ಥಳಗಳಲ್ಲಿ ಈ ಸ್ವ-ಸಹಾಯ ಗುಂಪುಗಳು ಬಹಳ ಮುನ್ನಡೆಯಲ್ಲಿ ಇವೆ. ನಗರ ಪ್ರದೇಶದ ಜನರು ವಿದ್ಯಾವಂತರಲ್ಲಿ ಈ ಸ್ವ-ಸಹಾಯ ಗುಂಪಿಗೆ ಸೇರಲು ಸಮಯದ ಮತ್ತು ಕೆಲಸದ ಒತ್ತಡ ಇರುವುದರಿಂದ ಆಸಕ್ತಿ ಸ್ವಲ್ಪ ಮಟ್ಟಿಗೆ ಕಡಿಮೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಉಳಿತಾಯ ಭಾವನೆ ಮೂಡಿರುವುದರಿಂದ ಒಂದು ಮನೆಯಲ್ಲಿ ಕನಿಷ್ಠ ಒಬ್ಬರದರೂ ಈ ಸ್ವ-ಸಹಾಯ ಗುಂಪಿನ ಸದಸ್ಯರಾಗಿದ್ದಾರೆ.

ಮಂಗಳೂರು ಹಾಗೂ ಬೆಳ್ತಂಗಡಿ ತಾಲೂಕಿನಲ್ಲಿ ಈ ಸ್ವ-ಸಹಾಯ ಗುಂಪುಗಳು ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ ಮುಖ್ಯವಾಗಿ ಮಲ್ಲಿಗೆ ಕೃಷಿ, ಸಾವಯವ ಕೃಷಿ, ಜೇನು ಸಾಕಾಣೆ,

ರಬ್ಬರ್ ಕೃಷಿ, ಶ್ರಮದಾನ ಶಿಬಿರಗಳು, ತೆಂಗು, ಅಡಿಕೆ, ಗೇರು, ಭತ್ತ, ಬಾಳೆ, ತರಕಾರಿ ಮುಂತಾದ ವಸ್ತುಗಳನ್ನು ಬೆಳೆಸಲು ಸಹಕಾರಿಯಾಗಿದೆ.

ಮಂಗಳೂರು ಹಾಗೂ ಬೆಳ್ತಂಗಡಿ ತಾಲೂಕಿನ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಒಳಚರಂಡಿ, ಶೌಚಾಲಯ, ನೀರು, ವಿದ್ಯುತ್ ಸಾರಿಗೆ ಮುಂತಾದ ಅನೇಕ ಸಮಸ್ಯೆಗಳಿವೆ. ಈ ಸ್ವ-ಸಹಾಯ ಗುಂಪು ಈ ಸಮಸ್ಯೆಗಳತ್ತ ಗಮನ ಹರಿಸಿ ಅವುಗಳ ನಿರ್ಮೂಲನೆಗೆ ಈ ಸಂಘಗಳ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿವೆ. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಮಧ್ಯವಸನಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಇದಕ್ಕೂ ಮೊದಲು ಸ್ವ-ಸಹಾಯ ಗುಂಪಿಗೆ ಸೇರಿದ ಅನೇಕ ಸದಸ್ಯರು ಮದ್ಯವಸನಿಗಳಾಗಿದ್ದರು. ಆದರೆ ಒಮ್ಮೆ ಈ ಸ್ವ-ಸಹಾಯ ಸಂಘಕ್ಕೆ ಸೇರಿದ ಮೇಲೆ ಧರ್ಮಸ್ಥಳದ ವತಿಯಿಂದ ೧೦ ದಿನಗಳ ಮಧ್ಯವರ್ಜನೆ ಶಿಬಿರಗಳನ್ನು ಏರ್ಪಡಿಸಿ, ಅವರ ಜೀವನಕ್ಕೆ ಹೊಂಬೆಳಕನ್ನು ನೀಡಿದ ಕೀರ್ತಿ ಈ ಸ್ವ-ಸಹಾಯ ಗುಂಪುಗಳಿಗೆ ಸೇರಿದೆ. ಆದ್ದರಿಂದ ಬೆಳ್ತಂಗಡಿ ಮತ್ತು ಮಂಗಳೂರು ತಾಲೂಕಿನಲ್ಲಿ ಗ್ರಾಮೀಣ ಪ್ರದೇಶದ ಬಡವರ ಕಣ್ಣೀರನ್ನು ಒರೆಸಿದ ಕೀರ್ತಿ ಈ ಸ್ವ-ಸಹಾಯ ಗುಂಪುಗಳು.

ಉಳಿತಾಯ ಸಂಗ್ರಹಣೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ

ಉಳಿತಾಯ ಸಂಗ್ರಹಣೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ ಬಹಳ ಮಹತ್ವವಾಗಿದೆ. ಕೆಲವು ಸ್ವ-ಸಹಾಯ ಗುಂಪುಗಳ ಉಳಿತಾಯ ಖಾತೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇದ್ದರೆ ಇನ್ನು ಕೆಲವು ಸ್ವ ಸಹಾಯ ಸಂಘ ಉಳಿತಾಯ ಖಾತೆ ಸಹಕಾರಿ ಬ್ಯಾಂಕುಗಳಿವೆ. ಸ್ವ-ಸಹಾಯ ಸಂಘದ ಸದಸ್ಯರು ಕನಿಷ್ಟ ರೂಪಾಯಿ ೭ನ್ನು ಪ್ರತಿವಾರ ತಮ್ಮ ಖಾತೆ ಇರುವ ಬ್ಯಾಂಕಿನಲ್ಲಿ ಎಲ್ಲಾ ಸದಸ್ಯರ ಹಣವನ್ನು ಪಡೆದು ತಮ್ಮ ಸ್ವ-ಸಹಾಯ ಗುಂಪಿನ ಖಾತೆಗೆ ಜಮೆಯಾಗಬೇಕು.

ಸ್ವ-ಸಹಾಯ ಸಂಘದ ಸದಸ್ಯರಿಗೆ ಎರಡು ವಿಧದಲ್ಲಿ ಸಾಲವನ್ನು ನೀಡಬಹುದು.

- ನೇರ ಸಾಲ
- ಆಂತರಿಕ ಸಾಲ

ನೇರ ಸಾಲ ಎಂದರೆ ಸರಕಾರದಿಂದ ಈ ಸ್ವ-ಸಹಾಯ ಸಂಘಗಳಿಗೆ ಸಾಲ ದೊರೆಯುತ್ತದೆ. ಅವರು ಉಳಿತಾಯ ಮಾಡಿದ ಶೇಕಡಾ ೭೫% ಸಾಲವನ್ನು ನೀಡಬಹುದು. ಈ

ಸಾಲವನ್ನು ಸಂಘದ ಬೇಕಾದ ಸದಸ್ಯರಿಗೆ ಕೊಡುವ ಸಾಲವನ್ನು ನೇರ ಸಾಲ ಎಂದು ಕರೆಯುತ್ತಾರೆ. ಈ ಸಾಲಕ್ಕೆ ೪% ಬಡ್ಡಿಯನ್ನು ಸದಸ್ಯರು ಕಟ್ಟಬೇಕು.

ಆಂತರಿಕ ಸಾಲ ಎಂದರೆ ಒಬ್ಬ ಸದಸ್ಯನ ಮನೆಯಲ್ಲಿ ಸಮಸ್ಯೆಗಳಿದ್ದರೆ ಅದನ್ನು ಪರಿಹರಿಸಲು ಆ ಸ್ವ-ಸಹಾಯ ಸಂಘದ ಉಳಿತಾಯ ಖಾತೆಯಿಂದ ಎಲ್ಲ ಸದಸ್ಯರ ಅನುಮತಿಯನ್ನು ಪಡೆದು ಕೊಡುವ ಸಾಲವಾಗಿದೆ. ಈ ಸಾಲಕ್ಕೆ ೯% ಬಡ್ಡಿ ಕಟ್ಟಬೇಕು. ಪಡೆದ ಸಾಲವನ್ನು ಎರಡು ವರ್ಷದ ಒಳಗಾಗಿ ಪಾವತಿಸಬೇಕಾಗುತ್ತದೆ. ಈ ಸಾಲಕ್ಕೆ ಯಾವುದೇ ರೀತಿಯ ಗುರುತು ಪತ್ರಗಳ ಅಗತ್ಯವಿರುವುದಿಲ್ಲ. ಸದಸ್ಯರ ಅಪ್ಪಣೆಯ ಮೇರೆಗೆ ಒಂದೇ ದಿವಸದಲ್ಲಿ ಸಾಲವನ್ನು ಪಡೆಯಬಹುದು.

ಅಧ್ಯಾಯ ೪

ಮಹಿಳೆ ಮತ್ತು ಸ್ವ-ಸಹಾಯ ಗುಂಪುಗಳು

ಅಧ್ಯಾಯ ೪: ಮಹಿಳೆ ಮತ್ತು ಸ್ವ-ಸಹಾಯ ಗುಂಪುಗಳು

೧೯೯೦ರ ದಶಕದಲ್ಲಿ ಮಹಿಳಾ ಸಬಲೀಕರಣವು ಒಂದು ಪ್ರಮುಖ ವಿದ್ಯಾಮಾನವಾಗಿ ಹೊರಹೊಮ್ಮಿದೆ. ಸಬಲೀಕರಣವು ಒಂದು ಪ್ರಕ್ರಿಯೆಯಾಗಿದ್ದು, ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ವೃದ್ಧಿಸುವುದಕ್ಕೋಸ್ಕರ ಆಯ್ಕೆಗಳನ್ನು ಮಾಡಿಕೊಳ್ಳಲು ತಮಗಿರುವ ವೈಯುಕ್ತಿಕ ಹಕ್ಕನ್ನು ಪ್ರತಿಪಾದಿಸುವುದಕ್ಕೋಸ್ಕರ, ತಮ್ಮ ಅಧೀನತೆಯನ್ನು ಪ್ರಶ್ನಿಸುವ ಮತ್ತು ನಿವಾರಿಸುಲ್ಲಿ ಸಹಾಯ ಮಾಡುವ ಸಂಪನ್ಮೂಲ ನಿಯಂತ್ರಣಕ್ಕಾಗಿ ತಮ್ಮೊಳಗೆ ಸಂಘಟಿತರಾಗುವುದಾಗಿದೆ.

ದೇಶದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರು ಅಸಂಘಟಿತರಾಗಿದ್ದಾರೆ. ಅವರನ್ನು ಸಂಘಟಿತರನ್ನಾಗಿ ಮಾಡುವ ಕೆಲಸವನ್ನು ಈ ಸ್ವ-ಸಹಾಯ ಸಂಘಗಳು ಮಾಡುತ್ತಿದೆ. ಅವರಿಗೆ ತರಬೇತಿಯನ್ನು ನೀಡುವುದರ ಮೂಲಕ, ಉದ್ಯೋಗ, ಆಸ್ತಿ, ಶಿಕ್ಷಣ ಮತ್ತು ಕೌಶಲ್ಯದ ಕೊರತೆಯಿಂದ ಹೊರತರಬೇಕಾಗಿದೆ. ಹೆಣ್ಣು ಮಕ್ಕಳು ಬದಲಾಗದ ಹೊರತು ಗ್ರಾಮೀಣಾಭಿವೃದ್ಧಿ ಸಾಧ್ಯವಿಲ್ಲವೆಂಬುದನ್ನು ಮನಗಂಡು ಈ ಸ್ವ-ಸಹಾಯ ಸಂಘಗಳ ಮೂಲಕ 'ಜ್ಞಾನ ವಿಕಾಸ' ಎಂಬ ಕಾರ್ಯಕ್ರಮವನ್ನು ೧೯೯೨ ರಲ್ಲಿ ಧರ್ಮಸ್ಥಳದಲ್ಲಿ ಪ್ರಾರಂಭವಾಯಿತು. ಇಲ್ಲಿ ಮಹಿಳೆಯರಿಗೆ ಮಾತ್ರ ಅವಕಾಶ. ಮಹಿಳೆಯಲ್ಲಿ ಅರಿವು ಹಾಗೂ ಕ್ರಿಯಾಶೀಲತೆಯನ್ನು ಬೆಳೆಸಿ ಅವರನ್ನು ಜಾಗೃತ ಗೃಹಿಣಿಯಾಗಿ ರೂಪಿಸುವುದರೊಂದಿಗೆ, ಉಳಿತಾಯ ಮನೋಭಾವನೆಯನ್ನು ಹೆಚ್ಚಿಸುವ ಕಾಯಕ್ರಮವಾಗಿದೆ. ಜ್ಞಾನವಿಕಾಸ ಮಹಿಳಾ ಕೇಂದ್ರವು ೪ ರಿಂದ ೫ ಸ್ವ-ಸಹಾಯ ಗುಂಪುಗಳನ್ನು ಒಳಗೊಂಡಿರುತ್ತದೆ. ಹಾಗೂ ೪೦ ರಿಂದ ೫೦ ಸದಸ್ಯರು ಇರುತ್ತಾರೆ. ಇವರೆಲ್ಲರೂ ತಿಂಗಳಲ್ಲಿ ಒಂದು ದಿವಸ ಸುಮಾರು ಎರಡು ಗಂಟೆ ಸಮಯ ಒಟ್ಟು ಸೇರಿ ವಿವಿಧ ವಿಷಯಗಳ ಬಗ್ಗೆ, ಸ್ವಚ್ಛತೆ, ಶಿಕ್ಷಣ, ಆರೋಗ್ಯ ಪರಿಸರ ರಕ್ಷಣೆ, ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಬಗ್ಗೆ ಚರ್ಚಿಸಬೇಕು.

ಗುಂಪಿನ ಸದಸ್ಯೆಯೋರ್ವಳು ಕೇಂದ್ರದ ಸಂಯೋಜಕಿಯಾಗಿದ್ದು, ಅವರ ಮಾಹಿತಿ ಕಾರ್ಯಕ್ರಮದ ಜವಾಬ್ದಾರಿ ತೆಗೆದುಕೊಂಡು ಸದಸ್ಯರಿಗೆ ಸಂವಾದ ಹಾಗೂ ಮಾಧ್ಯಮದ ವಿವಧ ವಿಧಾನಗಳ ಮೂಲಕ ಮಾಹಿತಿ ನೀಡುತ್ತಾರೆ. ಜ್ಞಾನ ವಿಕಾಸ ಕೇಂದ್ರದ ಸಂಯೋಜಕಿಯರಿಗೆ ಆರು ತಿಂಗಳಿಗೊಮ್ಮೆ ತರಬೇತಿಯನ್ನು ನೀಡಲಾಗುತ್ತದೆ.

ಉದ್ದೇಶಗಳು

ಸ್ವ-ಸಹಾಯದ ಮಾದರಿಯಲ್ಲಿ ಗ್ರಾಮೀಣ ಮಹಿಳೆಯರಿಗೆ ಮತ್ತು ದುರ್ಬಲ ವರ್ಗದ ಮಹಿಳೆಯರಿಗೆ ಮಾಹಿತಿಯನ್ನು ನೀಡಿ ಮಹಿಳೆಯರ ಸಂಘಟನೆಯನ್ನು ಮಾಡುವುದು.

- ಗ್ರಾಮೀಣ ಮಹಿಳೆಯರ ಮತ್ತು ದುರ್ಬಲ ವರ್ಗದ ಮಹಿಳೆಯರ ವ್ಯಕ್ತಿತ್ವ ವಿಕಸನ ಮಾಡುವುದು.
- ಗ್ರಾಮೀಣ ಮಹಿಳೆಯರಿಗೆ ಪ್ರತಿಭೆ ಮತ್ತು ಸಾಂಪ್ರದಾಯಿಕ ಕಲೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು.
- ದುರ್ಬಲ ಮಹಿಳೆಯರಿಗೆ ಮತ್ತು ಗ್ರಾಮೀಣ ಮಹಿಳೆಯರಿಗೆ ಪ್ರೋತ್ಸಾಹ ನೀಡುವುದು.
- ಮಹಿಳೆಯರಿಗೆ ಮಹಿಳಾ ಶೋಷಣೆ ಮತ್ತು ಅಸಮಾನತೆ ವಿಷಯಗಳಲ್ಲಿ ಜಾಗೃತಿ ಮೂಡಿಸುವುದು.
- ಗ್ರಾಮೀಣ ಮಹಿಳೆಯ ಸದೃಢ ಸ್ವಾವಲಂಬಿ ಮಹಿಳೆಯಾಗಿ ನಿರೂಪಿಸುವುದು.

ಸ್ವ-ಉದ್ಯೋಗಕ್ಕೆ ಸಹಾಯಧನ

ಯಾವುದೇ ಒಂದು ಸಮಾಜ ಅಥವಾ ದೇಶದ ಅಭಿವೃದ್ಧಿಗೆ ಮಾನವ ಶಕ್ತಿಯ ಅಭಿವೃದ್ಧಿ ಮುಖ್ಯ. ಜ್ಞಾನ ವಿಕಾಸ ಸಂಸ್ಥೆಯ ಮೂಲಕ ಅನುತ್ಪಾಧಿತ ಮಾನವ ಸಂಪನ್ಮೂಲವನ್ನು ಉತ್ಪಾದಕ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸಲಾಗುತ್ತಿದೆ. ಜನರಿಗೆ ಕೇವಲ ನೈತಿಕ ಮೌಲ್ಯಗಳು, ಶಿಕ್ಷಣ ಮತ್ತು ಸಾಮಾಜಿಕ ಅರಿವು ಮೂಡಿಸಿದರೆ ಸಾಲದು ಅವರ ಜೀವನೋಪಾಯಕ್ಕೆ ಹಣಕಾಸಿನ ವ್ಯವಸ್ಥೆ ಮುಖ್ಯ. ಅದ್ದರಿಂದ ಬಡಜನರ ಜೀವನ ಮಾರ್ಗಕ್ಕೋಸ್ಕರ, ಉದ್ಯೋಗ, ಸ್ವ-ಉದ್ಯೋಗ ತರಬೇತಿ ನೀಡುವ ಉದ್ದೇಶದಿಂದ ಸಿರಿ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ೨೦೦೧ ರಲ್ಲಿ ಸ್ಥಾಪಿತವಾದ ಸಿರಿ ಸಂಸ್ಥೆಯು ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿರುವ ಸ್ವ-ಸಹಾಯ ಸಂಘಗಿಗೆ ಉತ್ಪಾದನೆ, ಮಾರಾಟ ಹಂತದಲ್ಲಿ ವಿವಿಧ ರೀತಿಯ ಸಹಾಯ ನೀಡುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ವ-ಸಹಾಯ ಸಂಘಗಳ ಮೂಲಕ ಉತ್ಪಾದಿಸಲ್ಪಟ್ಟ ವಸ್ತುಗಳಿಗೆ ಸಿರಿ ಮಾರುಕಟ್ಟೆ ಒದಗಿಸುತ್ತದೆ.

ಸಿರಿ ಗ್ರಾಮೋದ್ಯೋಗ ಸಂಸ್ಥೆಯಲ್ಲಿ ೫೦ಕ್ಕೂ ಹೆಚ್ಚಿನ ವಸ್ತುಗಳನ್ನು ತಯಾರಿಸಲಾಗುತ್ತದೆ. ೩೫೦೦ ಕ್ಕೂ ಹೆಚ್ಚಿನ ಸ್ವ-ಸಹಾಯ ಸಂಘದ ಮಹಿಳೆಯರು ವಿವಿಧ ಬಗೆಯ ವಸ್ತುಗಳನ್ನು ತಯಾಋಇಸುವ ಉದ್ಯೋಗದಲ್ಲಿ ತೊಡಗಿದ್ದಾರೆ. ದಿನಕ್ಕೆ ೫೦ ರಿಂದ ೧೫೦ ರೂ. ಸಂಪಾದಿಸುತ್ತಾರೆ. ಸಿರಿ ಉತ್ಪನ್ನ ಸಂಸ್ಥೆಯ ವಾಹನಗಳ ಮೂಲಕ ಜಾತ್ರೆ ಸಮಾರಂಭಗಳಲ್ಲಿ ಮಾರಾಟ ಮಾಡಲಾಗುತ್ತದೆ. ಸ್ವ-ಸಹಾಯ ಗುಂಪಿನ ಸದಸ್ಯರೇ ಮಾರಾಟ ಮಾಡುವ ವ್ಯವಸ್ಥೆಯು ಇದೆ. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ಬಡತನ ಮತ್ತು ನಿರುದ್ಯೋಗ ಸ್ವಲ್ಪಮಟ್ಟಿಗೆ ನಿರ್ವಹಣೆಯಾಗಿದೆ.

ನಾಲ್ಕು ಗೋಡೆಗಳ ಮಧ್ಯೆ ಬಾಳನ್ನು ಸವೆಸುತ್ತಿದ್ದ ಮಹಿಳೆ ಅದರಿಂದ ಹೊರಬಂದು ತನ್ನಂತಹ ಅನೇಕ ಮಹಿಳೆಯರೊಂದಿಗೆ ಬೆರೆಯುವ ಸದಾವಕಾಶ ಹಾಗೂ ಆ ಮೂಲಕ ಹೊರಪ್ರಪಂಚದ ತಿಳುವಳಿಕೆಯನ್ನು ಈ ಸ್ವ-ಸಹಾಯ ಸಂಘ ಮಾಡುತ್ತದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಸಹಾಯವನ್ನು ಪಡೆದ ಮಹಿಳೆ ಸಮಾಜದಲ್ಲಿ ಹೆಮ್ಮೆಯಿಂದ ಬದುಕುತ್ತಿದ್ದಾಳೆ. ಮಹಿಳೆಯು ತಾನೇ ಸ್ವತಃ ಅತ್ಯಂತ ಸುಲಭ ರೀತಿಯಲ್ಲಿ ಸಾಲ ಪಡೆದು ತನ್ನ ಗೃಹದ ಅಗತ್ಯತೆಗಳನ್ನು, ಮಕ್ಕಳ ವಿದ್ಯಾಭ್ಯಾಸಾಧರಿತ ಕೆಲಸಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾಳೆ.

ಸ್ವ-ಸಹಾಯ ಗುಂಪು ಪ್ರಾರಂಭವಾದ ನಂತರ ಮಂಗಳೂರು ಮತ್ತು ಬೆಳ್ತಂಗಡಿಯಲ್ಲಿ ಅನೇಕ ಜನರು ಸ್ವಾವಲಂಬನೆಯಾಗಿದೆ ಎಂಬುದಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದು. ಬೆಳ್ತಂಗಡಿ ತಾಲೂಕಿನ ಗುರುವಾಯನಕೆರೆಯ 'ಗುರುಜ್ಯೋತಿ' ಸ್ವ-ಸಹಾಯ ಗುಂಪು ಪ್ರಾರಂಭಿಸಿ, ಉಪ್ಪಿನಕಾಯಿ ಘಟಕವನ್ನು ಪ್ರಾರಂಭಿಸಿದರು. ಇವರು ಇಪ್ಪತ್ತು ವರ್ಷಗಳ ಹಿಂದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನೆರಳಿನಲ್ಲಿ ಸಂಘ ಕಟ್ಟಿಕೊಂಡರು. ಉಳಿತಾಯ ಪ್ರಾರಂಭಿಸದರು. ತಮಗೊಂದು ನಿಶ್ಚಿತ ಉದ್ಯೋಗ ಬೇಕೆಂಬ ಸಂಕಲ್ಪದಲ್ಲಿ ಉಪ್ಪಿನಕಾಯಿ ತಯಾರಿ ಘಟಕ ಪ್ರಾರಂಭಿಸಿದರು. ಶುಚಿಯಾದ ರುಚಿಕರ ಉಪ್ಪಿನಕಾಯಿ ಅಡುಗೆ ಕಲಿಸಿದ್ದು ಹುಡ್‌ಸೆಟ್ ತರಬೇತಿ ಸಂಸ್ಥೆ ಈ ಘಟಕದವರು ಸುಮಾರು ೨.೮೦ ಲಕ್ಷ ಸ್ವ-ಸಹಾಯ ಸಂಘದಿಂದ ಸಾಲ ಪಡೆದು ಉದ್ಯೋಗವನ್ನು ಪ್ರಾರಂಭಿಸಿ ಉತ್ತಮ ಆದಾಯವನ್ನು ಗಳಿಸಿದರು. ಘಟಕದ ಸದಸ್ಯರ ಪರಿಶ್ರಮದಿಂದ ಅವರು ಮಾಡಿದ ಸಾಲವನ್ನು ತೀರಿಸಿ, ಈಗ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ.

ಸ್ವ-ಸಹಾಯ ಗುಂಪಿನ ಯಶಸ್ಸು ಗ್ರಾಮೀಣ ಮಹಿಳೆಯರ ಪಾಲಿಗೆ ಹೊಸ ಶಕ್ತಿಯನ್ನು ಸೃಷ್ಟಿಸಿದೆ. ಕೈತುಂಬಾ ಸಂಬಳ ಬರುವ ಉದ್ಯೋಗವನ್ನು ಹಳ್ಳಿಹಳ್ಳಿಗಳಲ್ಲೂ ರೂಪಿಸಿ ಸೈ

ಎನಿಸಿಕೊಂಡ ಮಹಿಳೆಯು ತಮ್ಮ ವ್ಯವಹಾರ ಕೌಶಲದಿಂದ ಖ್ಯಾತಿಯನ್ನು ಅನೇಕ ಪ್ರದೇಶಗಳಿಗೆ ವಿಸ್ತರಿಸಿ ಇತರರಿಗೆ ಉತ್ತೇಜನವನ್ನು ನೀಡಿದ್ದಾರೆ.

ಸ್ವ-ಸಹಾಯದ ಉಪ್ಪಿನಕಾಯಿ ಪ್ರಜಾವಾಣಿ – ೧೯/೦೨/೧೯

ಸ್ವ-ಸಹಾಯ ಸಂಘದಿಂದ ಉತ್ತೇಜನ ಪಡೆದು ಮತ್ತೆ ಅನೇಕ ಮಹಿಳೆಯ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ಇದ್ದಾರೆ. ಮುಖ್ಯವಾಗಿ ಬೆಳ್ತಂಗಡಿ ತಾಲೂಕಿನಲ್ಲಿ ಇನ್ನೊಂದು ಉದಾಹರಣೆ ಕೊಡುವುದಾದರೆ ಬೆಳ್ತಂಗಡಿ ತಾಲೂಕಿನ ಚಾರ್ಮಡಿಯ ಕಲ್ಮಜ ಗ್ರಾಮದ ಗ್ರೇಸಿ ಮೊಂತೆರೊ, ಎಂಟನೆ ತರಗತಿ ಓದಿದ ಗ್ರೇಸಿ ಬೀಡಿಕಟ್ಟಿ ಜೀವನ ಸಾಗಿಸುತ್ತಿದ್ದರು. ಹತ್ತು ವರ್ಷಗಳ ಹಿಂದೆ ಅವರ ಗಂಡನ ವ್ಯಾಪಾರ ನಷ್ಟವಾದಾಗ, ಉದ್ಯಮ ಮುಚ್ಚುವ ಸ್ಥಿತಿಗೆ ಬಂತು. ತಾಳತಪ್ಪಿದ ಬದುಕನ್ನು ಸರಿದಾರಿಗೆ ತರುವುದು ಹೇಗೆಂದು ಗ್ರೇಸಿಗೆ ಸಮಸ್ಯೆಯಾಯಿತು. ಆಗ ಅವರಿಗೆ ನೆರವಿಗೆ ಬಂದದ್ದು ಲಾಯಿಲದಲ್ಲಿ ಮಹಿಳೆಯರ ಬದುಕಿನಲ್ಲಿ ಹೊಸ ಆಯಾಮ ರೂಪಿಸುತ್ತಿದ್ದ ದಯಾಳ್‌ಬಾಗ್ ಗ್ರಾಮಾಭಿವೃದ್ಧಿ ಯೋಜನೆಯ 'ವಿಮುಕ್ತಿ' ಸ್ವ-ಸಹಾಯ ಸಂಘದ ಕಾರ್ಯಕ್ರಮ. ಮಹಿಳೆಯರ ಸ್ವಾವಲಂಬನೆಗಾಗಿ ಅದು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಗ್ರೇಸಿ ಸ್ವ-ಸಹಾಯ ಸಂಘದ ಸದಸ್ಯರಾಗಿ ಉಳಿತಾಯ ಆರಂಭಿಸಿದರು. ಅವರಿಗೆ ಸ್ವಾವಲಂಬಿ ಬದುಕಿಗೆ ಸುಲಭವಾಗಿ ನೆರವಾಗಲು ಸಣ್ಣ ಪ್ರಮಾಣದಲ್ಲಿ ಇಡ್ಲಿ ತಯಾರಿಕೆಗೆ ಸಲಹೆ ನೀಡಿ ಪಾತ್ರೆಗಳ ಖರೀದಿಗೆ ಮೊದಲ ಬಂಡವಾಳ ಐದು ಸಾವಿರ ರೂಪಾಯಿ ನೀಡಲಾಯಿತು. ನೂರು ಇಡ್ಲಿಗಳಿಂದ ವ್ಯವಹಾರ ಆರಂಭಿಸಿ ತನ್ನ ಪ್ರಮಾಣಿಕ ಪ್ರಯತ್ನದಿಂದ ಗ್ರೇಸಿ ಬಹುಬೇಗನೆ ಜನಪ್ರಿಯವಾದರು. ಬಿಸಿ ಬಿಸಿ ಇಡ್ಲಿಗಳನ್ನು ತಯಾರಿಸಿಕೊಡುವುದರ ಮೂಲಕ ಅವರು ಉದ್ಯಮದಲ್ಲಿ ಅತೀ ಎತ್ತರ ಬೆಳೆದರು. ಈಗ ಬೇಸಗೆಯ ಎಲ್ಲಾ ದಿನಗಳಲ್ಲಿ ಅವರಿಗೆ ಕೈತುಂಬಾ ದುಡಿಮೆ ದಿನಕ್ಕೆ ಮೂರು ಸಾವಿರದಿಂದ ಐದು ಸಾವಿರ ಇಡ್ಲಿಗೆ ಬೇಡಿಕೆ ಇದೆ. ಇದರಿಂದ ಅವರ ಬಡತನ ಮತ್ತು ನಿರುದ್ಯೋಗವು ನಿರ್ಮೂಲನೆಯಾಯಿತು.

ಪ್ರಜಾವಾಣಿ – ೨-೪-೨೦೧೩

ಸ್ವ-ಸಹಾಯ ಸಂಘದಿಂದ ಎಷ್ಟು ಮಹಿಳೆಯರು ಜಿಲ್ಲೆಯಾದ್ಯಂತ ಪ್ರಯೋಜನ ಪಡೆದಿದ್ದಾರೆ ಎಂದು ಹೇಳುವುದು ಬಹಳ ನಿಖರವಾಗಿ ಕಷ್ಟ. ಆದರೆ ಒಂದು ಮಾತ್ರ ಸತ್ಯ ಯಾವ ಪ್ರದೇಶದಲ್ಲಿ ಒಂದು ಸ್ವ-ಸಹಾಯ ಸಂಘ ಉಂಟೋ ಆ ಪ್ರದೇಶದಲ್ಲಿ ಸ್ವ-ಸಹಾಯ

ಸಂಘದ ಸದಸ್ಯರಾದ ಜನರ ಬಡತನ ಮತ್ತು ನಿರುದ್ಯೋಗ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಅದೇ ರೀತಿ ಅವರ ಉಳಿತಾಯ ಭಾವನೆ ಹೆಚ್ಚಾಗಿದೆ.

ಉದಾಹರಣೆಗೆ ಬಿಜಾಪುರದಿಂದ ಕೆಲಸ ಹುಡುಕಿಕೊಂಡು ಕಳೆದ ಹತ್ತು ವರ್ಷಗಳ ಹಿಂದೆ ಒಂದು ಕುಟುಂಬ ದ.ಕ. ಜಿಲ್ಲೆಯ ಕಾವೂರುಗೆ ಆಗಮಿಸಿತ್ತು. ಬರುವಾಗ ಗಂಡ, ಹೆಂಡತಿ, ಮೂರು ಮಂದಿ ಮಕ್ಕಳು ತುತ್ತು ಅನ್ನಕ್ಕೂ ಅವರಲ್ಲಿ ಅಷ್ಟು ಬಡತನವಿತ್ತು. ಅಲ್ಲಿ ಇಲ್ಲಿ ಸ್ವಲ್ಪ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಆದರೆ ಕಳೆದ ಐದು ವರ್ಷದಿಂದ ಅವರು ಸ್ವ-ಸಹಾಯ ಸಂಘದ ಸದಸ್ಯೆಯಾಗಿ, ಗಂಡನನ್ನು ಸದಸ್ಯನಾಗಿ ಮಾಡಿ, ಇದೀಗ ಗಂಡ, ಹೆಂಡತಿ, ಮಕ್ಕಳು ನೆಮ್ಮದಿಯ ಜೀವನವನ್ನು ಸಾಗಿಸುತ್ತಿದ್ದಾರೆ. ನಾನು ಕ್ಷೇತ್ರ ಕಾರ್ಯದ ನಿಮಿತ್ತ ಆ ಊರಿಗೆ ಹೋದಾಗ ಅವರ ಹೆಸರು ಮಾಂಕಮ್ಮ ಮತ್ತು ಅವರ ಗಂಡನ ಹೆಸರು ಮುತ್ತಯ್ಯ ಎಂದು ಹೇಳಿದರು. ಅವರು ಈ ಊರಿಗೆ ಬರುವಾಗ ಪ್ಲಾಸ್ಟಿಕ್ ಕವರಿನ ಮನೆಯಲ್ಲಿ ಬಾಡಿಗೆಗೆ ಇದ್ದವರು ಇದೀಗ ಹಂಚಿನ ಮನೆಯಲ್ಲಿ ಬಾಡಿಗೆಯಲ್ಲಿ ವಾಸವಾಗಿದ್ದಾರೆ. ಮಕ್ಕಳನ್ನು ಸರಿಯಾಗಿ ಶಾಲೆಗೆ ಕಳುಹಿಸಿದ್ದಾರೆ. ಗಂಡನನ್ನು ಮದ್ಯವರ್ಜನ ಶಿಬಿರಕ್ಕೆ ಸೇರಿಸಿ, ಮದ್ಯಮುಕ್ತ ಮನೆಯನ್ನಾಗಿ ಮಾಡಿದ್ದಾರೆ. ಇಷ್ಟೇ ಅಲ್ಲದೆ ಅವರ ಬಿಜಾಪುರದ ಊರಿನ ಇತರ ಮಹಿಳೆಯರನ್ನು ಸ್ವ-ಸಹಾಯ ಸಂಘಕ್ಕೆ ಸೇರಿಸಿ ಅವರಿಗೆ ಇವರಿಂದ ಸಿಗುವ ಮಾಹಿತಿಯನ್ನು ನೀಡಿದ್ದಾರೆ. ಇಷ್ಟೇ ಅಲ್ಲ ಆ ಪ್ರದೇಶದಲ್ಲಿ ಇದೀಗ ಒಟ್ಟಿಗೆ ೦೮ ತಂಡಗಳು ಆ ಊರಿನಿಂದ ಬಂದು ಈ ಪ್ರದೇಶದ ಸ್ವ-ಸಹಾಯ ಸಂಘಕ್ಕೆ ಸೇರಿ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ. ಇದೀಗ ಕಾರಣ ಈ ಸ್ವ-ಸಹಾಯ ಸಂಘ ಅವರ ಬಡತನ ಮತ್ತು ನಿರುದ್ಯೋಗವನ್ನು ನಿವಾರಿಸಲು ಪ್ರಮಾಣಿಕ ಪ್ರಯತ್ನ ಮಾಡುತ್ತಿದೆ ಎಂದರೆ ತಪ್ಪಾಗದು.

– ಮುಖತಃ ಭೇಟಿ –

ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಸಂಘಗಳು ಕೈಕೊಂಡ ಕಾರ್ಯಕ್ರಮಗಳನ್ನು ಪುರುಷರು ಯಶಸ್ವಿಯಾಗಿ ಉಪಯೋಗ ಮಾಡಿಕೊಂಡಿದ್ದಾರೆ. ಸ್ವ-ಸಹಾಯ ಗುಂಪು ಕಟ್ಟಿಕೊಂಡ ನಂತರ ಪುರುಷರು ಸಮಾಜದಲ್ಲಿ ರಾಜಕೀಯವಾಗಿಯೂ ಆರ್ಥಿಕವಾಗಿಯೂ ಮುಂಚೂಣಿಯಲ್ಲಿ ಇದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿಯನ್ನೇ ನಂಬಿ ಜೀವನ ನಡೆಸುತ್ತಿದ್ದ ಜನರು ಇಂದು ಕೃಷಿಬಿಟ್ಟು ಬೇರೆ ಕೆಲಸಗಳತ್ತ ಗಮನವನ್ನು ಹರಿಸುತ್ತಿದ್ದಾರೆ. ಕೃಷಿ ಅಭಿವೃದ್ಧಿ ಯೋಜನೆ ಮೂಲಕ ವ್ಯವಸಾಯ ಕ್ಷೇತ್ರದಲ್ಲಿ ಅವಿಷ್ಕಾರ ಮಾದರಿ, ವೈಜ್ಞಾನಿಕ ಕೃಷಿ, ತೋಟಗಾರಿಕೆ, ರೇಷ್ಮೆಗಾರಿಕೆ, ನೀರಾವರಿ, ಭೂಅಭಿವೃದ್ಧಿ, ಕೃಷಿ ವಿಸ್ತರಣಾ ಚಟುವಟಿಕೆ

ಮುಂತಾದ ಕಾರ್ಯಕ್ರಮಗಳನ್ನು ನಡೆಸಲು ಈ ಸ್ವ-ಸಹಾಯ ಗುಂಪು ಸಹಕಾರಿಯಾಗಿದೆ. 'ಜನಜಾಗೃತಿ' ಕಾರ್ಯಕ್ರಮದ ಮೂಲಕ ಪುರುಷರು ಇಂದು ಪಾನಮುಕ್ತರಾಗಿ ಜೀವನ ನಡೆಸುತ್ತಿದ್ದಾರೆ. ಗ್ರಾಮೀಣ ಕಲ್ಯಾಣ ಯೋಜನೆಯ ಮೂಲಕ ಗ್ರಾಮೀಣ ಜನರ ಮೂಲಭೂತ ಸೌಕರ್ಯಕ್ಕೆ ಆದ್ಯತೆಯ ನೀಡಲಾಗಿದೆ.

ಸ್ವ-ಸಹಾಯ ಸಂಘದ ಸದಸ್ಯರಾದ ಪುರುಷರು ಇಂದು ಅನೇಕ ವಲಯಗಳಲ್ಲಿ ಯಶಸ್ವಿಯನ್ನು ಸಾಧಿಸಿದ್ದಾರೆ ಎಂಬುದಕ್ಕೆ ಯಾವ ಪ್ರದೇಶಕ್ಕೆ ಹೋದರೂ ಅನೇಕ ಉದಾಹರಣೆಗಲನ್ನು ನೀಡಬಹುದು. ಉದಾಹರಣೆಗೆ ಮಂಗಳೂರು ತಾಲೂಕು ಬೆಳುವಾಯಿ ಗ್ರಾಮದ ನಡಿಗುಡ್ಡೆಯ ಕೊರಗಪ್ಪ ಎಂಬುವರು ಸುಮಾರು ಐದು ವರ್ಷಗಳ ಹಿಂದೆ ಸ್ವ-ಸಹಾಯ ಸಂಘಕ್ಕೆ ಸೇರುವ ಮೊದಲು ಕುಡಿತ, ಜೂಜಾಟ, ಗಲಾಟೆಗಳಲ್ಲಿ ಭಾಗಿಯಾಗಿ ಅನೇಕ ಜನರಿಗೆ ಸಮಾಜ ಘಾತಕರಾಗಿ ಸಮಾಜದಲ್ಲಿ ಕೆಟ್ಟ ಹೆಸರನ್ನು ಹೊಂದಿದ್ದರು. ಕುಡಿತದಿಂದಾಗಿ ಹೆಂಡತಿ, ಮಕ್ಕಳು ಬೀದಿಯಲ್ಲಿ ಬೀಳುವ ಸ್ಥಿತಿಗೆ ಬಂದಿದ್ದರು. ಯಾವಾಗ ಅವರ ಹೆಂಡತಿ ಸ್ವ-ಸಹಾಯ ಸಂಘದ ಸದಸ್ಯರಾದರೋ, ಅನಂತರ ಗಂಡನನ್ನು ಗುಂಪಿಗೆ ಸೇರಿಸಿ, ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಉಚಿತವಾಗಿ ನಡೆಯುವ ಮದ್ಯವರ್ಜನ ಶಿಬಿರ್ಕಕೆ ಸೇರಿ ಸಮಾಜದಲ್ಲಿ ಒಳ್ಳೆಯ ಹೆಸರು ಬರುವ ಹಾಗೆ ಮಾದಿದ್ದಾರೆ. ಇದೀಗ ಅವರು ಪಾನಮುಕ್ತರಾಗಿ, ಸ್ವ-ಉದ್ಯೋಗ ಮಾಡುವುದರ ಜೊತೆಗೆ, ಸ್ವಾವಲಂಬಿಯಾಗಿ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಇದೀಗ ಜೀವನದಲ್ಲಿ ಒಳ್ಳೆಯ ಹೆಸರು ಮತ್ತು ಸಮಾಜದಲ್ಲಿ ಒಳ್ಳೆಯ ನಡತೆ, ಸಭ್ಯತೆ, ಮನೆಯವರ ಪ್ರೀತಿ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದಾರೆ.

– ಮುಖತಃ ಭೇಟಿ –

ಅಧ್ಯಾಯ ೫

ಸ್ವ-ಸಹಾಯ ಗುಂಪಿನ ಸದಸ್ಯರ ಅಭಿಪ್ರಾಯಗಳು ಮತ್ತು ಅನುಭವಗಳು

ಅಧ್ಯಾಯ ೫: ಸ್ವ-ಸಹಾಯ ಗುಂಪಿನ ಸದಸ್ಯರ ಅನುಭವಗಳು ಮತ್ತು ಅಭಿಪ್ರಾಯಗಳು

ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಗುಂಪುಗಳು ಮಹತ್ತರ ಸಾಧನೆಗಳನ್ನು ಮಾಡಿವೆ. ಸ್ವ-ಸಹಾಯ ಗುಂಪಿಗೆ ಸೇರಿದ ಮೇಲೆ ದೇಶದಲ್ಲಿ ಅನೇಕ ಬದಲಾವಣೆಗಳನ್ನು ಸ್ವ-ಸಹಾಯ ಸಂಘದ ಸದಸ್ಯರಲ್ಲಿ ಕಾಣಬಹುದು. ಸ್ವ-ಸಹಾಯ ಸಂಘಕ್ಕೆ ಸೇರಿದ ಅನೇಕ ಸದಸ್ಯರನ್ನು ಭೇಟಿ ಮಾಡಿದಾಗ ಅವರು ತಮ್ಮ ಅನುಭವಗಳನ್ನು ಮತ್ತು ಅನಿಸಿಕೆಗಳನ್ನು ನನ್ನಲ್ಲಿ ಮುಕ್ತಕಂಠದಿಂದ ಹೇಳಿಕೊಂಡಿದ್ದಾರೆ. ಮುಖ್ಯವಾಗಿ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ನವೋದಯ ಸ್ವ-ಸಹಾಯ ಸಂಘಗಳ ಸದಸ್ಯರು ತಾವು ಯೋಜನೆ ಪ್ರಾರಂಭವಾದಾಗ ಯಾವ ರೀತಿ ಇದ್ದೆವು, ಈಗ ಯಾವ ರೀತಿ ನಮ್ಮ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಂಡಿದ್ದೇವೆ ಎಂಬುದನ್ನು ಬಹಳ ಮಾರ್ಮಿಕವಾಗಿ ವಿವರಿಸಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಪ್ರಾರಂಭವಾದ ಸ್ವ-ಸಹಾಯ ಗುಂಪುಗಳ ಸದಸ್ಯರಲ್ಲಿ ಸಭೆ ಸಮಾರಂಭಗಳಲ್ಲಿ ಭಾಗವಹಿಸಲು ಇನ್ನೂ ಹಿಂಜರಿಕೆ ಇದೆ ಎಂಬುದನ್ನು ಕಾರ್ಯವ್ಯಾಪ್ತಿಯಲ್ಲಿ ಕೈಗೊಂಡ ನೇರ ಸಂದರ್ಶನ ಮತ್ತು ಪ್ರಶ್ನಾವಳಿಯ ಮೂಲಕ ತಿಳಿಯಬಹುದಾಗಿದೆ. ಅವುಗಳಲ್ಲಿ ಕೆಲವು ಉದಾಹರಣೆಗಳನ್ನು ಈ ಕೆಳಗೆ ನೀಡಲಾಗಿದೆ:

ರಮಣಿಯ ಸಂತೋಷ ಮತ್ತು ಅನುಭವ

ನಾನು ಅವಿದ್ಯಾವಂತ ಮಹಿಳೆ. ಕೇವಲ ಒಂದನೇ ತರಗತಿ ಓದಿ ಕೂಲಿ ಕೆಲಸವು ಕಡಿಮೆಯಾಗಿ ಜೀವನ ಸಾಗಿಸಲು ಬಹಳ ಕಷ್ಟಪಡುತ್ತಿದ್ದೆ. ನನಗೆ ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿರುವುದು ನನ್ನ ಜೀವನದ ದೊಡ್ಡ

ಪುಣ್ಯ. ಕೇಂದ್ರಕ್ಕೆ ಸೇರಿದ ಮೇಲೆ ನನ್ನ ಜೀವನದಲ್ಲಿ ತುಂಬಾ ಬದಲಾವಣೆಯಾಗಿದೆ. ನಾಲ್ಕು ಗೋಡೆಗಳ ಮಧ್ಯದಲ್ಲಿ ಯಾವುದರ ಅನುಭವವೂ ಇಲ್ಲದೆ ಇದ್ದ ನಾನು ಸ್ವ-ಸಹಾಯ ಗುಂಪಿಗೆ ಸೇರಿದ ಮೇಲೆ ಗುಂಪಿನ ಅಧ್ಯಕ್ಷೆಯಾಗಿ ಎರಡು ವರ್ಷ ಕಾರ್ಯನಿರ್ವಹಿಸಿದ್ದೇನೆ. ಅಂದು ನಾಲ್ಕು ಜನರ ಮಧ್ಯೆ ನಿಲ್ಲಲು ಧೈರ್ಯವಿರಲಿಲ್ಲ. ಆದರೆ ಇಂದು ಸ್ಟೇಜಿನಲ್ಲಿ ಮಾತನಾಡುವ ಧೈರ್ಯ, ಆತ್ಮವಿಶ್ವಾಸ, ವ್ಯಕ್ತಿತ್ವ ವಿಕಸನವನ್ನು ಆ ಗುಂಪಿಗೆ ಸೇರಿದ ಮೇಲೆ ಪಡೆದುಕೊಂಡಿದ್ದೇನೆ ಎಂದು ಬೆಳುವಾಯಿ ಪ್ರಗತಿ ಬಂಧು ಗುಂಪಿನ ಶ್ರೀಮತಿ ಬೇಬಿಯವರು ಹೇಳುವಾಗ ನಿಜಕ್ಕೂ ಸಂತೋಷವಾಗುತ್ತದೆ.

ಬೆಳಕಿನೆಡೆಗೆ ಬಂದ ಶ್ರೀನಿವಾಸ

ಕಳೆದ ಇಪ್ಪತ್ತೈದು ವರ್ಷಗಳಿಂದ ನಾನು ಬಹಳ ಬಡತನದಿಮ್ದ ಜೀವನ ಸಾಗಿಸುತ್ತಿದ್ದೇನೆ. ಕೆಲವು ದಿನ ಕೂಲಿ ಸಿಕ್ಕರೆ ವ್ಮತೆ ಕೆಲವು ದಿನ ಯಾವುದೇ ಕೂಲಿ ಸಿಗುತ್ತಿರಲಿಲ್ಲ. ನಮ್ಮ ನೆರವಿಗೆ ಬಂದದ್ದ್ದೆ ನವೋದಯ ಸ್ವ-ಸಹಾಯ ಗುಂಪು. ಒಂದು ಹಕ್ಕಿಗೆ ಯಾವ ರೀತಿ ಗೂಡಿನ ಆಸರೆ ಬೇಕೋ ಅದೇ ರೀತಿ ನನ್ನ ಜೀವನದ ನೆಮ್ಮದಿಗೆ ಯೋಜನೆ ಸಹಕಾರಿಯಾಯಿತು. ಯೋಜನೆಯ ಕಾರ್ಯಕರ್ತರ ಪ್ರೇರಣೆಯಿಂದ ಒಂದು ತಂಡವನ್ನು ರಚಿಸಿ ವಾರಕ್ಕೆ ೧೦ ರೂಪಾಯಿ ಉಳಿತಾಯ ಮಾಡಲು ಪ್ರಾರಂಭಿಸಿದೆ. ಈಗ ನನ್ನ ಉಳಿತಾಯ ಖಾತೆಯಲ್ಲಿ ಸುಮಾರು ೧೦ ಸಾವಿರಕ್ಕಿಂತಲೂ ಹೆಚ್ಚು ಹಣ ಉಳಿತಾಯ ಮಾಡಿದ್ದೇನೆ. ಗುಂಪಿನಿಂದ ಸಾಲ ಪಡೆದು ಮನೆ ರಿಪೇರಿಯ ಕೆಲಸವನ್ನೂ ಮಾಡಿದ್ದೇನೆ. ನಾನು ವಿದ್ಯೆ ಕಲಿಯದಿದ್ದರೂ ನನ್ನ ಮಕ್ಕಳನ್ನು ಶಾಲೆಗೆ ಸೇರಿಸಿದ್ದೇನೆ. ಅವರು ಕಲಿತು ನನ್ನ ಮತ್ತು ಹೆಂಡತಿಯ ಮುಂದಿನ ಜೀವನಕ್ಕೆ ಆಸರೆಯಾಗಬೇಕು ಎಂಬ ಭಾವನೆ ಮತ್ತು ವಿಶ್ವಾಸ ನಮ್ಮಲ್ಲಿ ಇದೆ.

ವಿಕಸಿತ ವ್ಯಕ್ತಿತ್ವದ ಶಮಿತಾ

ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಮಹಿಳೆಯೋರ್ವಳು ಇರುತ್ತಾಳೆ ಎನ್ನುವ ಮಾತೊಂದಿದೆ. ಅಂತೆಯೇ ಒಬ್ಬ ಮನುಷ್ಯನ ವ್ಯಕ್ತಿತ್ವದ ಮೇಲೆ ಅವನು ವಾಸಿಸುವ ಪರಿಸರ ಪ್ರಮುಖ ಪಾತ್ರ ವಹಿಸುತ್ತದೆ. ನಾನು ಸ್ವ-ಸಹಾಯ ಸಂಘಕ್ಕೆ ಸೇರಿದ ಮೇಲೆ ಅದು ನನ್ನ ವ್ಯಕ್ತಿತ್ವದ ಮೇಲೆ ತುಂಬಾ ಪರಿಣಾಮ ಬೀರಿದೆ ಎಂದು ನಾಣು ತುಂಬಾ ಸಂತೋಷದಿಂದ ಹೇಳುತ್ತೇನೆ. ಕೇಂದ್ರಕ್ಕೆ ಸೇರಿದ ಮೇಲೆ ೨೦ ಮಂದಿ ಸದಸ್ಯರು ಒಂದೇ ತಾಯಿಯ ಮಕ್ಕಳಂತೆ ಇದ್ದೇವೆ. ಮೊದಲು ನನಗೆ ಧೈರ್ಯ ಅನ್ನೋದು ಸ್ವಲ್ಪ ಕಡಿಮೆಯಿತ್ತು. ಕೇಂದ್ರಕ್ಕೆ ಸೇರಿದ ಮೇಲೆ ಧೈರ್ಯದಿಂದ ಸಭೆಯನ್ನು ಹೇಗೆ ನಡೆಸಬೇಕು, ಸಭೆ ನಡೆಯುವಾಗ ಶಿಸ್ತಿನಿಂದ ಹೇಗೆ ವರ್ತಿಸಬೇಕು ಎಂದು ಈ ಸ್ವ-ಸಹಾಯ ಗುಂಪು ಕಲಿಸಿಕೊಟ್ಟಿದೆ. ಗುಂಪಿಗೆ ಸೇರಿದ ಮೇಲೆ ನನ್ನ ಜೀವನದಲ್ಲಿ ಕಷ್ಟ, ದುಃಖಗಳನ್ನು ಮರೆಯಲು ಈ ಸ್ವ-ಸಹಾಯ ಸಂಘ ಸಹಕಾರಿಯಾಗಿದೆ.

ಬದಲಾವಣೆಯಾದ ಸಾಧು

ಮನುಷ್ಯನ ಜೀವನದಲ್ಲಿ ಏನು ಬೇಕಾದರೂ ಸಂಭವಿಸಬಹುದು ಎಂಬುದನ್ನು ಬದಲಾದ ಸಾಧು ಇವರನ್ನು ನೋಡುವಾಗ ತಿಳಿಯಬಹುದು. ಗೆಳೆತನಕ್ಕೆ ಮೊರೆ ಹೋಗಿ ಕುಡಿತದ ಚಟ ಆರಂಭಿಸಿದ ಸಾಧು ಹೆಂಡತಿ ಮಕ್ಕಳನ್ನು ಬೀದಿಪಾಲು ಮಾಡುವ ಸಂದರ್ಭದಲ್ಲಿ ಅವರಿಗೆ ರಕ್ಷಣೆಯನ್ನು ಒದಗಿಸಿದ್ದು ಈ ಸ್ವ-ಸಹಾಯ ಗುಂಪು. ಸ್ವ-ಸಹಾಯ ಗುಂಪಿನ ಅನೇಕ ಸದಸ್ಯರ ಒತ್ತಾಯಕ್ಕೆ ಮಣಿದು ಸ್ವ-ಸಹಾಯ ಗುಂಪಿನ ಸದಸ್ಯರಾದರು. ಅನಂತರ ದಿನಕ್ಕೆ ಒಂದು ರೂಪಾಯಿಯ ಹಾಗೆ ಉಳಿತಾಯ ಮಾಡಲು ಆರಂಭಿಸಿದರು. ಮುಂಚೆ ಕುಡಿತಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದ ಸಾಧು ಇಂದು ಆ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುತ್ತಿದ್ದಾರೆ. ಸ್ವ-ಸಹಾಯ ಗುಂಪಿನ ಸದಸ್ಯರ ಒತ್ತಾಯದ ಮೇರೆಗೆ ಮದ್ಯವರ್ಜನ

ಶಿಬಿರಕ್ಕೆ ಸೇರಿ ಈಗ ಅವರನ್ನು ಪಾನಮುಕ್ತ ಸಾಧು ಎಂದು ಸಮಾಜ ಗುರುತಿಸಿದೆ. ಸಾಧುನ ಬದಲಾದ ಜೀವನಕ್ಕೆ ಮುಖ್ಯ ಕರಣ ಈ ಸ್ವ-ಸಹಾಯ ಗುಂಪು ಎಂಬುದನ್ನು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ.

ಶುಭ ಆರಂಭ ಮಾಡಿದ ಆನಂದ

ಬಹಳ ಬಡತನದಿಂದ ಬೆಳೆದು ಬಂದ ಆನಂದ ಎರಡನೇ ತರಗತಿಯ ತನಕ ಓದಿದ್ದಾರೆ. ಕಡೂ ಬಡತನದ ನಡುವೆಯೂ ಅಲ್ಪ ಸ್ವಲ್ಪ ಕೃಷಿ ಮಾಡಿ ಜೀವನ ಸಾಗಿಸುತ್ತಿದ್ದರು. ಊರಿನ ಅನೇಕ ಮಂದಿ ಅವರ ಒಂದು ಮಂದಿರದಲ್ಲಿ ಪ್ರತಿ ವಾರ ಸಭೆ ಸೇರುವುದನ್ನು ಕಂಡ ಆನಂದ ಈ ಸಭೆಯ ವಿಷಯದ ಮಾತು ಆರಂಭಿಸಿದ. ಅದೇ ದಿನ ಅವರ ಗುಂಪಿಗೆ ಸೇರಿದ ಆನಂದ ಮತ್ತೆ ತನ್ನ ಜೀವನದಲ್ಲಿ ಹಿಂದೆ ನೋಡಲೇ ಇಲ್ಲ. ಸ್ವ ಸಹಾಯ ಸಂಘದ ಸದಸ್ಯನಾದ ಮೇಲೆ ಅನೇಕ ಸಲ ಸಾಲ ತೆಗೆದು ತನ್ನ ಕೃಷಿಯನ್ನು ಅಭಿವೃದ್ಧಿಪಡಿಸಿ ಇದೀಗ ತನ್ನ ಗದೆಯಲ್ಲಿ ಹಚ್ಚ ಹಸಿರಿನ ಬೆಳೆಗಳನ್ನು, ತರಕಾರಿಯನ್ನು ಬೆಳೆಸುತ್ತಿದ್ದಾರೆ. ಅಷ್ಟೇ ಅಲ್ಲ ೩೦ ತೆಂಗಿನ ಮರಗಳನ್ನು ಬೆಳೆದು ತನ್ನ ಜೀವನದಲ್ಲಿ ಅನೇಕ ಮಂದಿಗೆ ಉಪಕಾರ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ತನ್ನ ಎರಡು ಮಕ್ಕಳಿಗೆ ವಿದ್ಯಾಭ್ಯಾಸ ನೀಡಿ ಸುಖ ನೆಮ್ಮದಿಯಿಂದ ಬದುಕುತ್ತಿದ್ದಾರೆ. ಆನಂದನ ಈ ಶುಭ ಆರಂಭಕ್ಕೆ ಮುಖ್ಯವಾದ ಕಾರಣ ಈ ಸ್ವ-ಸಹಾಯ ಸಂಘ. ಈ ಸ್ವ-ಸಹಾಯ ಸಂಘಕ್ಕೆ ನಾನು ಯಾವತ್ತೂ ಚಿರಋಣಿ ಎಂದು ಭಾವುಕರಾಗಿ ಆನಂದ ಹೇಳುತ್ತಾರೆ.

ಬಾಳೆ ತೋಟದಲ್ಲಿ ತರಕಾರಿ ಫಸಲು

ಬಾಳೆಯ ಜೊತೆಯಲ್ಲಿ ತರಕಾರಿ ಬೆಳೆಯುವ ಪ್ರಯತ್ನ ಅಪರೂಪ. ಧರ್ಮಸ್ಥಳದ ಚಾರ್ಮಾಡಿಯ ಸಿರಿ ಗುಂಪಿನ ಸದಸ್ಯ ಬಾಳೆ ತೋಟದಲ್ಲಿ ತರಕಾರಿ ಬೆಳೆದು ಉತ್ತಮ ಸಾಧನೆ

ಮಾಡಿದ್ದಾರೆ. ಅವರು ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಸ್ವ-ಸಹಾಯ ಸಂಘದಿಂದ ಮಾಹಿತಿ ಪಡೆದು ಸಾಧನೆ ಮಾಡಿದ್ದಾರೆ.






ಯಶಸ್ವಿ ಉದ್ಯಮಿಗಳ ಆಸರೆ

ಇತರ ಎಲ್ಲಾ ಸಂಪನ್ಮೂಲಗಳಿಗಿಂತ ಮಾನವ ಸಂಪನ್ಮೂಲ ಅತ್ಯಮೂಲ್ಯ. ಬಡತನ ಮತ್ತು ನಿರುದ್ಯೋಗ ಸಮಸ್ಯೆ ಮೀರಿಸಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಫಲವಾಗಿ 'ಆಸರೆ' ಎಂಬ ಗ್ರಾಮಾಭಿವೃದ್ಧಿ ಮತ್ತು ಸ್ವಉದ್ಯೋಗ ತರಬೇತಿ ಪ್ರಾರಂಭಿಸಿ ಈಗ ಒಟ್ಟು ೨೭ ಶಾಖೆಗಳ ಮೂಲಕ ಕಾರ್ಯನಿರ್ವಹಿಸಲಾಗುತ್ತಿದೆ. ಆಸರೆಯ ಫಲವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ ಎನ್ನಬಹುದು.









ಇಡ್ಲಿ ಬೇಕಾ ಇಡ್ಲಿ ಬೇಕಾ?

ಉಜಿರೆಯ ಕಲ್ಮಂಜ ಗ್ರಾಮದ ಸರಸ್ವತಿ ಗುಂಪಿನ ಮಹಿಳಾ ಸದಸ್ಯರು ಬೇಸಿಗೆ ಕಾಲ ಬಂದರೆ ಸಾಕು ಸಾಕಷ್ಟು ಕೆಲಸ ಮಾಡುತ್ತಾರೆ. ಈ ಸ್ವ-ಸಹಾಯ ಸಂಘದ ಸದಸ್ಯರು ಒಟ್ಟುಗೂಡಿ ದಿನಕ್ಕೆ ಸುಮಾರು ಐದು ಸಾವಿರದಿಂದ ಹತ್ತು ಸಾವಿರ ಇಡ್ಲಿಗಳನ್ನು ತಯಾರಿಸಿ ಮದುವೆ ಮತ್ತಿತರ ಸಮಾರಂಭಗಳಿಗೆ ಸರಬರಾಜು ಮಾಡುತ್ತಾರೆ. ಸ್ವ-ಸಹಾಯ ಸಂಘ ಕಟ್ಟಿಕೊಂಡ ನಂತರ ತಾವು ಸ್ವ-ಸಹಾಯ ಸಂಘದಿಂದ ಸಾಲ ಪಡೆದು ಒಂದು ಶೆಡ್ ನಿರ್ಮಿಸಿ ಬೆಳಿಗ್ಗೆಯಿಂದ ರಾತ್ರಿ ತನಕ ಕೆಲಸ ಮಾಡಿ ದಿನಕ್ಕೆ ೬೦೦ ರೂಪಾಯಿಯವರೆಗೆ ದುಡಿಯುತ್ತಾರೆ.

ಸ್ವ-ಸಹಾಯದ ಉಪ್ಪಿನಕಾಯಿ

ಸ್ವ-ಸಹಾಯ ಸಂಘಗಳ ಯಶಸ್ಸು ಗ್ರಾಮೀಣ ಮಹಿಳೆಯರ ಪಾಲಿಗೆ ಹೊಸ ಶಕೆಯನ್ನೇ ಸೃಷ್ಟಿಸಿದೆ. ಕೈತುಂಬ ಸಂಬಳ ತರುವ ಉದ್ಯೋಗಗಳನ್ನು ಹಳ್ಳಿಹಳ್ಳಿಗಳಲ್ಲೂ ರೂಪಿಸಿ ಸೈ ಎನಿಸಿಕೊಂಡ ಮಹಿಳೆಯರು ತಮ್ಮ ವ್ಯವಹಾರ ಕೌಶಲದಿಮ್ದ ಖ್ಯಾತಿಯನ್ನು ದಿಲ್ಲಿಯವರೆಗೂ ವಿಸ್ತರಿಸಿದ್ದಾರೆ. ಇದಕ್ಕೊಂದು ಉತ್ತಮ ಉದಾಹರಣೆ ಗುರುವಾಯನಕೆರೆಯ ಗುರುಜ್ಯೋತಿ ಉಪ್ಪಿನಕಾಯಿ ಘಟಕ. ಹಳ್ಳಿಯ ಎಂತು ಮಹಿಳೆಯರು ಸೇರಿ ೧೦ ವರ್ಷಗಳಿಂದ ಈ ಘಟಕವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ.





೨೦ ವರ್ಷಗಳ ಹಿಂದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನೆರಳಿನಲ್ಲಿ ಸಂಘ ಕಟ್ಟಿಕೊಂಡರು, ಉಳಿತಾಯ ಮಾಡಿದರು. ತಮಗೊಂದು ನಿಶ್ಚಿತ ಉದ್ಯೋಗ ಬೇಕೆಂಬ ಸಂಕಲ್ಪದಲ್ಲಿ ಉಪ್ಪಿನಕಾಯಿ ತಯಾರಿ ಆರಂಭಿಸಿದರು.

ಶುಚಿಯಾದ ರುಚಿಕರ ಉಪ್ಪಿನಕಾಯಿ ಮಾಡುವ ಕಲೆ ಕಲಿಸಿದ್ದು ಉಜಿರೆಯ ರುಡ್‌ಸೆಟ್ ತರಬೇತಿ ಸಂಸ್ಥೆ. ಸಂಘದಿಂದ ೨.೮೦ ಲಕ್ಷ ರೂಪಾಯಿ ಸಾಲ ಪಡೆದು ಅದಕ್ಕೆ ಬೇಕಾದ ಬ್ಯಾರೆಲ್‌ಗಳು, ಗ್ರೈಂಡರ್, ಮಿಕ್ಸಿ, ಸೀಲಿಂಗ್ ಯಂತ್ರ, ಜ್ಯೂಸ್ ತಯಾರಿಕೆಗೆ ಬೇಕಾದ ಪಲ್ಪರ್ ಯಂತ್ರ ಖರೀದಿಸಿದರು. ತಿಂಗಳಿಗೆ ೫೦೦ ರೂಪಾಯಿ ಬಾಡಿಗೆಗೆ ಜಾಗ ಪಡೆದು ವಿಶಾಲ ಕಟ್ಟಡ ರಚಿಸಿಕೊಂಡರು. ಸೇವಾನಿರತೆ ಫೆಲ್ಸಿಟಾ ಮೋರಸ್ ಈ ಉತ್ಸಾಹಿ ಮಹಿಳೆಯರಿಗೆ ಬೇಕಾದ ಮಾರ್ಗದರ್ಶನವಿತ್ತರು. ಉಪ್ಪಿನಕಾಯಿ ತಯಾರಿಸಿದರೆ ಸಾಕೇ? ಅದಕ್ಕೆ ಮಾರುಕಟ್ಟೆಯೂ ಬೇಕು. ಧರ್ಮಸ್ಥಳದ ಸಿರಿ ಸಂಸ್ಥೆಯ ನಿರ್ದೇಶಕರು ಅದಕ್ಕೆ ಬೇಕಾದ ಎಲ್ಲಾ ಸಾಮಾಗ್ರಿಗಳನ್ನು ಒದಗಿಸಿದ್ದಲ್ಲದೆ ಈ ಬಳಗವು ತಯಾರಿಸಿದ ಅಷ್ಟು ಉಪ್ಪಿನಕಾಯಿಗಳನ್ನು ಖರೀದಿಸಲು ಮುಂದಾದರು. ಈ ಮಹಿಳಾಮಣಿಗಳಿಗೆ ಮಾರಾಟದ ಚಿಂತೆಯಿಲ್ಲ. ಅವರು ವಾರದಲ್ಲಿ ಐದುವರೆ ದಿನ ಬೆಳಗಿನಿಂದ ಸಂಜೆಯವರೆಗೆ ಇಲ್ಲಿ ಒಟ್ಟಾಗಿ ದುಡಿಯುತ್ತಾರೆ. ಕೈಗವಸು, ಸಮವಸ್ತ್ರ ಧರಿಸಿ ಕೆಲಸಕ್ಕೆ ಆರಂಭ. ಲಿಂಬೆಹಣ್ಣು, ಮಾವಿನಕಾಯಿಗಳನ್ನು ಸರಸರನೆ ಹಚ್ಚುತ್ತಾರೆ. ಸಾಂಬಾರವಸ್ತುಗಳನ್ನು ಕಲಸುತ್ತಾರೆ. ಬಾಯಿ ನೀರೂರಿಸುವ ಉಪ್ಪಿನಕಾಯಿಯನ್ನು ಕೆಲವೇ ತಾಸುಗಳಲ್ಲಿ ತಯಾರಿಸುತ್ತಾರೆ. ಮಾವು, ಲಿಂಬೆ,ಹುಣಸೆ, ಕರಂಡೆ (ಕೌಳಿಕಾಯಿ), ಕ್ಯಾರೆಟ್, ಮೆಣಸಿನಕಾಯಿಗಳನ್ನು ಸೇರಿಸಿ ಸಮ್ಮಿಶ್ರ ಉಪ್ಪಿನಕಾಯಿಯನ್ನು ಇಲ್ಲಿ ತಯಾರಿಸಲಾಗುತ್ತದೆ.

ಸ್ವಸಹಾಯ ಸಂಘದ ಸದಸ್ಯರಿಗೆ ತರಬೇತಿ ಶಿಬಿರ




ಆಹಾರ ಭದ್ರತೆಗೆ ಮುಂದಾದ ಸ್ವಸಹಾಯ ಸದಸ್ಯರು



ಧರ್ಮಸ್ಥಳ ಗ್ರಾಮಾಭಿವೃದ್ಧಿ ಫಲವಾಗಿ ಆಧುನಿಕ ಕೃಷಿ ಅವಲಂಬನೆ










ಮಹಿಳೆ ಮತ್ತು ಜ್ಞಾನವಿಕಾಸ ಕೇಂದ್ರಗಳು


ಮಹಿಳಾ ಸಬಲೀಕರಣಕ್ಕಾಗಿ ಪ್ರಾರಂಭಿಸಲ್ಪಟ್ಟ ಜ್ಞಾನ ವಿಕಾಸ ಕಾರ್ಯಕ್ರಮವು ಮಹಿಳೆಯರೊಂದಿಗೆ ಬೆರೆಯುವ ಸದವಕಾಶ ಹಾಗೂ ಆ ಮೂಲಕ ಹೊರ ಪ್ರಪಂಚದ ಬಗ್ಗೆ ಅರಿಯುವ ಅವಕಾಶ ನೀಡುವುದರ ಜೊತೆಗೆ ಸಾಮಾಜಿಕ, ಆರ್ಥಿಕವಾಗಿ ಸಹಾಯವನ್ನು ಜ್ಞಾನ ವಿಕಾಸ ಕೇಂದ್ರದಿಂದ ಪಡೆಯಬಹುದು ಎಂದು ಈ ಕೆಳಗಿನ ಚಿತ್ರದಿಂದ ಗಮನಿಸಬಹುದು.



ಶ್ರಮದಾನ ಶಿಬಿರಗಳು







ಮಲ್ಲಿಗೆ ಕೃಷಿಯ ಬಗ್ಗೆ ಮಹಿಳೆಯರಿಗೆ ತರಬೇತಿ



ಸಾವಯವ ಕೃಷಿಯಿಂದ ಫಲವತ್ತಾದ ತೆಂಗಿನ ಕಾಯಿಗಳು







ಮದ್ಯವರ್ಜನ ಶಿಬಿರದಿಂದ ಮಾಹಿತಿಯನ್ನು ಪಡೆಯುವ ಸ್ವಸಹಾಯ ಸಂಘದ ಸದಸ್ಯರು



ಕೃಷಿ ಮೇಳ ಮತ್ತು ಸ್ವಸಹಾಯ ಸಂಘದ ಸದಸ್ಯರ ಭಾಗವಹಿಸುವಿಕೆ







ಅಧ್ಯಾಯ ೬

ಮಾಹಿತಿ ವಿಶ್ಲೇಷಣೆ


ಅಧ್ಯಾಯ ೪: ಮಾಹಿತಿ ವಿಶ್ಲೇಷಣೆ

"ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ" ಅಧ್ಯಯನಕ್ಕೆ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ಮಾಹಿತಿ ಸಂಗ್ರಹಣೆ ಮಾಡಲಾಗಿದೆ. ಬೆಳ್ತಂಗಡಿ ತಾಲೂಕಿನ ಗುರುವಾಯನಕೆರೆ, ಲ್ಯಾಲ ಮತ್ತು ಕೂವೆಟ್ಟು ಪ್ರದೇಶಗಳ ೨೦ ಸ್ವ-ಸಹಾಯ ಸಂಘಗಳ ಸದಸ್ಯರನ್ನು ಭೇಟಿ ಮಾಡಿ ಮತ್ತು ಮಂಗಳೂರು ತಾಲೂಕಿನ ೩೦ ಸ್ವ-ಸಹಾಯ ಸಂಘಗಳ ಸದಸ್ಯರನ್ನು ಭೇಟಿ ಮಾಡಿ ಸಂಗ್ರಹಿಸಿದ ದತ್ತಾಂಶಗಳ ಮಾಹಿತಿ ವಿಶ್ಲೇಷಣೆ ಮಾಡಲಾಗಿದೆ. ಬಹುತೇಕ ಸ್ವ-ಸಹಾಯ ಗುಂಪುಗಳ ಸದಸ್ಯರು ಆದ ನಂತರ ಸರಕಾರದಿಂದ ಪಡೆಯುವ ಸೌಲಭ್ಯಗಳಿಗಿಂತ ಗುಂಪಿಗೆ ಸೇರಿದ ಮೇಲೆ ಸೌಲಭ್ಯ ಜಾಸ್ತಿಯಾಗಿ ಪಡೆದಿದ್ದಾರೆ. ಇನ್ನು ಕೆಲವು ಗುಂಪುಗಳಲ್ಲಿ ಸಮವಸ್ತ್ರ ಮತ್ತು ಗುರುತಿನ ಚೀಟಿಗಳನ್ನು ಪಡೆದಿದ್ದಾರೆ. ಸರಕಾರದಿಂದ ಪಡೆಯುವ ಸೌಲಭ್ಯಗಳನ್ನು ಜನರಿಗೆ ಸರಿಯಾಗಿ ಹೇಳಿ ಅದನ್ನು ಸರಿಯಾಗಿ ಬಳಸಿಕೊಳ್ಳುವಂತೆ ಸಂಘದ ಸದಸ್ಯರು ಇತರರಿಗೆ ಮಾಹಿತಿ ನೀಡುತ್ತಾರೆ.

ನಾನು ತಯಾರಿಸಿದ ಪ್ರಶ್ನಾವಳಿ ಮತ್ತು ಮುಖತಃ ಭೇಟಿಯ ಅನುಭವಗಳನ್ನು ಶೇಕಡಾವಾರು, ಸರಾಸರಿ ಉಪಯೋಗಿಸಿ ಮುಂದಿನ ಮಾಹಿತಿ ವಿಶ್ಲೇಷಣೆ ಮಾಡಲಾಗಿದೆ. ಮಾಹಿತಿ ವಿಶ್ಲೇಷಣೆಯ ಅನುಭವಗಳನ್ನು ನಕ್ಷೆಯ ಮೂಲಕ ಕೆಳಗೆ ನೀಡಲಾಗಿದೆ.

ಕೊಷ್ಟಕ ೬.೧: ವಯೋಮಾನ ಮತ್ತು ವೈವಾಹಿಕ ಸ್ಥಾನಮಾನ

ಕ್ರಮ ಸಂಖ್ಯೆ	ವಯೋಮಾನ	ಅವಿವಾಹಿತರು	ವಿವಾಹಿತರು
೧.	೧೮–೨೯	೪	೫
೨.	೨೯–೩೮	೨	೧೨
೩.	೩೯–೪೮	–	೧೧
೪.	೪೯–೫೮	–	೧೨
೫.	೫೮ ಕ್ಕಿಂತ ಮೇಲ್ಪಟ್ಟು	–	೪
	ಒಟ್ಟು	೬	೪೪




ಕೋಷ್ಟಕ ೬.೧ ರಲ್ಲಿ ಸ್ವ-ಸಹಾಯ ಸಂಘದ ಸದಸ್ಯರ ಕುಟುಂಬದ ವಯೋಮಾನ ಮತ್ತು ವೈವಾಹಿಕ ಸ್ಥಾನಮಾನವನ್ನು ನೀಡಲಾಗಿದೆ. ಈ ಮಾಹಿತಿಯ ಪ್ರಕಾರ ಅವಿವಾಹಿತರು ೪ ಮಂದಿ ಮತ್ತು ವಿವಾಹಿತರು ೫ ಮಂದಿ ೧೮ ವರ್ಷದಿಂದ ೨೯ ವರ್ಷದೊಳಗಿನವರು.



ಹಾಗೆಯೇ ೨೯ ರಿಂದ ೩೮ ವರ್ಷ ವಯೋಮಾನದಲ್ಲಿ ಅವಿವಾಹಿತರು೨ ಮತ್ತು ವಿವಾಃಇತರು ೧೨. ಮತ್ತೆ ೩೯ ರಿಂದ ೪೮ ವರ್ಷ ವಯೋಮಾನದವರಲ್ಲಿ ಅವಿವಾಹಿತರು ಶೂನ್ಯ ಮತ್ತು ವಿವಾಹಿತರು ೧೨ ಮಂದಿ ಇದ್ದಾರೆ. ಮತ್ತೆ ೪೯ ರಿಂದ ೫೮ ವರ್ಷದ ವಯೋಮಾನದ ಅವಿವಾಹಿತರ ಸಂಖ್ಯೆ ಶೂನ್ಯ ಮತ್ತು ವಿವಾಹಿತರು ೧೨ ಮಂದಿ ಇದ್ದಾರೆ. ೫೯ ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದವರಲ್ಲಿ ೪ ಮಂದಿ ವಿವಾಹಿತರು ಇದ್ದಾರೆ. ಈ ಮಾಹಿತಿ ವಿಶ್ಲೇಷಣೆಯ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಸ್ವ-ಸಹಾಯ ಸಂಘಕ್ಕೆ ಸೇರಿದವರಲ್ಲಿ ಹೆಚ್ಚಿನವರು ವಿವಾಹಿತರು ಹಾಗೆಯೇ ಕಡಿಮೆ ಪ್ರಮಾಣದಲ್ಲಿ ಅವಿವಾಹಿತರು ಇದ್ದಾರೆ ಎಂಬುದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ.

ಕೋಷ್ಟಕ ೬.೨: ಸದಸ್ಯರ ವಾರ್ಷಿಕ ಆದಾಯ

ಕ್ರಮ ಸಂಖ್ಯೆ	**ವಾರ್ಷಿಕ ಆದಾಯ**	**ಮಾಹಿತಿದಾರರ ಸಂಖ್ಯೆ**	**ಶೇಕಡಾ**
೧.	೬,೦೦೦-೧೦,೦೦೦	೧೩	೨೬
೨.	೧೦,೦೦೦-೧೫,೦೦೦	೨೫	೫೦
೩.	೧೫,೦೦೦-೨೦,೦೦೦	೩	೧೬
೪.	೨೦,೦೦೦ಕ್ಕಿಂತ ಮೇಲ್ಪಟ್ಟು	೪	೮
	ಒಟ್ಟು	೫೦	೧೦೦




ಕೊಷ್ಟಕ ೬.೨ ರಲ್ಲಿ ಸ್ವ-ಸಹಾಯ ಸಂಘದ ಸದಸ್ಯರ ಕುಟುಂಬದ ವಾರ್ಷಿಕ ಆದಾಯವನ್ನು ತೋರಿಸಲಾಗಿದೆ. ಈ ಮಾಹಿತಿಯ ಪ್ರಕಾರ ೧೩ ಮಂದಿ ರೂ. ೬,೦೦೦-೧೫,೦೦೦ದ ವರೆಗೆ, ೨೫ ಮಂದಿ ರೂ. ೧೦,೦೦೦-೧೫,೦೦೦ದ ವರೆಗೆ, ೮ ಮಂದಿ ರೂ. ೧೫,೦೦೦-೨೦,೦೦೦ದ ವರೆಗೆ ಮತ್ತು ೪ ಮಂದಿ ರೂ. ೨೦,೦೦೦ ಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಹೊಂದಿದ್ದಾರೆ. ಈ ಮಾಹಿತಿಯ ಪ್ರಕಾರ ಹೆಚ್ಚಿನ ಜನರು ಬಡತನದ ಸ್ಥಿತಿಯಲ್ಲಿ ಇದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಅತೀ ಹೆಚ್ಚು ಪುರುಷರು ಅಂದರೆ ೪೨% ಇದ್ದರೆ, ಪಟ್ಟಣ ಪ್ರದೇಶಗಳಲ್ಲಿ ೮% ಪುರುಷರು ಮಾತ್ರ ಸ್ವ-ಸಹಾಯ ಸಂಘಗಳ ಸದಸ್ಯರಾಗಿದ್ದಾರೆ.



ಕೋಷ್ಟಕ ೬.೩: ಸ್ವ-ಸಹಾಯ ಸಂಘದಲ್ಲಿ ನೀವು ಎಷ್ಟು ವರ್ಷಗಳಿಂದ ಸದಸ್ಯರಾಗಿದ್ದೀರಿ

ಕ್ರಮ ಸಂಖ್ಯೆ	ಸದಸ್ಯತ್ವದ ಅವಧಿ	ಮಾಹಿತಿದಾರರ ಸಂಖ್ಯೆ	ಶೇಕಡಾ
೧.	೧-೩ ವರ್ಷ	೬	೧೨
೨.	೩-೬ ವರ್ಷ	೩	೬
೩.	೬-೧೦ ವರ್ಷ	೧೬	೩೨
೪.	೧೦-೧೫ ವರ್ಷ	೨೦	೪೦
೫.	೧೫-೨೦ ವರ್ಷ	೫	೧೦
	ಒಟ್ಟು	೫೦	೧೦೦



ನೀವು ಎಷ್ಟು ಸಮಯದಿಂದ ಸ್ವ-ಸಹಾಯ ಸಂಘದ ಸದಸ್ಯರಾಗಿದ್ದೀರಿ ಎಂದು ಮಾಹಿತಿದಾರರಲ್ಲಿ ವಿಚಾರಿಸಿದಾಗ ಕೆಲವರು ೧ ರಿಂದ ೩ ವರ್ಷ, ಕೆಲವರು ೩ ರಿಂದ ೬ ವರ್ಷ, ಕೆಲವರು ೬ ರಿಂದ ೧೦ ವರ್ಷ, ಕೆಲವರು ೧೦ ರಿಂದ ೧೫ ವರ್ಷ, ಮತ್ತು ಉಳಿದವರು ೧೫ ರಿಂದ ೨೦ ವರ್ಷಗಳಿಂದ ಸ್ವ-ಸಹಾಯ ಸಂಘದ ಸದಸ್ಯರಾಗಿ ಸೇವೆ ಸಲ್ಲಿಸುತ್ತಿರುವುದಾಗಿ ಹೇಳಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ೬ ರಿಂದ ೨೦ ವರ್ಷಗಳವರೆಗೆ ಖಾಯಂ ಆಗಿ ಸ್ವ-ಸಹಾಯ ಸಂಘದ ಸದಸ್ಯರಾಗಿದ್ದಾರೆ.



ಕೋಷ್ಟಕ ೬.೪: ನೀವು ನಗರ ಅಥವಾ ಗ್ರಾಮೀಣ ಪ್ರದೇಶದ ಸದಸ್ಯರೇ

ಕ್ರಮ ಸಂಖ್ಯೆ	ಪ್ರದೇಶ	ಮಾಹಿತಿದಾರರ ಸಂಖ್ಯೆ	ಶೇಕಡಾ
೧.	ನಗರ	೧೩	೨೬
೨.	ಗ್ರಾಮೀಣ	೩೭	೭೪
	ಒಟ್ಟು	೫೦	೧೦೦




ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಸಂಘಗಳು ಗ್ರಾಮೀಣ ಪ್ರದೇಶದಲ್ಲಿ ಅತೀ ಹೆಚ್ಚು ಅಂದರೆ ೭೪% ಇದ್ದರೆ ನಗರ ಪ್ರದೇಶದಲ್ಲಿ ಕೇವಲ ೨೬% ಸ್ವ-ಸಹಾಯ ಗುಂಪುಗಳಿವೆ. ಗ್ರಾಮೀಣ ಪ್ರದೇಶದಲ್ಲಿ ಸದಸ್ಯರ ಸಂಖ್ಯೆ ಜಾಸ್ತಿ ಇದ್ದರೆ ನಗರ ಪ್ರದೇಶದಲ್ಲಿ ಕಡಿಮೆ ಇದೆಯೆಂದು ಮಾಹಿತಿ ವಿಶ್ಲೇಷಣೆಯಿಂದ ತಿಳಿಯಬಹುದಾಗಿದೆ.



ಕೋಷ್ಟಕ ೬.೫: ಸ್ವ-ಸಹಾಯ ಗುಂಪಿನಲ್ಲಿರುವ ಮಹಿಳಾ ಸದಸ್ಯರ ಸಂಖ್ಯೆ


ಕ್ರಮ ಸಂಖ್ಯೆ	ಮಹಿಳಾ ಸದಸ್ಯರ ಸಂಖ್ಯೆ	ಮಾಹಿತಿದಾರರ ಸಂಖ್ಯೆ	ಶೇಕಡಾ
೧.	ನಗರ	೧೨	೨೪
೨.	ಗ್ರಾಮೀಣ	೩೮	೭೬
	ಒಟ್ಟು	೫೦	೧೦೦



ಸ್ವ-ಸಹಾಯ ಸಂಘದ ಮಹಿಳಾ ಸದಸ್ಯರ ಸಂಖ್ಯೆಯನ್ನು ಗಮನಿಸಿದರೆ ಗ್ರಾಮೀಣ ಪ್ರದೇಶಗಳಲ್ಲಿ ಅತೀ ಹೆಚ್ಚು ಮಹಿಳೆಯರು ಇದ್ದಾರೆ. ಆದರೆ ನಗರ ಪ್ರದೇಶದಲ್ಲಿ ಕೇವಲ ೨೪% ಮಹಿಳೆಯರು ಮಾತ್ರ ಸ್ವ-ಸಹಾಯ ಸಂಘಗಳ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಾರೆ.

ಕೋಷ್ಟಕ ೬.೬: ಸ್ವ-ಸಹಾಯ ಗುಂಪಿನಲ್ಲಿರುವ ಪುರುಷರ ಸಂಖ್ಯೆ

ಕ್ರಮ ಸಂಖ್ಯೆ	ಪುರುಷರ ಸಂಖ್ಯೆ	ಮಾಹಿತಿದಾರರ ಸಂಖ್ಯೆ	ಶೇಕಡಾ
೧.	ನಗರ	೮	೧೬
೨.	ಗ್ರಾಮೀಣ	೪೨	೮೪
	ಒಟ್ಟು	೫೦	೧೦೦




ಸ್ವ-ಸಹಾಯ ಸಂಘದ ಪುರುಷರ ಸಂಖ್ಯೆಯನ್ನು ಗಮನಿಸಿದರೆ ಗ್ರಾಮೀಣ ಪ್ರದೇಶಗಳಲ್ಲಿ ನಗರಪ್ರದೇಶಕ್ಕಿಂತ ಹೆಚ್ಚು ಪುರುಷರು ಇರುವುದು ಕಂಡುಬರುತ್ತದೆ. ಗ್ರಾಮೀಣ ಪ್ರದೇಶದ ಸ್ವ-ಸಹಾಯ ಸಂಘಗಳಲ್ಲಿ ೮೪% ಪುರುಷರಿದ್ದರೆ ನಗರ ಪ್ರದೇಶದಲ್ಲಿ ಕೇವಲ ೧೬% ಪುರುಷರು ಮಾತ್ರ ಸ್ವ-ಸಹಾಯ ಸಂಘಗಳ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಾರೆ.



ಕೋಷ್ಟಕ ೬.೭: ಸ್ವ-ಸಹಾಯ ಗುಂಪಿನ ಸದಸ್ಯರಾದ್ದರಿಂದ ನಿಮ್ಮ ಜೀವನಮಟ್ಟ ಸುಧಾರಿಸಿದೆಯೇ

ಕ್ರಮ ಸಂಖ್ಯೆ	ಜೀವನ ಮಟ್ಟ	ಮಾಹಿತಿದಾರರ ಸಂಖ್ಯೆ	ಶೇಕಡಾ
೧.	ಅತ್ಯುತ್ತಮ	೪೩	೮೬
೨.	ಉತ್ತಮ	೬	೧೨
೩.	ತೃಪ್ತಿಕರ	೧	೨
	ಒಟ್ಟು	೫೦	೧೦೦




ಸ್ವ-ಸಹಾಯ ಗುಂಪಿನ ಸದಸ್ಯರಾದ್ದರಿಂದ ನಮ್ಮ ಜೀವನ ಮಟ್ಟ ಸುಧಾರಿಸಿದೆ ಎಂದು ೮೬% ಮಂದಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ೬% ಮಂದಿ ಉತ್ತಮವಾಗಿದೆಯೆಂದೂ ೨% ಮಂದಿ ತೃಪ್ತಿಕರವಾಗಿದೆ ಎಂದಿದ್ದಾರೆ. ಆದರೆ ಸಂಘದ ಯಾವುದೇ ಸದಸ್ಯರು ತಮ್ಮ ಜೀವನ ಮಟ್ಟ ಉತ್ತಮವಾಗಿಲ್ಲ ಎಂದು ತಿಳಿಸಿಲ್ಲ ಎಂಬುದನ್ನು ಮೇಲಿನ ನಕ್ಷೆಯಿಂದ ತಿಳಿಯಬಹುದಾಗಿದೆ.



ಕೋಷ್ಟಕ ೬.೮: ಸ್ವ-ಸಹಾಯ ಗುಂಪಿಗೆ ಸೇರಿದ ನಂತರ ಆದ ಪ್ರಯೋಜನ

ಕ್ರಮ ಸಂಖ್ಯೆ	ಪ್ರಯೋಜನ	ಮಾಹಿತಿದಾರರ ಸಂಖ್ಯೆ	ಶೇಕಡಾ
೧.	ಬಡತನ ನಿವಾರಣೆ	೧೪	೨೮
೨.	ಶಿಕ್ಷಣ ಮಟ್ಟ ಸುಧಾರಣೆ	೭	೧೪
೩.	ಆರ್ಥಿಕ ಮಟ್ಟ ಸುಧಾರಣೆ	೧೧	೨೨
೪.	ನಿರುದ್ಯೋಗ ನಿವಾರಣೆ	೧೮	೩೬
	ಒಟ್ಟು	೫೦	೧೦೦




ಸ್ವ-ಸಹಾಯ ಸಂಘಕ್ಕೆ ಸೇರಿದ ನಂತರ ಸದಸ್ಯರು ಪಡೆದ ಪ್ರಯೋಜನಗಳೆಂದರೆ ಆರ್ಥಿಕವಾಗಿ ನಿರುದ್ಯೋಗ ನಿವಾರಣೆ, ಹಾಗೆಯೇ, ಶೈಕ್ಷಣಿಕ ಅಭಿವೃದ್ಧಿಯನ್ನು ಹೊಂದಿದ್ದಾರೆ. ಶೇಕಡಾ ೨೮ ಸದಸ್ಯರು ತಮ್ಮ ಬಡತನವನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿಕೊಂಡಿದ್ದಾರೆ. ಶೇಕಡಾ ೩೬ ಸದಸ್ಯರು ನಿರುದ್ಯೋಗವನ್ನು ನಿವಾರಿಸಿಕೊಂಡಿದ್ದಾರೆ. ಅದೇ ರೀತಿ ೨೨% ಮಂದಿ ತಮ್ಮ ಜೀವನದ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಂಡಿದ್ದರೆ ಶೇಕಡಾ ೧೪ ಮಂದಿ ಸದಸ್ಯರು ತಮ್ಮ



ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಸ್ವ-ಸಹಾಯ ಸಂಘವನ್ನು ವೇದಿಕೆಯಾಗಿ ಬಳಸಿಕೊಂಡಿದ್ದಾರೆ.

ಕೋಷ್ಟಕ ೬.೯: ಸ್ವ-ಸಹಾಯ ಸಂಘದಿಂದ ಸಾಲ ಪಡೆದ ಉದ್ದೇಶ

ಕ್ರಮ ಸಂಖ್ಯೆ	ಸಾಲ ಪಡೆದ ಉದ್ದೇಶ	ಮಾಹಿತಿದಾರರ ಸಂಖ್ಯೆ	ಶೇಕಡಾ
೧.	ಕೃಷಿ	೧೯	೩೮
೨.	ಗೃಹ ನಿರ್ಮಾಣ	೧೪	೨೮
೩.	ಸ್ವ ಉದ್ಯೋಗ	೧೨	೨೪
೪.	ಶಿಕ್ಷಣ	೫	೧೦
	ಒಟ್ಟು	೫೦	೧೦೦



ಕೋಷ್ಟಕ ೬.೯ ರಲ್ಲಿ ತೋರಿಸಿರುವ ಹಾಗೆ ಸ್ವ-ಸಹಾಯ ಸಂಘದಿಂದ ನೀವು ಯಾವ ಉದ್ದೇಶಕ್ಕೆ ಸಾಲವನ್ನು ಪಡೆದಿರಿ ಎಂಬುದನ್ನು ಪ್ರಶ್ನಾವಳಿಯ ಮೂಲಕ ಕೇಳಿದಾಗ ಸ್ವ-ಸಹಾಯ



ಸಂಘದ ಬಹಳಷ್ಟು ಸದಸ್ಯರು ಕೃಷಿ ಚಟುವಟಿಕೆಗೆ ಸಾಲವನ್ನು ಪಡೆದಿರುವುದು (೩೮%) ಕಂಡುಬಂದಿರುತ್ತದೆ. ಅದೇ ರೀತಿ ಗೃಹ ನಿರ್ಮಾಣ ಮತ್ತು ರಿಪೇರಿಗೆ ೨೮% ಜನರು ಸಾಲವನ್ನು ಪಡೆದಿದ್ದಾರೆ. ಸ್ವ ಉದ್ಯೋಗ ಕೈಗೊಳ್ಳಲು ಶೇಕಡಾ ೨೪ ಸದಸ್ಯರು ಸಾಲವನ್ನು ಪಡೆದಿದ್ದು ೧೦% ಸದಸ್ಯರು ಶಿಕ್ಷಣಕ್ಕೆ ಸಾಲ ಪಡೆದು ಅದನ್ನು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಿ ಕೊಂಡದ್ದನ್ನು ಮೇಲಿನ ಕೋಷ್ಟಕದಲ್ಲಿ ಗಮನಿಸಬಹುದು.

ಸ್ವ-ಸಹಾಯ ಸಂಘಕ್ಕೆ ಸೇರಿದ ಮೇಲೆ ಅನೇಕ ಸಂಘಗಳ ಸದಸ್ಯರು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ್ದಾರೆ. ಸ್ವ-ಸಹಾಯ ಸಂಘಕ್ಕೆ ಸೇರಿ ನಂತರ ಆರ್ಥಿಕ ಅಭಿವೃದ್ಧಿ ಹೊಂದಿದವರು ಇತರರಿಗೆ ಈ ಯೋಜನೆಯ ಮಹತ್ವವನ್ನು ತಿಳಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸುತ್ತಿದ್ದಾರೆ. ಸ್ವ-ಸಹಾಯ ಸಂಘಕೆ ಸೇರಿದ ಸದಸ್ಯರಿಗೆ ವಿಮಾ ಯೋಜನೆ, ಸಂಧ್ಯಾ ಸುರಕ್ಷತೆ ಹಾಗೂ ಇತರ ವೈದ್ಯಕೀಯ ಮತ್ತು ಶೈಕ್ಷಣಿಕ ಪ್ರಗತಿ ಸಾಧಿಸಲು ಈ ಸ್ವ-ಸಹಾಯ ಸಂಘ ವೇದಿಕೆಯಾಗಿದೆ. ಮುಖ್ಯವಾಗಿ ಸ್ವ-ಸಹಾಯ ಗುಂಪಿನ ಉದ್ದೇಶವೆಂದರೆ ನಾಯಕತ್ವ, ಉಳಿತಾಯ ಮನೋಭಾವ ಮತ್ತು ಚರ್ಚಾಕೂಟ. ಗುಂಪಿನ ಅನೇಕ ಸದಸ್ಯರು ಚರ್ಚಾಕೂಟ ಮತ್ತು ಗ್ರಾಮಸಭೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುತ್ತಾರೆ. ಗುಂಪಿನ ಅನೇಕ ಸದಸ್ಯರು ಸ್ವ-ಸಹಾಯ ಗುಂಪಿಗೆ ಸೇರಿದ ನಂತರ ಅವರ ಜೀವನದಲ್ಲಿ ನೆಮ್ಮದಿ ಪಡೆದುಕೊಂಡಿದ್ದಾರೆ. ಸದಸ್ಯರು ಇನ್ನು ಮುಂದೆಯೂ ಸ್ವ-ಸಹಾಯ ಗುಂಪಿನಿಂದ ನೆರವನ್ನು ಪಡೆಯಲು ಬಯಸುತ್ತಾರೆ. ಅನೇಕ ಸ್ವ-ಸಹಾಯ ಸಂಘದ ಸದಸ್ಯರು ಗ್ರಾಮೀಣ ಪ್ರದೇಶಗಳಲ್ಲಿ ಶ್ರಮದಾನ ಶಿಬಿರಗಳನ್ನು ನಡೆಸಿ ಗ್ರಾಮೀಣ ರಸ್ತೆ, ಇಂಗುಗುಂಡಿ, ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಸ್ವ-ಸಹಾಯ ಗುಂಪಿಗೆ ಸೇರಿದ ನಂತರ ಸದಸ್ಯರ ಬಡತನ ಸ್ವಲ್ಪ ಮಟ್ಟಿಗೆ ನಿವಾರಣೆಯಾಗಿದೆ.

ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕಿನ ಅನೇಕ ಸ್ವ-ಸಹಾಯ ಸಂಘಗಳನ್ನು ಭೇಟಿ ಮಾಡಿದಾಗ ಅನೇಕ ಸಂಘಗಳು ಮಾನ್ಯತೆ ಪಡೆಯದೇ ಇರುವುದು ಗಮನಕ್ಕೆ ಬಂದಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಸ್ವ-ಸಹಾಯ ಸಂಘಗಳನ್ನು ನೋಂದಾಯಿಸಿಕೊಳ್ಳುವುದನ್ನು ಕಡ್ಡಾಯ ಮಾಡಬೇಕಾಗಿದೆ. ಸ್ವ-ಸಹಾಯ ಗುಂಪಿನಲ್ಲಿ ವಾರ್ಷಿಕ ದಿನಾಚರಣೆಯನ್ನು ಆಯಾ ಪ್ರದೇಶದ ಎಲ್ಲಾ ಗುಂಪಿನವರು ಸೇರಿ ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ಯಾವುದೇ ಒಂದು ಗುಂಪಿನಲ್ಲಿ ಮಹಿಳೆಯರ ಬಗ್ಗೆ ಮೃದು ಧೋರಣೆಯನ್ನು ಹೊಂದಿರುವುದಿಲ್ಲ. ಆದ್ದರಿಂದ ಸ್ವ-ಸಹಾಯ ಸಂಘದಲ್ಲಿ ಮಹಿಳೆಯರ ಸ್ಥಿತಿಗತಿ ಉತ್ತಮವಾಗಿದೆ. ಇನ್ನು ಗ್ರಾಮೀಣ ಪ್ರದೇಶ ಆಗಿರಬಹುದು ಅಥವಾ ಪಟ್ಟಣ ಪ್ರದೇಶವಾಗಿರಬಹುದು ಸ್ವ-ಸಹಾಯ ಸಂಘಗಳಿಗೆ ತಮ್ಮದೇ ಆದ ಸ್ವಂತ ಕಟ್ಟಡವಿರುವುದಿಲ್ಲ. ವಾರದ ಸಭೆಯನ್ನು ನಡೆಸಲು ಅವರು ಪಕ್ಕದ ಮಂದಿರ, ಶಾಲೆ, ಅಂಗನವಾಡಿ ಕೇಂದ್ರಗಳನ್ನು ಉಪಯೋಗಿಸುತ್ತಾರೆ. ಸ್ವ-ಸಹಾಯ ಸಂಘದ ಸದಸ್ಯರಾದ ನಂತರ ಅವರ ಜೀವನಮಟ್ಟ ಸುಧಾರಿಸಿದ್ದು ಮತ್ತು ಅವರು ಇತರರಿಗೆ ಉತ್ತೇಜನ ನೀಡುತ್ತಾರೆ. ಶೇಕಡಾ ೯೪ ಸದಸ್ಯರು ಸ್ವ-ಸಹಾಯ ಸಂಘದಿಂದ ಶಿಕ್ಷಣಕ್ಕೆ, ಸ್ವ ಉದ್ಯೋಗಕ್ಕೆ, ಕೃಷಿಗೆ, ಮನೆ ರಿಪೇರಿ ಮಾಡಲು ಮತ್ತು ಮನೆ ಕಟ್ಟಲು ಸಾಲವನ್ನು ಪಡೆದಿರುತ್ತಾರೆ. ಈ ರೀತಿ ಪಡೆದ ಸಾಲಕ್ಕೆ ಸಂಘದ ಸದಸ್ಯರಿಗೆ ಶೇಕಡಾ ೧ ದರದಲ್ಲಿ ಬಡ್ಡಿ ವಿಧಿಸಲಾಗುತ್ತದೆ.

ಸ್ವ-ಸಹಾಯ ಗುಂಪಿಗೆ ಸೇರಿದ ಸದಸ್ಯರು ನಿರುದ್ಯೋಗ ನಿವಾರಣಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಿರುದ್ಯೋಗ ನಿವಾರಣೆಯನ್ನು ಯಾವ ರೀತಿ ಅನುಷ್ಠಾನಗೊಳಿಸಬಹುದು ಎಂಬ ತರಬೇತಿಯನ್ನು ಪಡೆದಿರುತ್ತಾರೆ. ಸಂಘದ ಅನೇಕ ಸದಸ್ಯರು ಸ್ವ-ಸಹಾಯ ಗುಂಪಿನಿಂದ ಮುಂದೆ ಸದಸ್ಯರಿಗೆ ಒಳ್ಳೆಯ ಭವಿಷ್ಯ ಇದೆ ಎಂದು ನಂಬಿಕೊಂಡಿದ್ದಾರೆ. ಸ್ವ-ಸಹಾಯ ಸಂಘದ ಸದಸ್ಯರ ಜೀವನ ಮಟ್ಟ ಸುಧಾರಿಸುವುದರ ಜೊತೆಗೆ ಸಮಾಜದಲ್ಲಿ ಅವರು ಗೌರವಯುತ ಸ್ಥಾನವನ್ನು ಪಡೆದಿದ್ದಾರೆ.

ಅಧ್ಯಾಯ ೭

ಸಾರಾಂಶ

ಅಧ್ಯಾಯ ೭: ಸಾರಾಂಶ

"ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ" ಎಂಬ ಅಧ್ಯಯನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ಅಧ್ಯಯನವನ್ನು ಮಾಡಿರುತ್ತೇನೆ. ಗ್ರಾಮೀಣ ಬಡತನಕ್ಕೆ ಮುಖ್ಯವಾದ ಕಾರಣಗಳು ಮತ್ತು ನಿರುದ್ಯೋಗ ನಿವಾರಣೆಗೆ ಸರಕಾರ ಕೈಗೊಂಡ ಕಾರ್ಯಕ್ರಮಗಳನ್ನು ಮತ್ತು ಸ್ವ-ಸಹಾಯ ಗುಂಪುಗಳ ಬೆಳವಣಿಗೆಗೆ ಕಾರಣಗಳನ್ನು ಕಂಡುಹಿಡಿಲಾಗಿದೆ ಎಂದು ತಿಳಿಯಲಾಗಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್, ನೀರಾವರಿ, ಸಾರಿಗೆ, ರಸ್ತೆ ಮತ್ತು ಶಾಲಾ ಕಾಲೇಜುಗಳ ಸಮಸ್ಯೆ, ಆಸ್ಪತ್ರೆಗಳ ಕೊರತೆ ಎಂದು ಕಾಣುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಜನರು ಮುಖ್ಯವಾಗಿ ಕೃಷಿಯನ್ನೇ ನಂಬಿಕೊಂಡಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳ ಅರ್ಭಟದಿಂದಾಗಿ ಕೃಷಿ ವಿನಾಶದತ್ತ ಸಾಗುತ್ತಿದೆ. ಆದ್ದರಿಂದ ಕೃಷಿಯನ್ನೇ ನಂಬಿ ಬದುಕುತ್ತಿರುವ ಜನ ಕೈಗಾರಿಕೆಗಳ ಕಡೆ ವಲಸೆ ಹೋಗುತ್ತಿದ್ದಾರೆ.

ಬಡತನಕ್ಕೆ ಮುಖ್ಯವಾಗಿ ಕೃಷಿಯೇ ಕಾರಣ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಗ್ರಾಮೀಣ ಪ್ರದೇಶದ ಜನರು ಕೃಷಿಯನ್ನು ಮಾಡಲು ಮಳೆಯ ನೀರನ್ನೇ ಅವಲಂಬಿಸಿರುತ್ತಾರೆ. ಜನರಿಗೆ ಆರು ತಿಂಗಳು ಕೆಲಸವಿದ್ದರೆ ಆರು ತಿಂಗಳು ಕೆಲಸವಿರುವುದಿಲ್ಲ. ಆ ಸಂದರ್ಭದಲ್ಲಿ ಕೃಷಿಯನ್ನೇ ನಂಬಿ ಬದುಕುತ್ತಿದ್ದ ಗ್ರಾಮೀಣ ಜನರು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಈ ನಿರುದ್ಯೋಗ ಮತ್ತು ಬಡತನವನ್ನು ನಿವಾರಿಸಲು ಸ್ವ-ಸಹಾಯ ಗುಂಪುಗಳು ಕಳೆದ ಇಪ್ಪತ್ತು ವರ್ಷಗಳ ಹಿಂದೆ ಜನ್ಮ ತಾಳಿದವು. ಇದಕ್ಕೆ ಮುಖ್ಯ ಕಾರಣ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಧರ್ಮಸ್ಥಳದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು. ಇವರು ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿಯನ್ನು ಸ್ಥಾಪನೆ ಮಾಡಿ ಗ್ರಾಮೀಣ ಜನರಲ್ಲಿ ಬಡತನ ಮತ್ತು ನಿರುದ್ಯೋಗ ನಿವಾರಣೆಯಾಗುವಲ್ಲಿ ಸ್ವ-ಸಹಾಯ ಗುಂಪುಗಳು ಪ್ರಾರಂಭವಾಗಿ ಬಡಜನರಲ್ಲಿ ಆಶಾಕಿರಣವನ್ನು ಮೂಡಿಸಿದೆ. ಅದೇ ರೀತಿ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆಯಲ್ಲಿ ಪ್ರಾರಂಭವಾಗಿ ಗ್ರಾಮೀಣ ಬಡಜನರಿಗೆ ದೊರಕುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುತ್ತಿದೆ. ಒಡಿಯೂರು ಗುರುದೇವ ದತ್ತ ಸಂಸ್ಥಾನದ ವತಿಯಿಂದ ಸ್ವ-ಸಹಾಯ ಸಂಘಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಪ್ರಾರಂಭಿಸಲಾಗಿದೆ. ಡಾ। ರಾಜೇಂದ್ರ ಕುಮಾರ್ ನೇತೃತ್ವದಲ್ಲಿ ನವೋದಯ ಸ್ವ-ಸಹಾಯ ಸಂಘಗಳು ಪ್ರಾರಂಭವಾಗಿದೆ.

ಅಭಿವೃದ್ಧಿ ಒಂದು ವಿಶೇಷ ಅನುಭವ ಬಣ್ಣಿಸಲಾಗದ ಸಂತೋಷ. ಅದೊಂದು ಸಂಪೂರ್ಣ ಗುಣಾತ್ಮಕ ಬದಲಾವಣೆ ನಿರಂತರ ಅಭಿವೃದ್ಧಿಗೆ ಸಂಬಂಧಿಸಿದ ಜಗತ್ತಿನಾದ್ಯಂತ ಸಾಕಷ್ಟು ಸಂಶೋಧನೆಗಳು, ಮಾದರಿ ಅನುಷ್ಠಾನಗಳು ನಡೆದಿವೆ. ಆದರೆ ಕರ್ನಾಟಕದ ದ.ಕ. ಜಿಲ್ಲೆಯ ಬೆಳ್ತಂಗಡಿ ಮತ್ತು ಮಂಗಳೂರು ತಾಲೂಕುಗಳಲ್ಲಿ ಹಾಗೂ ರಾಜ್ಯದ ಇತರ ಪ್ರದೇಶಗಳಲ್ಲಿ ಈ ಗ್ರಾಮಾಭಿವೃದ್ಧಿ ಯೋಜನೆ, ಜಾಗತೀಕರಣದ ಹಿಡಿತದಿಂದ ಮುಕ್ತಿಗೊಳಿಸಲು ಸಹಕರಿಯಾಗಿದೆ. ಗ್ರಾಮಾಭಿವೃದ್ಧಿ ಹುಟ್ಟುವ ಹಿಂದೆ ನೋವಿನ ಮಿಡಿತವಿದೆ. ಎದೆಯೊಳಗೆ ನೋವು ತುಂಬಿಕೊಂಡು ಆಕ್ರಂದದ ಬದುಕು ಸಾಗಿಸುತ್ತಿದ್ದ ಲಕ್ಷಾಂತರ ಕುಟುಂಬಗಳಿಗೆ ಬೆಳಕು ನೀಡುವ ಛಲವಿತ್ತು. ಬಡವರ ಮುಖದಲ್ಲಿ ನಗು ಕಾಣದೆ ದೇಶ ಸಭಿಕ್ಷವಾಗಿರಲು ಸಾಧ್ಯವಿಲ್ಲ ಎನ್ನುವ ಮಾತನ್ನು ಗ್ರಾಮಾಭಿವೃದ್ಧಿ ಯೋಜನೆಯ ಸ್ವ-ಸಹಾಯ ಸಂಘ ಮಾಡಿ ತೋರಿಸಿದೆ.

ಸ್ವ-ಸಹಾಯ ಗುಂಪಿನ ಅನೇಕ ಸದಸ್ಯರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ನವೋದಯ ಸ್ವ-ಸಹಾಯ ಗುಂಪುಗಳ ಲಾಭವನ್ನು ಪಡೆಯುತ್ತಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ ಪ್ರಗತಿ ಬಂಧು, ಜ್ಞಾನ ವಿಕಾಸ ಕೇಂದ್ರ, ಸ್ವ-ಸಹಾಯ ಸಂಘ, ನಗರ ಅಭಿವೃದ್ಧಿ ಸಂಘಗಳು ನಡೆಯುತ್ತಿವೆ. ಬಡತನ ನಿರ್ಮೂಲನೆ ಆದ್ಯತೆಯ ಮೇರೆಗೆ ಸಾಲ ಸೌಲಭ್ಯಗಳನ್ನು ನೀಡಲಾಗುತ್ತದೆ.

ಕೃಷಿಯ ಅಭಿವೃದ್ಧಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮೇಳಗಳನ್ನು ನಡೆಸಿ, ಕೃಷಿಯ ಮಹತ್ವವನ್ನು ಜನರಿಗೆ ಈ ಸ್ವ-ಸಹಾಯ ಸಂಘಗಳ ಮೂಲಕ ತಲುಪಿಸಲಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನೆರವಿನಿಂದ ಹಳ್ಳಿಹಳ್ಳಿಗಳಲ್ಲೂ ಪವಾಡ ಸದೃಶ ಬದಲಾವಣೆಗಳಾದವು, ಹಸಿರುಡುಗೆ ಧರಿಸಿದ ಭೂರಮೆಗೆ ವಿಶಾಲ ಹಾಸಿನದುದ್ದಕ್ಕೂ ಕಂಗು, ತೆಂಗು, ರಬ್ಬರು ಕೃಷಿಗಳ ಪಚ್ಚೆ ರತ್ನವೇ ಧರೆಯನ್ನು ಅಲಂಕರಿಸಲು ಈ ಸ್ವ-ಸಹಾಯ ಸಂಘಗಳು ಪ್ರಮುಖ ಪಾತ್ರವಹಿಸಿದವು. ಈ ಸ್ವ-ಸಹಾಯ ಸಂಘಕ್ಕೆ ಸೇರುವ ಮೊದಲು ಅನೇಕ ಜನರು ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದರು. ಅವರನ್ನು ಮುಖ್ಯವಾಹಿನಿಗೆ ತರಲು ಮದ್ಯವರ್ಜನ ಶಿಬಿರಗಳನ್ನು ಏರ್ಪಡಿಸಿ ಅವರನ್ನು ಕುಡಿತದಿಂದ ಬಿಡುಗಡೆ ಮಾಡುವ ಪ್ರಯತ್ನ ಮಾಡಲಾಗಿದೆ. ದುಶ್ಚಟ ಮುಕ್ತ ಗ್ರಾಮ, ರಾಷ್ಟ್ರ ನಿರ್ಮಾಣ, ಈ ಸ್ವ-ಸಹಾಯ ಸಂಘಗಳ ಮೂಲಕ ಮಾಡಬೇಕಾಗಿದೆ. ಸರಕಾರ ಮದ್ಯಪಾನ ನಿಷೇಧಿಸಲು ಈ ಸ್ವ-ಸಹಾಯ ಸಂಘಗಳು ಪ್ರಯತ್ನಿಸಬೇಕಾಗಿದೆ. ಇದೀಗ ಅನೇಕ ಮಂದಿ ಸ್ವ-ಸಹಾಯ ಗುಂಪಿಗೆ ಸೇರಿದ ಸದಸ್ಯರು ಕುಡಿತ ಮುಕ್ತರಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ. ಸಾಕಷ್ಟು ಸಹಾಯ, ಸೌಲಭ್ಯಗಳನ್ನು ಎಲ್ಲಾ

ಕುಟುಂಬಗಳಿಗೂ ಸಮಾನವಾಗಿ ನೀಡಿದಾಗಲು ಅಸಮಾನತೆಯ ಕರಿನೆರಳು, ಇನ್ನೂ ಗೋಚರಿಸುವುದನ್ನು ಹೋಗಲಾಡಿಸಲು ಈ ಸ್ವ-ಸಹಾಯ ಗುಂಪುಗಳು ಪ್ರಯತ್ನಿಸುತ್ತಿವೆ.

ಬಡತನ ನಿರ್ಮೂಲನೆಗೆ ಗ್ರಾಮೀಣ ಜನರಿಗೆ ಉಚಿತ ಊಟ, ವಸತಿ ಮತ್ತು ಉಚಿತ ತರಬೇತಿ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಸಿರಿ ಗ್ರಾಮೋದ್ಯೋಗ ಸಂಸ್ಥೆಯನ್ನು ಪ್ರಾರಂಭಿಸಲಾಗಿ ಇಲ್ಲಿ ಅವಿದ್ಯಾವಂತ, ನಿರುದ್ಯೋಗಿ ಗ್ರಾಮೀಣ ಬಡಜನರಿಗೆ ಕೃಷಿ ತರಬೇತಿ, ಸಾವಯವ ಕೃಷಿ, ಹೈನುಗಾರಿಕೆ, ಟೈಲರಿಂಗ್, ಮಲ್ಲಿಗೆ ಕೃಷಿ, ರಬ್ಬರ್ ಕೃಷಿ, ಸ್ವ-ಉದ್ಯೋಗ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗಿದೆ. ಇಧರ ಲಾಭವನ್ನು ಸ್ವ-ಸಹಾಯ ಸಂಘದ ಅನೇಕ ಸದಸ್ಯರು ಪಡೆದು ಗ್ರಾಮೀಣ ಪ್ರದೇಶದ ನಿರುದ್ಯೋಗ ಸ್ವಲ್ಪ ಮಟ್ಟಿಗೆ ನಿವಾರಿಸಲು ಸಹಕಾರಿಯಾಗಿದೆ.

ಬದಲಾವಣೆಯೇ ಸಾಧ್ಯವಿಲ್ಲ ಎಂಬ ನಂಬಿಕೆಯನ್ನು ಹುಸಿಗೊಳಿಸಿ ಬದಲಾವಣೆಯ ಪರಿವರ್ತನೆಯ ಸಮ್ಮೋಹನ ಅಸ್ತ್ರ ದಕ್ಷಿಣ ಕನ್ನಡದ ಕುಗ್ರಾಮಗಳಲ್ಲಿ ಕಳೆದ ಎರಡು ದಶಕಗಳಿಂದಲೂ ಬೀಸುತ್ತಿದೆ. ರಾಷ್ಟ್ರಪಿತ ಮಹಾತ್ಮಗಾಂಧೀಜಿ ಪರಿಕಲ್ಪನೆಯನ್ನು ಗ್ರಾಮ ಸ್ವ-ರಾಜ್ಯಗಳ ನಿರ್ಮಾಣ ಕೇವಲ ಗಾಂಧೀಜಿಯ ಕಲ್ಪನೆಗಳಾಗೇ ಉಳಿದುಬಿಟ್ಟಿವೆ ಎಂಬ ನಿರಾಶೆಗೆ, ಧರ್ಮಸ್ಥಳದ ಗ್ರಾಮಾಭಿವೃದ್ಧಿ ಮತ್ತು ನವೋದಯ ಸ್ವ-ಸಹಾಯ ಯೋಜನೆಗಳು ಸ್ವಲ್ಪ ಮಟ್ಟಿಗೆ ಪ್ರಯತ್ನಿಸಿವೆ.

ಉಪಸಂಹಾರ

ಭಾರತದಂತಹ ಬೆಳೆಯುತ್ತಿರುವ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಗ್ರಾಮೀಣ ಅಭಿವೃದ್ಧಿ ಪ್ರಮುಖವಾದ ಕ್ಷೇತ್ರವಾಗಿದೆ. ಗ್ರಾಮೀಣ ಅಭಿವೃದ್ಧಿಯೆಂದರೆ, ಗ್ರಾಮೀಣ ಪ್ರದೇಶದ ಹಿಂದುಳಿದ ಬಡಜನರ ಜೀವನ ಮಟ್ಟ ಸುಧಾರಣೆ, ಜೀವನ ಮಟ್ಟದ ಸುಧಾರಣೆಯು ಉದ್ಯೋಗ, ಆದಾಯ ಹೆಚ್ಚಳದಿಂದ ಸಾಧಿಸಬಹುದಾದರೂ ಇದೊಂದು ಸಮಗ್ರ ಕ್ರಿಯೆ. ಕೇವಲ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ಪ್ರಯತ್ನದಿಂದ ಮಾತ್ರ ಸಾಧ್ಯವಿಲ್ಲದ ಸಂಗತಿ. ಹಿಂದುಳಿದ ಬಡಸಮುದಾಯವೇ ಪರಿಸ್ಥಿತಿಯನ್ನು ಅರಿತು ಮುಂದುವರಿಯಲು ಪ್ರಯತ್ನಿಸಲು ಸಫಲರಾಗಬೇಕು. ಆದ್ದರಿಂದ ಹೊರಗಿನ ಸಂಸ್ಥೆಗಳ ಕಾರ್ಯಕ್ರಮದ ಮೂಲ ಉದ್ದೇಶವು ಜನರ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಆಗಿರಬೇಕು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಈ ನಿಟ್ಟಿನಲ್ಲಿ ಒಂದು ಮಾದರಿಯಾಗಿದೆ. ಗ್ರಾಮೀಣ ಜನರನ್ನು

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವತ್ತ, ಸಬಲರನ್ನಾಗಿ ಮಾಡುವ ತಂತ್ರ ದೂರದೃಷ್ಟಿಯಿಂದ ಹೆಚ್ಚು ಸೂಕ್ತವಾಗಿದೆ. ಗ್ರಾಮೀಣ ಜನರನ್ನು ಸಂಘಟನೆ, ಸಹಕಾರ, ಶಿಕ್ಷಣ, ತರಬೇತಿ, ಸ್ವಾವಲಂಬನೆ, ಮಾಡಲು ಈ ಸ್ವ-ಸಹಾಯ ಸಂಘಗಳು ಸಫಲವಾಗಿವೆ. ಬೆಳ್ತಂಗಡಿ ತಾಲೂಕಿನಲ್ಲಿ ಪ್ರಾರಂಭವಾದ ಯೋಜನೆ ಈಗ ಕರ್ನಾಟಕದಾದ್ಯಂತ ವಿಸ್ತರಣೆಗೊಂಡಿದೆ. ಈ ಯೋಜನೆಯ ಚಟುವಟಿಕೆ ವಿವಿಧ ಕ್ಷೇತ್ರಗಳಲ್ಲಿ ವಿಸ್ತರಣೆಗೊಂಡು ಬಡತನ ರೇಖೆಗಿಂತ ಕೆಳಗಿರುವ ಜನರನ್ನು ಮೇಲೆತ್ತುವ, ಸಣ್ಣ, ಅತೀ ಸಣ್ಣ, ರೈತರು ನಿರುದ್ಯೋಗಿಗಳು, ಅನಕ್ಷರಸ್ಥರು, ಮಹಿಳೆಯರು ನಗರ ಸಮುದಾಯದ ಅಭಿವೃದ್ಧಿ, ಮೂಲಭೂತ ಸೌಕರ್ಯದ ಅಭಿವೃದ್ಧಿ ಹಾಗೂ ಉದ್ಯಮಶೀಲತೆಯ ಅಭಿವೃದ್ಧಿ ಕೌಶಲ್ಯಾಭಿವೃದ್ಧಿ ಆರೋಗ್ಯ, ಶಿಕ್ಷಣ, ಕ್ರೀಡೆ, ಹೀಗೆ ಅನೇಕ ಮಜಲುಗಳಲ್ಲಿ ಅಭಿವೃದ್ಧಿ ಹೊಂದಲು ಸ್ವ-ಸಹಾಯ ಸಂಘಗಳು ಇಂದು ಯಶಸ್ವಿಯಾಗಿವೆ.

ಸಲಹೆ ಸೂಚನೆಗಳು

ಗ್ರಾಮೀಣ ಬಡತನ ಮತ್ತು ನಿರುದ್ಯೋಗ ನಿವಾರಣೆಯಲ್ಲಿ ಸ್ವ-ಸಹಾಯ ಸಂಘಗಳು ಇನ್ನು ಅನೇಕ ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಅಭಿವೃದ್ಧಿ ಸಾಧಿಸುವಂತಾಗಬೇಕು. ಇನ್ನು ಅನೇಕ ಕುಗ್ರಾಮಗಳನ್ನು ಈ ಯೋಜನೆಯ ಲಾಭ ಸಮರ್ಪಕವಾಗಿ ನಡೆದಿಲ್ಲ. ಸರಕಾರದಿಂದ ದೊರಕುವ ಸೌಲಭ್ಯಗಳನ್ನು ಅನಕ್ಷರಸ್ಥ ಹಿಂದುಳಿದ ಬಡಜನರಿಗೆ ತಲುಪಿಸಲು ಈ ಸ್ವ-ಸಹಾಯ ಸಂಘಗಳ ಪ್ರಮುಖ ಪಾತ್ರವಹಿಸಬೇಕಾಗಿದೆ. ಗ್ರಾಮೀಣ ಭಾಗದಲ್ಲಿರುವ ಬಡತನಕ್ಕೆ ಮುಖ್ಯ ಕಾರಣ ನಿರುದ್ಯೋಗ ಮತ್ತು ದುಶ್ಚಟಗಳು ಇವುಗಳು ಹೋಗಲಾಡಿಸಿ ಸಂಪೂರ್ಣ ಮದ್ಯಮುಕ್ತ ಗ್ರಾಮವನ್ನಾಗಿ ಮಾಡಿ, ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಈ ಸ್ವ-ಸಹಾಯ ಸಂಘಗಳು ಸ್ವ-ಉದ್ಯೋಗ ಕೈಗೊಳ್ಳಲು ಸಹಕರಿಸಬೇಕಾಗಿದೆ.

ಸ್ವ-ಸಹಾಯ ಸಂಘಗಳು ಯೋಜನೆಗಳನ್ನು ರೂಪಿಸುವಾಗ ಅವುಗಳ ಅನುಷ್ಠಾನದ ಬಗ್ಗೆ ಕಾಳಜಿವಹಿಸಬೇಕಾಗಿದೆ. ಗ್ರಾಮೀಣ ಜನರ ಪಾಲ್ಗೊಳ್ಳುವಿಕೆ, ಸಹಭಾಗಿತ್ವಕ್ಕೆ ಮಹತ್ವವನ್ನು ಕೊಡುವುದರ ಜೊತೆಗೆ, ದಾನ, ಧರ್ಮ ನ್ಯಾಯ ನೀತಿಯಂತಹ ಮೌಲ್ಯಗಳನ್ನು ಸ್ವ-ಸಹಾಯ ಸಂಘದ ಸದಸ್ಯರು ಇನ್ನೂ ಉತ್ತಮವಾಗಿ ಬೆಳೆಸಿಕೊಳ್ಳಬೇಕಾಗಿದೆ. ಯೋಜನೆಗೆ ಹೂಡಿಕೆಯಾಗಿರುವ ಹಣವನ್ನು ಸರಿಯಾಗಿ ವಿನಿಯೋಗಿಸಿಕೊಂಡು ಸರಿಯಾದ ಫಲಿತಾಂಶವನ್ನು ಸರಿಯಾದ ಸಮಯದಲ್ಲಿ ತೆಗೆಯಲು ಸ್ವ-ಸಹಾಯ ಸಂಘಗಳು ಪ್ರಯತ್ನಿಸಬೇಕು. ಗ್ರಾಮೀಣ ಜನರಿಗೆ ನಾಯಕತ್ವದ ಗುಣ ತರಬೇತಿ ಶಿಬಿರ, ಆರೋಗ್ಯದ ಮಾಹಿತಿ, ಶೈಕ್ಷಣಿಕ ಮಾಹಿತಿ ಕೃಷಿ

ಮಾಹಿತಿಗಳನ್ನು ಬದಲಾದ ಸಮಯದಲ್ಲಿ ಗ್ರಾಮೀಣ ಜನತೆಗೆ ಮಾಹಿತಿಯನ್ನು ನೀಡುವ ಕಾರ್ಯವನ್ನು ಈ ಸ್ವ-ಸಹಾಯ ಸಂಘಗಳು ಮಾಡಬೇಕಾಗಿದೆ. ಅರ್ಹ ಫಲಾನುಭವಿಗಳನ್ನು ಗುರುತಿಸಿ ಅವರನ್ನು ಸಂಘಟನೆ ಮಾಡಿ ಅವರಿಗೆ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡಬೇಕು.

ಗ್ರಾಮೀಣ ಪ್ರದೇಶದಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಅದಕ್ಕಾಗಿ ಸ್ವ-ಸಹಾಯ ಸಂಘದ ಎಲ್ಲಾ ಸದಸ್ಯರು ಒಟ್ಟಾಗಿ ಅವರ ಗ್ರಾಮದಲ್ಲಿ ಇಂಗುಗುಂಡಿಗಳನ್ನು ನಿರ್ಮಿಸಿ ನೀರಿನ ಸಮಸ್ಯೆಯನ್ನು ಹೋಗಲಾಡಿಸಲು ಸ್ವ-ಸಹಾಯ ಸಂಘಗಳು ಪ್ರಯತ್ನಿಸಬೇಕು. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಮಲವಿರ್ಸಜನೆಗೆ ಸರಿಯಾದ ಶೌಚಾಲಯದ ವ್ಯವಸ್ಥೆಯ ಬಗ್ಗೆ ಜನರಿಗೆ ತಿಳುವಳಿಕೆ ಇಲ್ಲ. ಸುಲಭ ಶೌಚಾಲಯದ ಬಗ್ಗೆ ಜನರಿಗೆ ತಿಳುವಳಿಕೆ ನೀಡುವುದರ ಮೂಲಕ ಶೌಚಾಲಯದ ಮಹತ್ವನ್ನು ತಿಳಿಸಿಕೊಡಬೇಕಾಗಿದೆ. ಕೆಲವು ಸ್ವ-ಸಹಾಯ ಸಂಘಗಳಿಗೆ ಜಾತಿ ಪ್ರಾಮುಖ್ಯತೆ ಅಂದರೆ ಒಂದೇ ಜಾತಿಯವರು ಸೇರಿ ಸಂಘ ರಚಿಸಿಕೊಂಡಿದ್ದಾರೆ. ಇನ್ನು ಮುಂದೆ ಒಂದೇ ಜಾತಿಯವರ ಬದಲು ಇತರರನ್ನು ಸೇರಿ, ಜಾತಿ ಸಾಮರಸ್ಯವನ್ನು ಕಾಪಾಡಿಕೊಂಡು ಬರಲು ಸ್ವ-ಸಹಾಯ ಸಂಘಗಳು ಪ್ರಯತ್ನಿಸಬೇಕು. ಮಹಿಳೆಯರಿಗೆ ದೌರ್ಜನ್ಯಗಳು ಆದಾಗ ಅದನ್ನು ಒಗ್ಗಟ್ಟಿನಿಂದ ಪ್ರತಿಭಟಿಸಲು ಸ್ವ-ಸಹಾಯ ಸಂಘದ ಸದಸ್ಯರಿಗೆ ತಿಳಿಸುವ ಕಾರ್ಯವನ್ನು ಮಾಡಬೇಕಾಗಿದೆ. ಪ್ರತಿಭೆ ಎಂಬುದು ಯಾರ ಸೊತ್ತಲ್ಲ. ಪ್ರತಿಯೊಬ್ಬರಲ್ಲೂ ಪ್ರತಿಭೆ ಇರುತ್ತದೆ. ಗ್ರಾಮೀಣ ಪ್ರದೇಶದಲ್ಲಿರುವ ಸೂಪ್ತ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ಸರಿಯಾದ ತರಬೇತಿಯನ್ನು ನೀಡಿ, ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸ್ವ-ಸಹಾಯ ಸಂಘಗಳು ಪ್ರಯತ್ನಿಸಬೇಕು. ಇತ್ತೀಚೆಗೆ ಅಭಿವೃದ್ಧಿಯ ಪರಿಕಲ್ಪನೆಗಳು ತುಂಬಾ ಬದಲಾಗುತ್ತಿವೆ. ನಮ್ಮ ಮಟ್ಟಿಗೆ ನಗರ ಕೇಂದ್ರಿತ ಅಭಿವೃದ್ದಿ ಮಾತ್ರ ಅಭಿವೃದ್ಧಿ ಅನಿಸಿಬಿಟ್ಟಿದೆ. ಇವೆಲ್ಲವೂ ಹಳ್ಳಿಯನ್ನು ನುಂಗುವ, ಇಲ್ಲಿನ ಹಳ್ಳಿಗಳು ಬಹು ಸಂಸ್ಕೃತಿಯನ್ನು ಕೊಚ್ಚಿಕೊಂಡು ಹೋಗುವ ಪರಿಕಲ್ಪನೆ, ಗ್ರಾಮೀಣ ಸಂಸ್ಕೃತಿಯನ್ನು ಉಳಿಸುವ ಕಾರ್ಯವನ್ನು ಸ್ವ-ಸಹಾಯ ಗುಂಪುಗಳು ಮಾಡಬೇಕಾಗಿದೆ.

ಪ್ರಶ್ನಾವಳಿ

೧. ಸ್ವ ಸಹಾಯ ಗುಂಪಿನ ಹೆಸರು:

೨. ಸ್ವ ಸಹಾಯ ಗುಂಪಿನ ಸದಸ್ಯನ ಹೆಸರು

೩. ವಯಸ್ಸು:

೪. ವಿದ್ಯಾರ್ಹತೆ:

೫. ವಿಳಾಸ:

೬. ಸ್ವ ಸಹಾಯ ಗುಂಪು ಇರುವ ಪ್ರದೇಶ:

೭. ಸ್ವ ಸಹಾಯ ಗುಂಪಿನಲ್ಲಿರುವ ಸದಸ್ಯರ ಸಂಖ್ಯೆ:

೮. ಸ್ವ ಸಹಾಯ ಗುಂಪಿನಲ್ಲಿರುವ ಮಹಿಳಾ ಸದಸ್ಯರ ಸಂಖ್ಯೆ:

೯. ಸ್ವ ಸಹಾಯ ಗುಂಪಿನಲ್ಲಿರುವ ಪುರುಷ ಸದಸ್ಯರ ಸಂಖ್ಯೆ:

೧೦. ಸ್ವ ಸಹಾಯ ಗುಂಪಿನಲ್ಲಿರುವ ಸೇರಿರುವ ಮುಖ್ಯ ಉದ್ದೇಶ

೧೧. ನೀವು ಎಷ್ಟು ವರುಷದಿಂದ ಸದಸ್ಯರಾಗಿದ್ದೀರಾ?

೧೨. ವಯೋಮಾನ ಮತ್ತು ವೈವಾಹಿಕ ಸ್ಥಾನಮಾನ

೧೮ರಿಂದ ೨೯ ☐ ೨೯ರಿಂದ ೩೯ ☐

೩೯ರಿಂದ ೪೯ ☐ ೪೯ರಿಂದ ೫೯ಕ್ಕೆ ಮೇಲ್ಪಟ್ಟು ☐

೧೩. ಸದಸ್ಯರ ವಾರ್ಷಿಕ ಆದಾಯ

೬,೦೦೦-೧೦,೦೦೦ ☐ ೧೦,೦೦೦-೧೫,೦೦೦ ☐

೧೫,೦೦೦-೨೦,೦೦೦ ☐ ೨೦,೦೦೦ಕ್ಕೆ ಮೇಲ್ಪಟ್ಟು ☐

೧೪. ನೀವು ವಾರಕ್ಕೆ ಎಷ್ಟು ರೂಪಾಯಿ ಉಳಿತಾಯ ಮಾಡುತ್ತೀರಿ.

೧೫. ನಿಮ್ಮ ಸ್ವ ಸಹಾಯ ಗುಂಪು ಯಾವ ಪ್ರದೇಶದಲ್ಲಿ ಇದೆ?

೧೬. ಸ್ವ ಸಹಾಯ ಗುಂಪಿನಲ್ಲಿರುವ ಮಹಿಳಾ ಸದಸ್ಯರ ಸಂಖ್ಯೆ?

೧೭. ಸ್ವ ಸಹಾಯ ಗುಂಪಿನ ಸದಸ್ಯರಾದುದರಿಂದ ಜೀವನ ಮಟ್ಟ ಸುಧಾರಿಸಿದೆಯೇ?

ಅತ್ಯುತ್ತಮ ☐ ಉತ್ತಮ ☐

ತೃಪ್ತಿಕರ ☐ ಉತ್ತಮವಾಗಿಲ್ಲ ☐

೧೮. ಸ್ವ ಸಹಾಯ ಗುಂಪಿನಿಂದ ಆದ ಪ್ರಯೋಜನ

ನಿರುದ್ಯೋಗ ನಿವಾರಣ ☐ ಬಡತನ ನಿವಾರಣೆ ☐

ಶಿಕ್ಷಣ ಮಟ್ಟ ಉತ್ತಮ ☐ ಆರ್ಥಿಕ ಮಟ್ಟ ಸುಧಾರಣೆ ☐

೧೯. ಸ್ವ ಸಹಾಯ ಸಂಘದಿಂದ ನೀವು ಯಾವ ಉದ್ದೇಶಕ್ಕೆ ಸಾಲ ಪಡೆದಿದ್ದೀರಿ?

ಶಿಕ್ಷಣ ☐ ಗೃಹ ನಿರ್ಮಾಣ ☐

ಕೃಷಿ ☐ ಸ್ವ ಉದ್ಯೋಗ ☐

೨೦. ಸ್ವ ಸಹಾಯ ಗುಂಪಿನ ಸಭೆ ನಡೆಯುವ ಸ್ಥಳ ಯಾವುದು?

೨೧. ಸ್ವ ಸಹಾಯ ಗುಂಪಿನ ಉಳಿತಾಯ ಖಾತೆ ಯಾವ ಬ್ಯಾಂಕಿನಲ್ಲಿದೆ?

೨೨. ನಿಮ್ಮ ಸ್ವ ಸಹಾಯ ಗುಂಪು ಮಾನ್ಯತೆಯನ್ನು ಪಡೆದಿದೆಯೇ?

ಹೌದು ☐ ಇಲ್ಲ ☐

೨೩. ಸ್ವ ಸಹಾಯ ಗುಂಪಿನ ವಾರ್ಷಿಕ ದಿನಾಚರಣೆ ಮಾಡುತ್ತೀರಾ?

ಹೌದು ☐ ಇಲ್ಲ ☐

೨೪. ನಿಮ್ಮ ಸ್ವ ಸಹಾಯ ಗುಂಪಿನಲ್ಲಿ ಮಹಿಳೆಯರ ಸ್ಥಿತಿಗತಿ ಚೆನ್ನಾಗಿದೆಯೇ?

ಹೌದು ☐ ಇಲ್ಲ ☐

೨೫. ಸ್ವ ಸಹಾಯ ಗುಂಪಿಗೆ ಸ್ವಂತ ಕಟ್ಟಡವಿದೆಯೇ?

ಹೌದು ☐ ಇಲ್ಲ ☐

೨೬. ಸ್ವ-ಸಹಾಯ ಗುಂಪು ನಿಮಗೆ ಉತ್ತೇಜನ ನೀಡಿದೆಯೇ?

ಹೌದು ☐ ಇಲ್ಲ ☐

೨೭. ಸ್ವ ಸಹಾಯ ಗುಂಪಿನಿಂದ ಸಾಲ ಪಡೆದಿದ್ದೀರಾ?

ಹೌದು ☐ ಇಲ್ಲ ☐

೨೮. ನೀವು ಪಡೆದ ಸಾಲಕ್ಕೆ ಕಡಿಮೆ ಬಡ್ಡಿ ನೀಡಲಾಗಿದೆಯೇ?

ಹೌದು ☐ ಇಲ್ಲ ☐

೨೯. ಸ್ವ ಸಹಾಯ ಗುಂಪಿನಿಂದ ನಿಮ್ಮ ಆರ್ಥಿಕ ಅಭಿವೃದ್ಧಿ ಆಗಿದೆಯೇ?

ಹೌದು ☐ ಇಲ್ಲ ☐

೩೦. ಸ್ವ ಸಹಾಯ ಗುಂಪಿನಿಂದಾಗಿ ಜೀವನಕ್ಕೆ ಆರ್ಥಿಕ ಭದ್ರತೆ ಒದಗಿದೆಯೇ?

ಹೌದು ☐ ಇಲ್ಲ ☐

೩೧. ಸ್ವ ಸಹಾಯ ಗುಂಪಿನಿಂದ ವೈದ್ಯಕೀಯ ಮತ್ತು ಶೈಕ್ಷಣಿಕ ಪ್ರಗತಿಯಾಗಿದೆಯೇ?

ಹೌದು ☐ ಇಲ್ಲ ☐

೩೨. ಸ್ವ ಸಹಾಯ ಗುಂಪಿನಲ್ಲಿ ಚರ್ಚಾ ಕೂಟ ನಡೆದಿದೆಯೇ?

ಹೌದು ☐ ಇಲ್ಲ ☐

೩೩. ಸ್ವ ಸಹಾಯ ಗುಂಪು ನಿಮ್ಮ ನೆಮ್ಮದಿಗೆ ಸಹಕಾರಿಯಾಗಿದೆಯೇ?

ಹೌದು ☐ ಇಲ್ಲ ☐

೩೪. ಸ್ವ ಸಹಾಯ ಗುಂಪಿನಿಂದ ಮುಂದೆ ನೆರವನ್ನು ಪಡೆಯಲು ಇಚ್ಛಿಸುತ್ತೀರಾ?

ಹೌದು ☐ ಇಲ್ಲ ☐

೩೫. ನೀವು ಯಾವುದಾದರೂ ಶ್ರಮದಾನ ಶಿಬಿರದಲ್ಲಿ ಭಾಗವಹಿಸಿದ್ದೀರಾ?

ಹೌದು ☐ ಇಲ್ಲ ☐

೩೬. ಸ್ವ ಸಹಾಯ ಗುಂಪುನಿಂದಾಗಿ ನಿಮ್ಮ ಬಡತನ ಸ್ವಲ್ಪ ಮಟ್ಟಿಗೆ ನಿವಾರಣೆ ಆಗಿದೆಯೇ?

ಹೌದು ☐ ಇಲ್ಲ ☐

೩೭. ಸ್ವ ಸಹಾಯ ಗುಂಪಿನಿಂದ ನಿರುದ್ಯೋಗ ನಿವಾರಣೆಗೆ ಯಾವುದಾದರೂ ತರಬೇತಿಯಲ್ಲಿ ಭಾಗವಹಿಸಿದ್ದೀರಾ?

ಹೌದು ☐ ಇಲ್ಲ ☐

೩೮. ಸ್ವ ಸಹಾಯ ಗುಂಪಿನಿಂದ ನಿಮ್ಮ ಜೀವನಕ್ಕೆ ಮುಂದೆ ಉತ್ತಮ ಭವಿಷ್ಯ ಇದೆಯೇ?

ಹೌದು ☐ ಇಲ್ಲ ☐

ಪರಾಮರ್ಶನ ಗ್ರಂಥಗಳು

೧. ಸಂಗ್ರಹ: ಪ್ರೊ. ಎಸ್. ಪ್ರಭಾಕರ್ (೨೦೦೮), ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಷಷ್ಠ್ಯಬ್ದ ಪೂರ್ತಿ ಅಭಿನಂದನ ಸಮಿತಿ.

೨. ಜೇರು ನೀಲಂ (೧೯೯೦), ಬಿಸಿನೆಸ್ ಮ್ಯಾನೇಜ್‌ಮೆಂಟ್, ಹಿಮಾಲಯ ಪಬ್ಲಿಷಿಂಗ್ ಹೌಸ್, ದೆಹಲಿ.

೩. ಕೆ. ಎ. ಅಶ್ವತ್ಥಪ್ಪ (೧೯೯೯), ಬಿಸಿನೆಸ್ ಎನ್ವಯರ್ನ್‌ಮೆಂಟ್, ಹಿಮಾಲಯ ಪಬ್ಲಿಷಿಂಗ್ ಹೌಸ್, ಮುಂಬೈ.

೪. ಬಿ. ಎಸ್. ರಾಮನ್ (೨೦೦೦), ಆರ್ಥಿಕ ಚಿಂತನಧಾರೆ, ಯುನೈಟೆಡ್ ಪಬ್ಲಿಷರ್ಸ್, ಮಂಗಳೂರು.

೫. ಸಂಪತ್ ಮುಖರ್ಜಿ (೨೦೧೦), ಮೊಡರ್ನ್ ಎಕನಾಮಿಕ್ ಥಿಯರಿ, ವೆಲ್ಲಿ ಇಫರ್ಟನ್ ಲಿಮಿಟೆಡ್, ನ್ಯೂ ಡೆಲ್ಲಿ.

೬. ಕೆ. ಡಿ. ಬಸವ, ಆಧುನಿಕ ಭಾರತದ ಆರ್ಥಿಕ ಅಭಿವೃದ್ಧಿ. ವಿದ್ಯಾವಾಹಿನಿ ಪ್ರಕಾಶನ, ಹುಬ್ಬಳ್ಳಿ.

೭. ಬೆಂಜಮಿನ್ ಹಿಗ್ಗಿನ್ಸ್ (೧೯೯೩), ಎಕನಾಮಿಕ್ಸ್ ಡೆವಲಪ್‌ಮೆಂಟ್, ಯುನಿವರ್ಸಲ್ ಬುಕ್ ಸ್ಟಾಲ್, ನ್ಯೂ ಡೆಲ್ಲಿ.

೮. ಮಿಶ್ರ ಆ್ಯಂಡ್ ಪುರಿ (೧೯೯೩), ಇಂಡಿಯನ್ ಇಕನಾಮಿಕ್ಸ್, ಹಿಮಾಲಯ ಪಬ್ಲಿಶರ್ಸ್, ನ್ಯೂ ಡೆಲ್ಲಿ.

೯. ಪ್ರಭಾಕರ ಶಿಶಿಲ (೨೦೧೦), ಆರ್ಥಿಕ ಅಭಿವೃದ್ಧಿ, ಮಂಗಳ ಪಬ್ಲಿಕೇಶನ್ಸ್, ಮಂಗಳೂರು.

೧೦. ಬಿ. ಎಸ್. ರಾಮನ್ (೨೦೦೩), ಮಾರುಕಟ್ಟೆ ನಿರ್ವಹಣೆ, ಯುನೈಟೆಡ್ ಪಬ್ಲಿಶರ್ಸ್, ಮಂಗಳೂರು.

೧೧. ಜಿ. ವಿ. ಜೋಷಿ ಮತ್ತು ಗಿರಿಯಪ್ಪ (೧೯೯೭), ಪ್ರೊಬ್ಲೆಮ್ ಆ್ಯಂಡ್ ಪ್ರೊಸ್ಪೆಕ್ಟ್ಸ್ ಆಫ್ ರೂರಲ್ ಬ್ಯಾಂಕಿಂಗ್ ಇನ್ ಇಂಡಿಯಾ, ಮಂಗಳೂರು ವಿಶ್ವವಿದ್ಯಾಲಯ ಪಬ್ಲಿಶರ್ಸ್, ಮಂಗಳೂರು.

೧೨. ಎಸ್. ಕೆ. ಡಿ. ಆರ್. ಡಿ. ಪಿ. ಇವ್ಯಾಲುವೇಶನ್ ರಿಪೋರ್ಟ್, ಸ್. ಅರ್. ಐ. ಎಸ್. ಐ. ಎಲ್., ೨೦೦೨.

೧೩. ಬೋಸ್ ಜೋಯೆಲ್ ಎಸ್. ಜಿ. ಆರ್. (೨೦೦೩), ಎನ್. ಜಿ. ಒ. ಇನ್ ರೂರಲ್ ಡೆವಲಪ್‌ಮೆಂಟ್ ಥಿಯರಿ ಆ್ಯಂಡ್ ಪ್ರಾಕ್ಟೀಸ್, ನ್ಯೂ ಡೆಲ್ಲಿ.

೧೪. ಕುಟಿನೊ ರೊನಲ್ಯಾಂಡ್ (೨೦೦೦), ಎ ಪವರ್ ಡೈರೆಕ್ಟರಿ ಆಫ್ ಎನ್. ಜಿ. ಒ. ಆಫ್ ದಕ್ಷಿಣ ಕನ್ನಡ ಆ್ಯಂಡ್ ಉಡುಪಿ ಡಿಸ್ಟ್ರಿಕ್ಟ್ಸ್, ಸಮನ್ವಯ ಪ್ರಕಾಶನ.

೧೫. ಗೀಷನ್ ಕೇತ್ (೧೯೮೧), ಗ್ರೋಥ್ ಆ್ಯಂಡ್ ಇಫೆಕ್ಟ್ ವೈಸ್ ಮೆನ್ ಆಫ್ ರೂರಲ್ ಏಶಿಯಾ, ವರ್ಲ್ಡ್ ಡೆವಲಪ್‌ಮೆಂಟ್.

೧೬. ಸಿಂಗ್ ಕತ್ತರ್ (೧೯೮೬), ರೂರಲ್ ಡೆವಲಪ್‌ಮೆಂಟ್, ಪ್ರಿನ್ಸಿಪಲ್ಸ್, ಪ್ರ್ಯಾಕ್ಟೀಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ಸೇಜ್ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ.

೧೭. ದಿನಪತ್ರಿಕೆಗಳು – ಉದಯವಾಣಿ, ಪ್ರಜಾವಾಣಿ, ವಿಜಯ ಕರ್ನಾಟಕ, ಡೆಕ್ಕನ್ ಹೆರಾಲ್ಡ್, ಎಕನಾಮಿಕ್ ಟೈಮ್ಸ್.